
ಸಂಪುಟ 23 ಸಂಚಿಕೆ 16
ಏಪ್ರಿಲ್ 22, 2001 ಬೆಲೆ ರೂ. 3.00

ದುಡಿವ ಜನರ ಪ್ರಾಣಮಿತ್ರ




ಮನ ಮುಟ್ಟದ 'ಹುಡುಗಿ'


ಕೇರಳ: ಗೆಲುವಿನ ನಿರ್ಣಾಯಕ ಹೋರಾಟದತ್ತ ಎಡರಂಗ



ಬೇಹುಗಾರಿಕೆ: ಚೀನಾ ಕ್ಷಮೆ ಕೋರಿದ ಅಮೆರಿಕಾ



ಹಾಸನ: ಬಡ್ಡಿ ಮಾಫಿಯಾ



ಸೋತ ಇಂದಿರಾ: ಕಾಂಗ್ರೆಸ್ ಧೂಳಿಪಟ

ಬ್ರಿಟಿಷ್ ಕಾಲದಲ್ಲಿ ಕಾಣದಿದ್ದಂಥ ಪತ್ರಿಕಾ ನಿರ್ಬಂಧಗಳು ಜಾರಿಗೆ ಬಂದವು. 1930 ರ ಚಳುವಳಿಯ ಸಂದರ್ಭದಲ್ಲಿ ಬ್ರಿಟಿಷ್ ರಾಜ್ ಪತ್ರಿಕೆಗಳ ಬಾಯಿ ಮುಚ್ಚಿಸಿತ್ತು. ಆದರೆ ಅದು ಸಂಪಾದಕೀಯಗಳು ಮತ್ತು ರಾಜಕೀಯ ಲೇಖನಗಳಿಗೆ ಮಾತ್ರ ಸಂಬಂಧಿಸಿತ್ತು. ಮುಖಂಡರ ಬಂಧನ, ಲಾಠಿ ಪ್ರಹಾರ, ಸೇನೆ ಸಿಬ್ಬಂದಿ ನಡೆಸಿದ ಗೋಲೀಬಾರ್, ರ್‍ಯಾಲಿಗಳು, ಸಭೆಗಳ ವರದಿಗಳು ಪ್ರಕಟವಾಗಲು ನಿರ್ಬಂಧ ಇರಲಿಲ್ಲ. ಆದರೆ ಇಂದಿರಾಗಾಂಧಿ ಜನತೆಯ ತಿಳಿದುಕೊಳ್ಳುವ ಆ ಮೂಲಭೂತ ಹಕ್ಕಿಗೂ ಕತ್ತರಿ ಹಾಕಿದರು. ರವೀಂದ್ರನಾಥ ಟಾಗೋರ್ ಕೂಡ ಕಾಕದೃಷ್ಟಿಯಿಂದ ಹೊರತಾಗಲಿಲ್ಲ. ಅವರ ಹಾಡುಗಳು ಮತ್ತು ಉಕ್ತಿಗಳನ್ನು ಸೆನ್ಸಾರ್ ಮಾಡಲಾಯಿತು.

ಮಾರ್ಕ್ಸ್, ಎಂಗೆಲ್ಸ್ ಮತ್ತು ಲೆನಿನ್‌ರ ಬರಹಗಳನ್ನು ಯಾವುದೇ ರೂಪದಲ್ಲಿಯೂ ಬಳಸುವುದನ್ನು ನಿಷೇಧಿಸಲಾಯಿತು.

ಇಂದಿರಾಗಾಂಧಿಗೆ ಬಹುಪರಾಕು ಹೇಳುವ ಲೇಖನಗಳನ್ನು ಬರೆಯುವಂತೆ ಉನ್ನತ ಪತ್ರಕರ್ತರ ಮೇಲೆ ಒತ್ತಡ ಹೇರಲಾಯಿತು. ಈ ದಿನಗಳಲ್ಲೇ ಕುಖ್ಯಾತವಾದ ಸಂವಿಧಾನದ 42 ನೇ ತಿದ್ದುಪಡಿ ಜಾರಿಗೆ ಬಂತು.

ಇಂದಿರಾಗಾಂಧಿಯ 20 ಅಂಶ ಕಾರ್ಯಕ್ರಮದ ಬಗ್ಗೆ ಸರಕಾರ ಎಷ್ಟೇ ಶಂಖ ಊದಿದರೂ ಜನರು ಅದರ ಬಗ್ಗೆ ಮರುಳಾಗಲಿಲ್ಲ. ಸಾಮ್ರಾಜ್ಯಶಾಹಿ ವಿರೋಧಿ ಘೋಷಣೆಗಳನ್ನು ನೀಡಿದರೂ ಸರಕಾರದ ಕೃತ್ಯಗಳು ಅದಕ್ಕೆ ತಾಳೆಯಾಗುತ್ತಿರಲಿಲ್ಲ. ಅಮೆರಿಕ ಮತ್ತು ಇತರ ಬಂಡವಾಳಶಾಹಿ ದೇಶಗಳ ಬಹುರಾಷ್ಟ್ರೀಯ ಕಂಪನಿಗಳಿಗೆ ಅನೇಕ ಪ್ರಕರಣಗಳಲ್ಲಿ ಅನಗತ್ಯ ಔದಾರ್ಯ ತೋರಲಾಯಿತು. ಕೃಷಿ ಸಾಧ್ಯ ಸಲಕರಣೆಗಳ ಬೆಲೆಗಳು ದಿನದಿಂದ ದಿನಕ್ಕೆ ಏರುತ್ತಿದ್ದುದರಿಂದ ರೈತರು ಸಂಕಷ್ಟಕ್ಕೆ ಒಳಗಾದರು.

ಇನ್ನೊಂದೆಡೆ ದೊಡ್ಡ ವ್ಯಾಪಾರೋದ್ಯಮಿಗಳಿಗೆ ಮುಕ್ತ ಅವಕಾಶಗಳನ್ನು ಕಲ್ಪಿಸಲಾಯಿತು. ಎಲ್ಲ ಅನುಕೂಲ ಮಾಡಿಕೊಡಲಾಯಿತು. ರಾಷ್ಟ್ರೀಕರಣದಿಂದಾಗಿ ವ್ಯಾಪಾರಿ ವಲಯ ಯಾವುದೇ ರೀತಿಯ ಭಯ ಪಡಬೇಕಾಗಿಲ್ಲ ಎಂದು ಸರ್ಕಾರ ಅಭಯ ಹಸ್ತ ನೀಡಿತು. ಬಿರ್ಲಾಗಳ ವಿರುದ್ಧದ ಎಲ್ಲ ಮೊಕ್ಕದಮೆಗಳನ್ನು ಸರ್ಕಾರ ವಾಪಸ್ ಪಡೆಯಿತು. ಗ್ರಾಹಕ ವಸ್ತು ಕ್ಷೇತ್ರದಲ್ಲಿ ಖಾಸಗಿಯವರು ಬಂಡವಾಳ ಹೂಡಿಕೆ ನಿರ್ಬಂಧವನ್ನು ತೆಗೆದು ಹಾಕುವುದೇ ಸಮಸ್ಯೆಗೆ ಪರಿಹಾರ ಎಂದು ಸರ್ಕಾರ ಹೇಳಿತು.

ಆದರೆ ಜನಸಮೂಹದ ದನಿಯಲ್ಲಿ ನಾವಿಟ್ಟ ವಿಶ್ವಾಸವನ್ನು ನಾವು ಕಳೆದುಕೊಳ್ಳಲಿಲ್ಲ. ಜನರು ಬಂಡೇಳುವ ದಿನ ಬಂದೇ ಬರುತ್ತದೆಂದು ನಮಗೆ ಗೊತ್ತಿತ್ತು. ಜನತೆಯ ಒತ್ತಡದಿಂದಾಗಿ ಇಂದಿರಾಗಾಂಧಿ 1977 ರ ಜನವರಿಯಲ್ಲಿ ಲೋಕಸಭೆ ಚುನಾವಣೆಯನ್ನು ಘೋಷಿಸಿದರು.

ಚುನಾವಣೆ ಘೋಷಣೆ

ಜನವರಿ 18, 1977 ಮಂಗಳವಾರ ರಾತ್ರಿ 8.30 ಕ್ಕೆ ಇಂದಿರಾಗಾಂಧಿ ಆಕಾಶವಾಣಿ ಭಾಷಣದಲ್ಲಿ ಲೋಕಸಭೆ ಚುನಾವಣೆ ಘೋಷಿಸಿದರು. ಮರುದಿನ, ರಾಷ್ಟ್ರಪತಿ ಫಕ್ರುದ್ದಿನ್ ಆಲಿ ಅಹಮದ್ ಲೋಕಸಭೆಯನ್ನು ವಿಸರ್ಜಿಸಿ ಮಾರ್ಚ್‌ನಲ್ಲಿ ನಡೆಯುವ ಚುನಾವಣೆ ಬಗ್ಗೆ ಪ್ರಕಟಣೆ ಹೊರಡಿಸಿದರು.

ಇಂದಿರಾಗಾಂಧಿ ಸಂವಿಧಾನದ 42ನೇ ತಿದ್ದುಪಡಿ ಮೂಲಕ ಲೋಕಸಭೆಯ ಅವಧಿಯನ್ನು ಐದು ವರ್ಷದಿಂದ ಆರು ವರ್ಷಕ್ಕೆ ಹೆಚ್ಚಿಸಿದರು. ಅದರ ಪ್ರಕಾರ 1978 ರ ಮುಂಚೆ ಚುನಾವಣೆ ನಡೆಯಬೇಕಿರಲಿಲ್ಲ. ಆದರೆ, ಬಹುಶಃ ಇಂದಿರಾಗಾಂಧಿ ಚುನಾವಣೆಯನ್ನು ಘೋಷಿಸುವಾಗ ಛಿದ್ರವಾಗಿರುವ ಪ್ರತಿಪಕ್ಷಗಳನ್ನು ನಾಮಾವಶೇಷ ಮಾಡಬಹುದು ಎಂದು ಭಾವಿಸಿದ್ದರು. ಪ್ರತಿಪಕ್ಷಗಳು ಒಗ್ಗಟ್ಟಾಗಲು ಸ್ವಲ್ಪ ಸಮಯ ತಗಲುತ್ತದೆ ಎಂಬ ಎಣಿಕೆ ಮೇಲೆ ಅವರು ಈ ರೀತಿ ಯೋಜಿಸಿದ್ದರು.

ಆದರೆ ಜನವರಿ 20 ರಂದು ಸಂಸ್ಥಾ ಕಾಂಗ್ರೆಸ್, ಭಾರತೀಯ ಲೋಕದಳ, ಸೋಷಲಿಸ್ಟ್ ಪಕ್ಷ ಮತ್ತು ಜನಸಂಘ ವಿಲೀನವಾಗಿ ಒಗ್ಗಟ್ಟಿನಿಂದ ಕಾಂಗ್ರೆಸ್ ವಿರುದ್ಧ ಹೋರಾಡಲು **ಜನತಾಪಕ್ಷ** ಉದಯವಾಯಿತು. ಮುಖ್ಯವಾಗಿ ಜಯಪ್ರಕಾಶ್ ನಾರಾಯಣರ ಪರಿಶ್ರಮದಿಂದಾಗಿ ಇದು ಸಾಧ್ಯವಾಯಿತು.

ಜನತಾ ಪಕ್ಷದೊಂದಿಗೆ ಸ್ಥಾನ ಹೊಂದಾಣಿಕೆ ಮಾಡಿಕೊಳ್ಳಲು ನಮ್ಮ ಪಕ್ಷ ನಿರ್ಧರಿಸಿತು. ಹೊಸ ಪಕ್ಷದಲ್ಲಿ ಕೆಲವು ತೀವ್ರ ಬಲಪಂಥೀಯ ಪಕ್ಷಗಳು ಇವೆ ಎಂಬುದು ಗೊತ್ತಿದ್ದೂ ನಾವು ಹೀಗೆ ಮಾಡಿದೆವು. ಯಾಕೆಂದರೆ ಕಾಂಗ್ರೆಸ್‌ನ್ನು ಅಧಿಕಾರದಿಂದ ಕೆಳಗಿಳಿಸುವುದು ಆಗಿನ ಅಗತ್ಯವಾಗಿತ್ತು. ಸರ್ವಾಧಿಕಾರಕ್ಕೆ ಇತಿಶ್ರೀ ಹಾಡುವುದು ನಮ್ಮ ಆದ್ಯತೆಯಾಗಿತ್ತು.

ಬಲಗೊಂಡ ಪ್ರತಿಪಕ್ಷ

ವಾಸ್ತವವಾಗಿ, ಚುನಾವಣೆ ಸಮೀಪಿಸುತ್ತಿದ್ದಂತೆ ಜೆ.ಬಿ. ಕೃಪಲಾನಿ ಮತ್ತು ವಿಜಯಲಕ್ಷ್ಮಿ ಪಂಡಿತರಂಥ ಹಿರಿಯ ಕಾಂಗ್ರೆಸ್ಸಿಗರು ಕಾಂಗ್ರೆಸ್ ತೊರೆದು ಪ್ರತಿಪಕ್ಷಗಳಿಗೆ ಬೆಂಬಲ ನೀಡಿದರು. ಹಿರಿಯ ಕೇಂದ್ರ ಸಚಿವ ಜಗಜೀವನರಾಮ್ ಫೆಬ್ರವರಿ 2 ರಂದು ಪಕ್ಷ ಮತ್ತು ಸಚಿವ ಸಂಪುಟಕ್ಕೆ ರಾಜಿನಾಮೆ ಕೊಟ್ಟು ತಮ್ಮದೇ ಪ್ರಜಾಪ್ರಭುತ್ವಕ್ಕಾಗಿ ಕಾಂಗ್ರೆಸ್(ಸಿಎಫ್‌ಡಿ) ಪಕ್ಷವನ್ನು ರಚಿಸಿದರು. ಅವರ ಪಕ್ಷ ಜನತಾಪಕ್ಷದ ಜತೆ ಸ್ಥಾನ ಹೊಂದಾಣಿಕೆ ಮಾಡಿಕೊಂಡರೂ ಜನತಾ ಪಕ್ಷದ ಚಿಹ್ನೆಯ ಮೇಲೆಯೇ ಸ್ಪರ್ಧಿಸಿತು.

ಪಶ್ಚಿಮ ಬಂಗಾಳದಲ್ಲಿ ನಾವು ಹೊಸ ಪಕ್ಷದೊಂದಿಗೆ ಸ್ಥಾನ ಹೊಂದಾಣಿಕೆ ಮಾಡಿಕೊಂಡರೂ ಸಿಪಿಐ ಮಾತ್ರ ಕಾಂಗ್ರೆಸ್ ಜತೆ ಸಂಬಂಧ ಮುಂದುವರಿಸಿತು. 20 ಕ್ಷೇತ್ರಗಳಲ್ಲಿ ಸ್ಪರ್ಧಿಸಲು ನಾವು ನಿರ್ಧರಿಸಿದೆವು. ಫಾರ್ವರ್ಡ್ ಬ್ಲಾಕ್ 3, ಆರೆಸ್ಪಿ 3, ಜನತಾಪಕ್ಷ 12 ಮತ್ತು ಸಿಎಫ್‌ಡಿ 3 ಕ್ಷೇತ್ರಗಳಲ್ಲಿ ಕಣಕ್ಕಿಳಿದವು. ಒಂದು ಕ್ಷೇತ್ರದಲ್ಲಿ ಪಕ್ಷೇತರ ಅಭ್ಯರ್ಥಿಯನ್ನು ಬೆಂಬಲಿಸಿದೆವು. ಸಾರ್ವತ್ರಿಕ ಹಾಗೂ ಕಾರ್ಮಿಕ ವರ್ಗದ ಹಿತವನ್ನು ಗಮನದಲ್ಲಿಟ್ಟುಕೊಂಡು ಸರ್ವಸಮ್ಮತಿ ಸೂತ್ರದನ್ವಯ ನಮ್ಮ ಕೆಲವು ಸ್ಥಾನಗಳನ್ನು ನಾವು ಹೊಸ ಮಿತ್ರರಿಗೆ ಬಿಟ್ಟುಕೊಟ್ಟೆವು.

1977 ಮಾರ್ಚ್ 16 ರಂದು ಚುನಾವಣೆ ನಡೆಯಬೇಕಿತ್ತು.

ಚುನಾವಣೆಗಳಿಗೆ ಮುಂಚೆ ತುರ್ತುಪರಿಸ್ಥಿತಿ ಸ್ವಲ್ಪ ತಣ್ಣಗಾಗಿತ್ತು. ಆದರೆ ವಾತಾವರಣ ಪೂರ್ಣ ಶಾಂತವಾಗಿತ್ತು ಎನ್ನುವುದು ಇದರ ಅರ್ಥವಲ್ಲ. ಪಶ್ಚಿಮ ಬಂಗಾಳದಲ್ಲಿ ಚುನಾವಣೆ ತಯಾರಿ ನಡೆಸಲು ಸಿಪಿಐ(ಎಂ) ಪ್ರವೇಶಿಸಲೂ ಆಗದಂಥ ಅನೇಕ ಸ್ಥಳಗಳಿದ್ದವು ಹಾಗೂ ಅನೇಕ ಕಡೆಗಳಲ್ಲಿ ನಮ್ಮ ರ್‍ಯಾಲಿಗಳ ಮೇಲೆ ದಾಳಿಗಳು ನಡೆದವು. ಜಾದವ್ ಪುರ ಕ್ಷೇತ್ರದ ಜನತಾಪಕ್ಷದ ಹುರಿಯಾಳು ಕಾಂಗ್ರೆಸ್ಸಿಗರ ದಾಳಿಯಿಂದ ಗಂಭೀರವಾಗಿ ಗಾಯಗೊಂಡರು. ಅನೇಕ ಕಡೆಗಳಲ್ಲಿ ಅಪಾರ ಪ್ರಮಾಣದಲ್ಲಿ ಖೊಟ್ಟಿ ಮತಪತ್ರಗಳು ಸಿಕ್ಕವು. ಮುಖ್ಯ ಚುನಾವಣೆ ಅಧಿಕಾರಿ ರತಿನ್‌ಸೇನ್ ಗುಪ್ತಾ ಅದಕ್ಕೆ ಸರಿಯಾದ ವಿವರಣೆ ನೀಡುವುದಕ್ಕೆ ವಿಫಲರಾದರು. ಚುನಾವಣೆಗಳಲ್ಲಿ ಮತ್ತೆ ಅಕ್ರಮ ನಡೆಸುವ ಉದ್ದೇಶ ಹೊಂದಿದ್ದ ಕಾಂಗ್ರೆಸ್‌ನ ಕೈವಾಡ ಇದರಲ್ಲಿತ್ತು.

ಆದರೆ ಅದರ ಹುನ್ನಾರ ವಿಫಲವಾಯಿತು. ಕಾಂಗ್ರೆಸ್‌ನ ಅಂತ್ಯ ಸಮೀಪಿಸುತ್ತಿದ್ದುದು ಸ್ಪಷ್ಟವಾಗಿತ್ತು. ಸ್ವತಃ ಇಂದಿರಾಗಾಂಧಿಯೇ ಸೋತು ಹೋದರು. ರಾಯಬರೇಲಿಯಲ್ಲಿ ಇಂದಿರಾರನ್ನು ಜನತಾಪಕ್ಷದ ರಾಜನಾರಾಯಣ 55,000 ಕ್ಕೂ ಹೆಚ್ಚು ಮತಗಳ ಅಂತರದಿಂದ ಸೋಲಿಸಿದರು. ಆಕೆಯ ಪುತ್ರ ಸಂಜಯಗಾಂಧಿ ಅಮೇಥಿ ಕ್ಷೇತ್ರದಲ್ಲಿ ಮುಖಭಂಗ ಅನುಭವಿಸಿದರು. ಸಂಜಯ್ ಪರಾಭವಗೊಂಡಿದ್ದು ಮುಕ್ಕಾಲು ಲಕ್ಷ ಮತಗಳ ಅಂತರದಿಂದ. ಹಲವು ಮಂತ್ರಿಗಳೂ ಸೋತರು. ಕಾಂಗ್ರೆಸ್ ಧೂಳೀಪಟವಾಯಿತು. ಎಲ್ಲಕ್ಕಿಂತ ಮುಖ್ಯವಾಗಿ ಮೂರು ದಶಕಗಳ ಕಾಂಗ್ರೆಸ್ಸಿನ ಏಕಪಕ್ಷ ಆಡಳಿತ ಕೊನೆಗೊಂಡಿತು.

ಜನತಾಪಕ್ಷ ಮತ್ತು ಅದರ ಮಿತ್ರಕೂಟಕ್ಕೆ ಸ್ಪಷ್ಟ ಬಹುಮತ ದೊರೆಯಿತು. ಸ್ವಾತಂತ್ರ್ಯಾನಂತರ ಕೇಂದ್ರದಲ್ಲಿ ಮೊದಲಬಾರಿಗೆ ಕಾಂಗ್ರೆಸ್ ಸರ್ಕಾರ ರಚನೆಯಾಯಿತು. 1977 ಮಾರ್ಚ್ 24 ರ ಸಂಜೆ ಜನತಾಪಕ್ಷ ನೇತಾರ ಮೊರಾರ್ಜಿ ದೇಸಾಯಿ ಪ್ರಧಾನಿಯಾಗಿ ಅಧಿಕಾರ ಸ್ವೀಕರಿಸಿದರು. ಎಲ್ಲ ಕರಾಳ ಕಾನೂನುಗಳನ್ನು ವಾಪಸ್ ಪಡೆಯಲಾಯಿತು. ತುರ್ತು ಪರಿಸ್ಥಿತಿಯನ್ನು ತೆಗೆಯಲಾಯಿತು. ಜನರು ಗೆದರು. ಸರ್ವಾಧಿಕಾರ ಸೋತಿತು. ಭಾರತದಲ್ಲಿ ಇತಿಹಾಸದ ಒಂದು ಹೊಸ ಯುಗ ಆರಂಭವಾಯಿತು.

ಎ.ಕೆ.ಜಿ. ನಿಧನ

ಮಾರ್ಚ್ 21 ರಂದು ನಮ್ಮ ಪಕ್ಷದ ಮುಖಂಡ ಎ.ಕೆ.ಗೋಪಾಲನ್ ನಿಧನರಾಗಿದ್ದು ನಮ್ಮೆಲ್ಲರನ್ನು ಆಘಾತಗೊಳಿಸಿತು. ಅವರು ದೀರ್ಘಕಾಲದಿಂದ ಅಸ್ವಸ್ಥರಾಗಿದ್ದರು. ಅವರ ನಿಧನ ನಮಗೆ ಭಾರಿ ದೊಡ್ಡ ನಷ್ಟ. ಸತತ ಆಡಳಿತ ನಡೆಸಿದ ಕಾಂಗ್ರೆಸ್ ಸರ್ಕಾರಗಳ ದುರಾಡಳಿತ ವಿರುದ್ಧ ನಡೆದ ಹೋರಾಟಗಳಲ್ಲಿ ಕಾಂ. ಎ.ಕೆ.ಜಿ. ನಿರ್ವಹಿಸಿದ ಪಾತ್ರ ಮರೆಯುವಂಥದ್ದಲ್ಲ. ಸಂಸತ್ತಿನಲ್ಲಿಯೂ ಅವರು ಒಬ್ಬ ಮಹಾ ಪ್ರೇರಕ ಶಕ್ತಿಯಾಗಿದ್ದರು. ಅವರು ಮತ್ತು ಅವರ ಪತ್ನಿ ಸುಶೀಲಾ ಗೋಪಾಲನ್ ನನ್ನ ಉತ್ತಮ ಸ್ನೇಹಿತರಾಗಿದ್ದರು. ಎ.ಕೆ.ಜಿ. ನಿಧನದಿಂದ ನಮಗೆ ಆಪ್ತರಾದವರೊಬ್ಬರನ್ನು ನಾವು ಕಳೆದುಕೊಂಡಂತಾಯಿತು.

ಬಂಗಾಳದಲ್ಲಿ ಶೂನ್ಯ ಸಂಪಾದನೆ

ಪಶ್ಚಿಮ ಬಂಗಾಳದಲ್ಲಿ ಕಾಂಗ್ರೆಸ್ ಮತ್ತು ಸಿಪಿಐ ಹೇಳ ಹೆಸರಿಲ್ಲದಂತಾಯಿತು. ಸಿಪಿಐ ಖಾತೆಯನ್ನೇ ತೆರೆಯಲಿಲ್ಲ. ಕಾಂಗ್ರೆಸ್‌ಗೆ ದಕ್ಕಿದ್ದು ಕೇವಲ ಮೂರು ಸ್ಥಾನ. ರಾಜ್ಯದ ಒಟ್ಟು 42 ಲೋಕಸಭೆ ಸ್ಥಾನಗಳಲ್ಲಿ ಸಿಪಿಐ(ಎಂ) 17 ರಲ್ಲಿ ಜಯಭೇರಿ ಬಾರಿಸಿತು. ಫಾರ್ವರ್ಡ್ ಬ್ಲಾಕ್ 3, ಆರ್‌ಎಸ್‌ಪಿ 3, ಸಿಎಫ್‌ಡಿ 3 ಮತ್ತು ಜನತಾಪಕ್ಷ 12 ಕ್ಷೇತ್ರಗಳಲ್ಲಿ ವಿಜಯಮಾಲೆ ಧರಿಸಿದವು. ನಾವು ಬೆಂಬಲಿಸಿದ ಪಕ್ಷೇತರ ಅಭ್ಯರ್ಥಿಯೂ ಗೆದ್ದರು.

1975 ರಲ್ಲಿ ದೇಶದಲ್ಲಿ ತುರ್ತುಪರಿಸ್ಥಿತಿ ಅಧಿಕೃತವಾಗಿ ಹೇರಿಕೆಯಾದರೂ ಪಶ್ಚಿಮ ಬಂಗಾಳದಲ್ಲಿ ಅದಕ್ಕೂ ಮುಂಚಿನಿಂದಲೂ ಅಂಥ ಪರಿಸ್ಥಿತಿ ಇತ್ತು ಎಂದು ನಾನು ಯಾವಾಗಲೂ ಹೇಳುತ್ತಿದ್ದೆ. ಕಾಂಗ್ರೆಸ್ಸನ್ನು ಓಡಿಸಲು ಜನರು ಸಿದ್ಧರಾಗಿದ್ದರು. ಕಮ್ಯುನಿಸ್ಟರು ಬಹಳ ನೋವುಂಡಿದ್ದನ್ನು ಅವರು ಕಂಡಿದ್ದರು.

(ಮುಂದುವರಿಯುವುದು)

ಪತ್ರಿಕೆಗೆ ಹೊಸ ಹೆಸರು ಸೂಚಿಸಿ

ಪ್ರಿಯ ಓದುಗರೇ,

ದುಡಿವ ಜನರ ಪ್ರಾಣಮಿತ್ರ 'ಐಕ್ಯರಂಗ' ಕಳೆದೆರಡು ವರುಷಗಳಿಂದಲೂ ಹೊಸ ವಿನ್ಯಾಸ, ಹೊಸ ಹೊಸ ವಿಷಯ ವೈವಿದ್ಯಗಳೊಂದಿಗೆ ನಿಮ್ಮ ಕೈ ಸೇರುತ್ತಲಿದೆ. ಕನ್ನಡದಲ್ಲಿ ಹಲವಾರು ವಾರ ಪತ್ರಿಕೆಗಳು ಜನಮನದೊಳಗೆ ಹಿಂಸೆ-ಅಶ್ಲೀಲತೆಗಳಂತಹ ಕೀಳು ಅಭಿರುಚಿ ಹವ್ಯಾಸ, ಕಲುಷಿತ ದೃಷ್ಟಿಗಳನ್ನು ತುಂಬುತ್ತಿವೆ. ದೇಶದ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಆಗು ಹೋಗುಗಳನ್ನು ಬೇಕೆಂದಲೇ ಮರೆ ಮಾಡುತ್ತಿವೆ. ಇಲ್ಲಿ ಜನರ ದುಗುಡ-ದುಮ್ಮಾನಗಳಿಗೆ ಕವಡೆಯ ಕಿಮ್ಮತ್ತೂ ಇಲ್ಲ. ಕೆಲವಂತೂ ಕೋಮುವಾದದ, ದೇಶದ್ರೋಹಿಗಳ ಬಾಲಬಡುಕರಾಗಿ ಸೇವೆ ಸಲ್ಲಿಸುತ್ತಿವೆ. ಮಾಫಿಯಾಗಳ ಮುಖವಾಡಗಳಾಗಿ ರೂಪಿಸುವುದು ಇನ್ನೊಂದು ಬಗೆ.

ಇಂತಹ ಆತಂಕಕಾರಿ ವಾತಾವರಣದಲ್ಲಿ ಅರ್ಥಪೂರ್ಣ ಆರೋಗ್ಯದಾಯಕ ದೃಷ್ಟಿಯನ್ನು ಐಕ್ಯರಂಗ ವಸ್ತುನಿಷ್ಠವಾಗಿ ಪ್ರಸಾರಿಸುತ್ತಿದೆ. ದುಡಿವ ಜನರ ನೋವು-ನಲಿವು ಭವಿಷ್ಯತ್ತನ್ನೇ ಪ್ರತಿಪಾದಿಸುತ್ತಿದೆ. ಗ್ಯಾಟ್-ಡಂಕಲ್ ಪ್ರಸ್ತಾಪಗಳು, ಹೊಸಆರ್ಥಿಕ ನೀತಿಯ ಪರಿಣಾಮಗಳು, ಕೋಮುವಾದಿ ಕೃತ್ಯಗಳನ್ನು ಇಷ್ಟೊಂದು ವಿವರವಾಗಿ ನಿಖರ ಹಾಗೂ ನಿರಂತರವಾಗಿ ಬಿಡಿಸಿಟ್ಟ ಪತ್ರಿಕೆ ಇನ್ನೊಂದಿಲ್ಲ. ಈಗಲೂ ಕೃಷಿ -ಕೈಗಾರಿಕಾ ರಂಗದಲ್ಲಿ ಅಲ್ಲೋಲ ಕಲ್ಲೋಲಗಳನ್ನು ಪತ್ರಿಕೆ ಬಿಡಿಸಿಡುತ್ತಲೇ ಇದೆ. ಅದು ರೈತರ ಆತ್ಮಹತ್ಯೆ ಇರಲಿ, ಹೆಣ್ಣು ಕಂದಮ್ಮಗಳ ಮಾರಾಟವೇ ಇರಲಿ... ಪತ್ರಿಕೆಯು ನೀಡುವುದು ಕೇವಲ ಸುದ್ದಿಯಲ್ಲ, ಹೊಸಸೃಷ್ಟಿಗಾಗಿ ಹೊಸ ದೃಷ್ಟಿಯನ್ನು. 1964 ರಲ್ಲಿ ಪತ್ರಿಕೆ ಪ್ರಕಟಣೆ ಆರಂಭಗೊಂಡಾಗಿನಿಂದಲೂ ಸದಾ ಜನಮುಖಿ. ಜನರ ಚಳುವಳಿಗೆ ನೀಡುತ್ತಿದ್ದ ಒಂದು ಶಕ್ತಿ. ಹೀಗೆ ಸರಿಸುಮಾರು ನಾಲ್ಕು ದಶಕಗಳಲ್ಲಿ ವಿಭಿನ್ನ ಆಯಾಮಗಳಿಗೆ, ದೇಶದ-ರಾಜ್ಯದ ಏಳುಬೀಳುಗಳನ್ನೆದುರಿಸಿ, ಅವಕ್ಕೆ ಪ್ರತಿಸ್ಪಂದಿಸಿ, ತನ್ನತನವನ್ನು ಕಾಯ್ದುಕೊಂಡು ಬಂದ ಪತ್ರಿಕೆಗೆ ಈಗ ಅಳವಡಿಸಿಕೊಂಡ ಹೊಸ ಬದಲಾವಣೆಗಳೊಂದಿಗೆ ಇನ್ನೂ ಶಕ್ತಿಯುತವಾಗಿ, ಇನ್ನೂ ಹೊಸ ಸ್ವರೂಪದಲ್ಲಿಯೂ ಅರಳಬೇಕೆಂಬ ಆಕಾಂಕ್ಷೆ ಇದೆ. ಹಾಗೆಯೇ ಕೇವಲ ಪ್ರಜಾಸತ್ತಾತ್ಮಕ ಚಳುವಳಿಯ ವ್ಯಾಪ್ತಿ ಮಾತ್ರವಲ್ಲ **ಇಡೀ ನಾಡಿನ ಹೊಸ ಜನ ವಿಭಾಗಗಳತ್ತ ಹೆಜ್ಜೆ ಹಾಕಿ ಅಂತರಾಳಕ್ಕೆ ಇಳಿಯಬಯಸಿದೆ. ಇದಕ್ಕನುಗುಣವಾಗಿ ಪತ್ರಿಕೆ ಹೊಸ ಹೆಸರಿನೊಂದಿಗೆ ರೂಪಾಂತರಗೊಳ್ಳಬಯಸಿದೆ. ಕಂಬಳಿ ಹುಳು ಚಿಟ್ಟೆಯಾಗಿ ಬೆಳೆಯುವಂತೆ...**

ಪತ್ರಿಕೆಯ ಒಳಹೊರಗುಗಳನ್ನು ಗಮನಿಸಿ, ಒಂದಿಲ್ಲ ಒಂದು ಬಗೆಯಲ್ಲಿ ಬೆಳೆಯಲು ಶ್ರಮಿಸಿ, ಸಹಕರಿಸಿದ ತಾವೆಲ್ಲಾ ಇಂತಹ ಒಂದು ಅರ್ಥಪೂರ್ಣ ಹೆಸರನ್ನು ಸೂಚಿಸಬೇಕೆಂಬುದೇ ಸಂಪಾದಕ ಮಂಡಳಿಯ ಅಪೇಕ್ಷೆ. ಆದ್ದರಿಂದ ಹೊಸ ಹೆಸರಿನ ಸೂಚನೆಯನ್ನು ನಮಗೆ ಕಳಿಸಿ. ನೀವು ಕಳಿಸಿದ ಹೆಸರು ಆಯ್ಕೆಯಾದಲ್ಲಿ ನಿಮಗೆ ಒಂದು ಅರ್ಥಪೂರ್ಣವಾದ ಬಹುಮಾನವೂ ಇದೆ.

ನೆನಪಿರಲಿ, ಈ ಸೂಚನೆ **ಮೇ 15 ರೊಳಗೆ** ನಮ್ಮ ಕೈಸೇರಬೇಕು.

ದುಡಿವ ಜನರ ಪ್ರಾಣಮಿತ್ರನಿಗೆ ಜನರದ್ದೇ ಕನಸು - ಕಸುವು.

- ಸಂಪಾದಕ

ಕರ್ನಾಟಕ ಈ ವಾರ ಒಂದು ನೋಟ

ಎಸ್.ವೈ.ಗುರುಶಾಂತ್

ಲಂಚಾವರತಾರ ಹಾಗೂ ಭೂ ಕಳ್ಳತನದಲ್ಲಿ ಬಿಜೆಪಿ ನಾಯಕರು

ತೆಹಲ್ಕಾ ರಕ್ಷಣಾ ಹಗರಣದಲ್ಲಿ ಮುಖಕ್ಕೆ ಉಗಿಸಿಕೊಂಡದ್ದನ್ನು ಕೌಜಲಗಿ ಟೇಪ್ ಹಗರಣದಿಂದ ಮೆಲ್ಲನೇ ಬಿಜೆಪಿ ಒರೆಸಿಕೊಳ್ಳುತ್ತಿರುವಾಗಲೇ 'ಲಂಚಾವತಾರ' ಪ್ರಕರಣದಲ್ಲಿ ತಾನೂ ತಿಂದು, ತನ್ನ ನಾಯಕ ಗಣಕ್ಕೆ ತಿನ್ನಿಸುತ್ತಿದ್ದ ಹಗರಣವೀಗ ಬಯಲಾಗಿದೆ. ತನ್ನ ಪಕ್ಷದ ರಾಜ್ಯ ಉಪಾಧ್ಯಕ್ಷರೊಬ್ಬರಿಗೆ ಕೇಂದ್ರ ಸರ್ಕಾರದ ಪ್ರಭಾವ ಬಳಸಿ ಸೀಮೆಎಣ್ಣೆ ವಿತರಣೆ ಲೈಸೆನ್ಸ್ ಕೊಡಿಸಲು ಒಂದು ಲಕ್ಷ ರೂಪಾಯಿಗಳನ್ನು ಹಾಗೂ ಪಕ್ಷದ ಟಿಕೇಟ್‌ಗಾಗಿ 50 ಸಾವಿರ ರೂ.ಗಳನ್ನು ಬಿಜೆಪಿ ಮಹಿಳಾ ಮೋರ್ಚಾದ ಅಧ್ಯಕ್ಷೆ ವಿಮಲಾಗೌಡ ಪಡೆದುಕೊಂಡ 'ಉನ್ನತ ಸಂಸ್ಕೃತಿ, ಸಚ್ಚಾರಿತ್ರ್ಯ' ದ ಪ್ರಕರಣವೀಗ ಬಯಲಾಗಿದೆ. ಬಯಲುಗೊಳಿಸಿದ್ದು ಅವರ ಪಕ್ಷದ ವಂಚಿತ



ಫಲಾನುಭವಿ ನಾಗರಾಜ್. ಈ ಲಂಚದ ಹಣದಲ್ಲಿ ಕೇಂದ್ರ ಸಚಿವ ಅನಂತಕುಮಾರ್‌ಗೆ ಪಾಲಿದೆಯಂತೆ. ಅರವಿಂದ ಲಿಂಬಾವಣಿಯೆಂಬ ಮಾಜಿ ಎಬಿವಿಪಿ ನಾಯಕ ಹಾಲಿ ಬಿಜೆಪಿ ಕಾರ್ಯದರ್ಶಿಯನ್ನು ಮೀಸಲಿರಿಸಲಾಗಿದೆಯಂತೆ. ನಾಗರಾಜ್‌ರವರು ಪಕ್ಷದ ಅಧ್ಯಕ್ಷ ಬಸವರಾಜ ಪಾಟೀಲ್ ಸೇಡಂಗೆ ಬರೆದ ಪತ್ರ ಬಹಿರಂಗಗೊಂಡಿದೆ. ನೇರ ಅಪಾದನೆ ಇದ್ದರೂ ಸೇಡಂ ಮೌನಿ. ವಿಮಲಾಗೌಡ ಯಥಾರೀತಿ 'ದುರದ್ದೇಶದ ಆರೋಪ' ಎನ್ನುತ್ತಿದ್ದಾರೆ. ಹೀಗೆಯೇ ಉಳಿದ ಎಲ್ಲಾ ಬಿಜೆಪಿ ಶಾಸಕಕರ, ಸಚಿವ-ಮಂತ್ರಿಗಳ, ಜನಸೇವೆ ದಿನಚರಿ ಜಾಲಾಡಿದರೆ ಇನ್ನೆಷ್ಟು ಇಂತಹವು ಸಿಗಬಹುದೇನೋ?

ವಿಮಲಾ ಗೌಡರ ಸೀಮೆಎಣ್ಣೆ ಹಗರಣ ಕೇವಲ ಪಕ್ಷದೊಳಗಿನ ವ್ಯವಹಾರವಲ್ಲ. ಇದು ಸಾರ್ವಜನಿಕವಾದುದು. ಒಬ್ಬ ಶಾಸಕರ ಭ್ರಷ್ಟಾಚಾರದ ಪ್ರಕರಣವಿದು. ಆದ್ದರಿಂದ ಅವರ ಮೇಲೆ ಕ್ರಿಮಿನಲ್ ಮೊಕದ್ದಮೆ ಹೂಡಿ ಕಾನೂನು ರೀತಿ ಕ್ರಮವಹಿಸುವುದು ಅತ್ಯಗತ್ಯ. ಈ ಬಗ್ಗೆ ಸರ್ಕಾರದ ಮೌನವೇಕೆ? ಇದೆಲ್ಲಾ ಸಾಮಾನ್ಯ ಎಂಬ ತಾತ್ಸರವೇ?

ಇವೆಲ್ಲವಕ್ಕೂ ಕಳಸವಿಟ್ಟಂತೆ ಬಿಜೆಪಿಮಹಾನ್ ನಾಯಕ ಯಡಿಯೂರಪ್ಪ, ಈಶ್ವರಪ್ಪ, ಶಂಕರ ಮೂರ್ತಿ, ರಾಮದಾಸ್‌ರವರು ಸುಮಾರು 36 ಕೋಟಿ ರೂಪಾಯಿಗಳಷ್ಟು ಮೌಲ್ಯದ ಭೂಕಬಳಿಕೆ ಮಾಡಿದ್ದಾರೆಂದು ಅದೇ ಪಕ್ಷದ ಶಾಸಕರಾದ ಭಾರತಿ ಶಂಕರ್, ಎ.ಮಂಜು ಬಹಿರಂಗಪಡಿಸಿದ್ದಾರೆ.

ಇವರ ಮೇಲೆ ಇನ್ನೂ ಅನೇಕ ಹಗರಣಗಳ ಸರಮಾಲೆಯನ್ನೇ ಮಾಧ್ಯಮಗಳು ಬಹಿರಂಗಗೊಳಿಸಿವೆ. ಆದ್ದರಿಂದ 'ದೇಶಭಕ್ತರ' ಈ ಎಲ್ಲಾ ಹಗರಣಗಳ ಬಗ್ಗೆ ನಿಷ್ಠುರ ತನಿಖೆ ಮತ್ತು ಕ್ರಿಮಿನಲ್ ಕ್ರಮವನ್ನು ಕೈಗೊಳ್ಳಬೇಕು.

ಮುಖ್ಯಮಂತ್ರಿಗಳ ಮನುಷ್ಯ: ಹೈಕಮಾಂಡ್ ಆಳು ಈಗ ಕಾಂಗೆಸ್ ಅಧ್ಯಕ್ಷ

ಅಧ್ಯಕ್ಷ ಗಾದಿಯಿಂದ ಝಾಡಿಸಿಕೊಂಡ ಮೇಲೆ ಕೌಜಲಗಿಯವರು ಬುಸುಗುಡುತ್ತಿದ್ದಾರೆ. ಕಾಂಗ್ರೆಸ್ ಒಳಗಿನ ಭಿನ್ನಮತ ಸ್ಫೋಟಗೊಂಡಿದೆ. ತೆರೆಮರೆಯ ಈ ತಳ್ಳುವ ಗುಂಪುಗಳ ಜಟಾಪಟಿ ಇನ್ನು ಮುಂದೆಯೂ ತಾರಕಕ್ಕೇರಬಹುದು. ಅವರು ಕಾಂಗ್ರೆಸ್ ಸಂಸ್ಕೃತಿಯ ಜಾಡನ್ನು ಹೇಗೆ ಬಿಟ್ಟಾರು? ಅದೂ ಬೂರ್ಷ್ವಾ ಪಕ್ಷಗಳಲ್ಲಿ 'ರಾಜಕೀಯ' ಎಂದರೆ ಇದೇ ಎನ್ನುವಷ್ಟು ಈ ಪ್ರವೃತ್ತಿ ಬೆಳೆದು ನಿಂತಿದೆ.

ಕೌಜಲಗಿ ಘಟನೆಯು ಮುಖ್ಯಮಂತ್ರಿ ಕೃಷ್ಣ ಹೇಳಿಕೊಳ್ಳುತ್ತಿದ್ದ ದಕ್ಷ, ಅತ್ಯುತ್ತಮ ಆಡಳಿತ ಎಂಬಿತ್ಯಾದಿ ಭ್ರಮೆಗಳನ್ನು ಉದುರಿಸಿದೆ ಕೂಡ. ತೆಹಲ್ಕಾದ ವಿರುದ್ಧ ಕಾಂಗ್ರೆಸ್ ಸಹ ಪ್ರಚಾರಾಂದೋಲನಕ್ಕಿಳಿದಿದ್ದಾಗ, ಕಾಂಗ್ರೆಸ್ ನಾಯಕರನ್ನು ತಣ್ಣಾಗಿಸಲು ಬಿಜೆಪಿ ಯು ಸರ್ಕಾರವನ್ನು ಬಳಸಿ ಸೋನಿಯಾ ಆಪ್ತ ಕಾರ್ಯದರ್ಶಿಯನ್ನು ಗುರಿಯಾಗಿಸಿತು. ಹಾಗೇ ತನ್ನ ಮೇಲಿನ ಧಾಳಿ ಕಡಿಮೆ ಮಾಡಲು ಹಾಗೂ ಕಾಂಗ್ರೆಸ್ಸನ್ನು ಭಿನ್ನ ಎಂದು ತೋರಿಸಲು ಕೌಜಲಗಿ ಪ್ರಕರಣ , ಬಳಸಿ ಹೊರಬರಲು ಬಿಜೆಪಿಯೂ ಕೈಜೋಡಿಸಿರಬಾರದೇಕೆ ಎಂದು ಚರ್ಚೆಗಳು ನಡೆದಿವೆ. ಅದೇನೇ ಇರಲಿ.



ಈಗಂತೂ ಕಾಂಗ್ರೆಸ್‌ನ ಅಧ್ಯಕ್ಷರಾಗಿ ಯಥಾರೀತಿ ಹೈಕಮಾಂಡ್ ಸಚಿವ ಅಲ್ಲಂ ವೀರಭದ್ರಪ್ಪನವರನ್ನು ನೇಮಿಸಿದೆ. ಮುಖ್ಯಮಂತ್ರಿ ಒಕ್ಕಲಿಗರಿರುವಾಗ, ಲಿಂಗಾಯತರೊಬ್ಬರು ಅಧ್ಯಕ್ಷರಾಗಬೇಕೆಂದೇ ಚರ್ಚೆ ಇಲ್ಲಿ ಆರಂಭವಾಗಿತ್ತು. ಉತ್ತರ ಕರ್ನಾಟಕಕ್ಕೆ ಒಂದು ಪ್ರಾತಿನಿಧ್ಯವೆಂಬುದು ಸೇರಿಕೊಂಡಿತ್ತು. ಈಗ ಇವರ ನೇಮಕವು ಹಿಂದುಳಿದ, ಕೆಳಜಾತಿಗಳಲ್ಲಿ ತೀವ್ರ ಅಸಮಾಧಾನವನ್ನು ಮೂಡಿಸಿದೆಯಂತೆ. ಪ್ರಬಲ ಕೋಮಿನವರೇ ಮುಖ್ಯ ಸ್ಥಾನಗಳನ್ನು ಹಂಚಿಕೊಂಡರಲ್ಲಾ ಎಂದು. ಈ ಜಾತೀವಾರು ನೇಮಕದಿಂದ ಆಯಾ ಜಾತಿಗಳ ಜನರಿಗೆ ಏನಾದರೂ, ಎಂದಾದರೂ ಅಲ್ಪವಾದರೂ ಪ್ರಯೋಜನ ವಾಗಿದೆಯೆ? ರೈತರ ಬೆಳೆಗೆ ಬೆಲೆ ಸಿಕ್ಕೀತೆ? ಕುಡಿಯಲು ನೀರು ದೊರಕೀತೆ? ಪ್ರಾದೇಶಿಕ-ಅಸಮಾನತೆ ತೊಲಗೀತೆ? ವಿಶ್ವ ವಾಣಿಜ್ಯ ಒಪ್ಪಂದಕ್ಕೆ ರಾಮಬಾಣವೇ ಇದು! ಇದೆಲ್ಲಾ ಕೇವಲ ಜನರನ್ನು ಮೋಸಗೊಳಿಸುವ ಯತ್ನಗಳಷ್ಟೇ.

ಹೇಳಿ ಕೇಳಿ ಅಲ್ಲಂವೀರಭದ್ರಪ್ಪನವರು ಬಳ್ಳಾರಿ ಜಿಲ್ಲೆಯಲ್ಲಾದರೂ ಪ್ರಮುಖವಾಗಿ ಗುರುತಿಸಿಕೊಂಡವರಲ್ಲ, ತೊಡಗಿಸಿಕೊಂಡವರಲ್ಲ. ಮನೆತನದ ಹೆಸರೊಂದು ಎಲ್ಲರೂ ಕೇಳಿರುವುದನ್ನು ಬಿಟ್ಟರೆ ಜಿಲ್ಲೆಯ ಒಟ್ಟಾರೆ ಅಭಿವೃದ್ಧಿಗೆ ಇವರ ಕೊಡುಗೆ ಸೊನ್ನೆ. ಆದರೆ ಇಷ್ಟು ಮಾತ್ರ ಹೇಳಬಹುದು. ಅಲ್ಲಂ ಮುಖ್ಯಮಂತ್ರಿಗಳ ಮನುಷ್ಯ. ಹೈಕಮಾಂಡಿನ ಆಳು. ಈ ಪಕ್ಷಗಳಲ್ಲಿ ಅಧ್ಯಕ್ಷ ಸ್ಥಾನ ಮೇಲೆ ಎಂದಿದ್ದರೂ ನಿಜಕ್ಕೂ ಎಲ್ಲಾ ನಿಭಾಯಿಸುವವರು ಅಧಿಕಾರದಲ್ಲಿರುವ ಮುಖ್ಯಮಂತ್ರಿಗಳೇ.

ಕುಡಿಯುವ ನೀರಿಗೂ ಪರಿತಾಪ

ನೀರು ನೀರು ಎಲ್ಲೆಲ್ಲೂ ನೀರು, ಆದರೆ ಕುಡಿಯಲು ಹನಿಯೂ ಇಲ್ಲ' ಎಂಬುದು ನೆಹರೂರವರ ಒಂದು ಸುಪ್ರಸಿದ್ಧ ಮಾತು. ಭಾರತ ಬಿಡುಗಡೆಗೊಂಡ ಅಂದಿನ ಗಂಭೀರ ಸ್ಥಿತಿಯನ್ನು ಸಾಂಕೇತಿಕವಾಗಿಯೂ ಧ್ವನಿಸುತ್ತಿದ್ದ ಮಾತುಗಳು ಇವು. ಸ್ವಾತಂತ್ರ್ಯಗಳಿಸಿ 53 ವರ್ಷಗಳಾದರೂ ಎಲ್ಲಾ ಅಗತ್ಯಗಳಿರಲಿ ಕುಡಿಯುವ ನೀರಿಗೂ ಹಾಹಾಕಾರ ಪಡುವ ಸ್ಥಿತಿ ಇದೆ. ಬಹುತೇಕ ಮಹಿಳೆಯರು ನೀರು ಸಂಗ್ರಹಿಸಲೇ ಅವರ ಶ್ರಮ ತೊಡಗಿಸಿಕೊಳ್ಳಬೇಕು. ಭಾವಿ, ನಳಗಳ ಮುಂದೆ ಈಗಲೂ ಉದ್ದನೆಯ ಸಾಲು ಸೇರುತ್ತಲೇ ಇದೆ. ನೀರು ಸಂಗ್ರಹಿಸುವಾಗ ಮೇಲಾದ ತಳ್ಳಾಟದಲ್ಲಿ ಜಗಳಗಳೇ ನಡೆದಿವೆ. ಕೊಲೆಗಳಲ್ಲಿ ಪರ್ಯವಸನವಾಗಿದೆ. ಇನ್ನೂ ದಲಿತ ಕೆಳಜಾತಿ ಜನರು ಅನುಭವಿಸುವ ಪಾಡು ಘನ ಘೋರ. ಗ್ರಾಮ ಗ್ರಾಮಗಳಿಗೂ ಬೋರ್‌ವೆಲ್ ಕೊರೆದ ನಂತರವೂ ಇನ್ನೂ ಹಲವಾರು ಕಡೆ ಶೋಚನೀಯ ಪರಿಸ್ಥಿತಿ ಇದೆ.

ಇನ್ನು ಬೇಸಗೆ ಬಂತೆಂದರೆ ನೀರಿನ ಬವಣೆ, ತಾರಕಕ್ಕೇರುತ್ತದೆ. ಜನರೂ ದನ ಕರುಗಳೂ ಪ್ರಯಾಸ ಪಡುತ್ತವೆ. ಈ ಬಾರಿ ಕರ್ನಾಟಕದಲ್ಲಿ ನೀರಿನ ಕೊರತೆ ಕುರಿತು ರಂಗುರಂಗಿನ ಕಥೆಗಳಾಗಿ, ಶಿಕ್ಷಿಸುವ ತಾಣಗಳೆಂದು ಆಡುಂಬೋಲದ ಸರಕಾಗಿರುವ

ಪುಟ 11 ಕ್ಕೆ

ಜಾಗತೀಕರಣ ಗಂಭೀರ ಪರಿಣಾಮ ಬೀರುತ್ತಿದೆ

ಖ್ಯಾತ ಅರ್ಥಶಾಸ್ತ್ರಜ್ಞಡಾ. ಡಿ.ಎಂ ನಂಜುಂಡಪ್ಪ

ರಾಜ್ಯದಲ್ಲಿ ಅಸಂಘಟಿತ ಕ್ಷೇತ್ರದ ಕಾರ್ಮಿಕರಿಗೆ ಕನಿಷ್ಟ ವೇತನ ನೀಡಿಕೆಯ ಪ್ರಮಾಣ ತೃಪ್ತಿಕರವಾಗಿಲ್ಲ ಎಂದು ರಾಜ್ಯ ಯೋಜನಾ ಆಯೋಗದ ಮಾಜಿ ಉಪಾಧ್ಯಕ್ಷ ಡಾ. ಡಿ.ನಂಜುಂಡಪ್ಪ ವಿಷಾದಿಸಿದರು.

ದುಡಿಯುವ ಮಹಿಳೆಯರ ಸಮನ್ವಯ ಸಮಿತಿ(ಸಿಐಟಿಯು) ಹಾಗೂ ಅಖಿಲಭಾರತ ಜನವಾದಿ ಮಹಿಳಾ ಸಂಘಟನೆಗಳು ಸಂಯುಕ್ತವಾಗಿ ನಗರದಲ್ಲಿ ಏರ್ಪಡಿಸಿದ್ದ ಸ್ವಾತಂತ್ರ್ಯ ಹೋರಾಟಗಾರ್ತಿ ವಿಮಲಾ ರಣದಿವೆ ಅವರ ಜನ್ಮದಿನಾಚರಣೆ ಸಂದರ್ಭದಲ್ಲಿ 'ಜಾಗತೀಕರಣ ದಿಂದ ಅಸಂಘಟಿತ ಕ್ಷೇತ್ರದ ದುಡಿಯುವ ಮಹಿಳೆಯರ ಮೇಲಾಗುವ ಪರಿಣಾಮ'ಕುರಿತ ವಿಚಾರ ಸಂಕಿರಣ ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ಅಸಂಘಟಿತ ಕಾರ್ಮಿಕರಲ್ಲಿ ಮಹಿಳೆಯರೇ ಜಾಸ್ತಿ. ಜಾಗತೀಕರಣ ಬಡವರು, ಹಿಂದುಳಿದ ಪ್ರದೇಶ ಹಾಗೂ ಸಂಘಟಿತ ವಲಯದ ಮೇಲೆ ಗಂಭೀರ ಪರಿಣಾಮ ಬೀರಲಿದೆ. ಈ ವರ್ಗಗಳ ಮೇಲೆ ಸಾಮಾಜಿಕ ಭದ್ರತೆಯ ಅಗತ್ಯ ಇದೆ' ಎಂದು ನಂಜುಂಡಪ್ಪ ನುಡಿದರು.

'ಜಾಗತೀಕರಣದಿಂದ ಆಗುವ ಪರಿಣಾಮವನ್ನು ಎದುರಿಸಲು ಸೂಕ್ತ ಕ್ರಮಗಳನ್ನು ಕೈಗೊಂಡಲ್ಲಿ ಅಸಂಘಟಿತ ಕಾರ್ಮಿಕರ ಹಿತಕಾಪಾಡಲು ಸಾಧ್ಯ' ಎಂದರು.

'ಕಾರ್ಮಿಕರಲ್ಲಿ ಅಲ್ಪಸಂಖ್ಯಾತರಾಗಿರುವ ಸಂಘಟಿತ ವಲಯ ಹೆಚ್ಚಿನ ಸೌಲಭ್ಯ ಪಡೆಯುತ್ತಿದೆ. ಹಾಗೆಯೇ ಅಸಂಘಟಿತ ವಲಯದಲ್ಲಿಯೂ ಮಹಿಳೆಯರ ಸಂಖ್ಯೆ ಗಣನೀಯವಾಗಿದೆ ಎಂಬ ಅಂಶವನ್ನೂ ಮರೆಯಬಾರದು ಎಂದು ಅವರು ಹೇಳಿದರು. ಮಹಿಳೆಯರ ದಕ್ಷತೆ ಅರ್ಥ ಮಾಡಿ ಕೊಂಡು ಉತ್ಪಾದಕತೆ ಹೆಚ್ಚಿಸುವ ವಾತಾವರಣ ಸೃಷ್ಟಿಸಬೇಕು. ಆದಾಯ ವಿತರಣೆಯಲ್ಲಿ ಅಸಮತೋಲನವಿದೆ. ಕನಿಷ್ಟ ವೇತನ ನಿಗದಿ ತೃಪ್ತಿದಾಯಕವಾಗಿಲ್ಲ, ಅದನ್ನು ಸರಿಪಡಿಸಬೇಕು. ದುಡಿಯುವ ಮಹಿಳೆಯರ ಸಂಘಟನೆಗಳಿಗೆ ಹೆಚ್ಚಿನ ಉತ್ತೇಜನ ನೀಡಬೇಕು. ಹಾಗೂ ಈ ವರ್ಗದ ಮಹಿಳೆಯರಲ್ಲಿ ಧೈರ್ಯ ತುಂಬಬೇಕು ಎಂದರು.



ವಿಮಲಾ ರಣದಿವೆಯವರ ಕುರಿತ ನೆನಪುಗಳ ಕಿರು ಹೊತ್ತಿಗೆ ಬಿಡುಗಡೆ ಮಾಡುತ್ತಿರುವ ಕಾಂ. ಸೂರಿ. ಚಿತ್ರದಲ್ಲಿ ಡಾ. ಡಿ.ಎಂ ನಂಜುಂಡಪ್ಪ, ವಿ.ಜೆ.ಕೆ.ನಾಯರ್, ವರಲಕ್ಷ್ಮಿ, ಲೀಲಾವತಿ ಮತ್ತು ಯಶೋಧ.

ಜಾಗತೀಕರಣ ಪ್ರಕ್ರಿಯೆ ದೇಶದ ಸಂಘಟಿತ ಹಾಗೂ ಅಸಂಘಟಿತ ವಲಯಗಳೆರಡರ ಮೇಲೆ ದುಷ್ಪರಿಣಾಮ ಬೀರಿದೆ. ಆದರೆ ಬಡಜನರು ಹಾಗೂ ಹಿಂದುಳಿದವರ ಮೇಲೆ ಇದರ ಪರಿಣಾಮ ಹೆಚ್ಚು. ಬಡವ ಹಾಗೂ ಶ್ರೀಮಂತರ ನಡುವಿನ ಅಂತರವನ್ನು ಅದು ಹೆಚ್ಚು ಮಾಡುತ್ತಿದೆ. ಸಂಘಟಿತ ಶಕ್ತಿಯಿಂದ ಮಾತ್ರ ಅದನ್ನು ಎದುರಿಸಲು ಸಾಧ್ಯಎಂದರು.

ಸಾಕ್ಷರತೆಯಲ್ಲಿ ಹಿಂದೆ: ಪ್ರಾದೇಶಿಕ ಅಸಮತೋಲನ ನಿವಾರಣಾ ಸಮಿತಿ ಅಧ್ಯಕ್ಷರಾಗಿರುವ ನಂಜುಂಡಪ್ಪ ಅವರು ತಾವು ಈಗಾಗಲೇ ರಾಜ್ಯದಲ್ಲಿರುವ ಪ್ರಾದೇಶಿಕ ಅಸಮಾನತೆ ನಿವಾರಣೆ ಕುರಿತು ಸರ್ಕಾರಕ್ಕೆ ಮಧ್ಯಂತರ ವರದಿ ಒಂದನ್ನು ನೀಡಿರುವುದಾಗಿ ತಿಳಿಸಿದರು.

ತಮ್ಮ ಸಮಿತಿಯ ಸಮೀಕ್ಷೆಯಂತೆ ರಾಜ್ಯದಲ್ಲಿ ಸುಮಾರು 110 ತಾಲ್ಲೂಕುಗಳಲ್ಲಿ ಮಹಿಳಾ ಸಾಕ್ಷರತೆ ಪ್ರಮಾಣ ಶೇ 25 ರಿಂದ 28 ರಷ್ಟಿದೆ. ಆದರೆ ರಾಜ್ಯದ ಸರಾಸರಿ ಸಾಕ್ಷರತಾ ಪ್ರಮಾಣ ಶೇ 67 ರಷ್ಟಿದೆ. ಇನ್ನೆರಡು ವರ್ಷದಲ್ಲಿ ಈ ತಾಲೂಕುಗಳಲ್ಲಿ ಸಾಕ್ಷರತಾ ಪ್ರಮಾಣ (ಮುಖ್ಯವಾಗಿ ಮಹಿಳೆಯರು) ಹೆಚ್ಚಿಸಲು ಸರ್ಕಾರ ತೀವ್ರ ಕ್ರಮ ಕೈಗೊಳ್ಳಬೇಕಾದ ಅಗತ್ಯ ಇದೆ ಎಂದರು.

ಮೀಸಲಾತಿ: ಗಾಂಧಿ - ಅಂಬೇಡ್ಕರ್ ಧೋರಣೆ

ಈಗ ಭಾರತ ರತ್ನ ಡಾ।। ಅಂಬೇಡ್ಕರ್‌ರವರ 110 ನೇ ಜಯಂತಿ. ಸ್ವಾತಂತ್ರ್ಯ ಚಳುವಳಿ ಹಾಗೂ ಮೀಸಲಾತಿ ಕುರಿತಂತೆ ಗಾಂಧೀಜಿ ಮತ್ತು ಅಂಬೇಡ್ಕರರಲ್ಲಿದ್ದ ಕೆಲವು ವಿಚಾರ ಸಂಘರ್ಷಗಳನ್ನು ಪಿ.ಪಿ.ಸಾಂಝುಗಿರಿ ಯವರ ಕಿರುಹೊತ್ತಿಗೆಯಿಂದ ಆಯ್ಕೆ ಮಾಡಿ ಇಲ್ಲಿ ನೀಡಲಾಗಿದೆ.



ಬ್ರಿಟಿಷರ ಆಡಳಿತ ಮತ್ತು ರಾಷ್ಟ್ರೀಯ ಚಳುವಳಿಯ ಬಗ್ಗೆ ನಿಜವಾಗಿಯೂ ಅಂಬೇಡ್ಕರ್‌ರವರ ಧೋರಣೆ ಏನಾಗಿತ್ತು?

ದುಂಡುಮೇಜಿನ ಪರಿಷತ್ತಿನ ಮುಕ್ತಾಯ ಅಧಿವೇಶನದಲ್ಲಿ ನವೆಂಬರ್ 20, 1930 ರಂದು ಅಂಬೇಡ್ಕರ್ ಹೀಗೆ ಹೇಳುತ್ತಾರೆ "ನನ್ನ ಕೆಲವು ದೃಷ್ಟಿಕೋನಗಳನ್ನು ಆದಷ್ಟು ಸಂಕ್ಷೇಪವಾಗಿ ವಿವರಿಸಲು ಪ್ರಯತ್ನಿಸುತ್ತೇನೆ. ಅದೇನೆಂದರೆ ಜನರ ಜನರಿಂದ ಮತ್ತು ಜನರಿಗಾಗಿ ಇರುವ ಸರಕಾರ ಭಾರತದಲ್ಲಿ ಅಧಿಕಾರಶಾಹಿ ಮಾದರಿಯ ಸರ್ಕಾರದ ಸ್ಥಾನದಲ್ಲಿ ಬರಬೇಕು. ದಮನಿತ ವರ್ಗಗಳ ಈ ಹೇಳಿಕೆಯು ಖಂಡಿತವಾಗಿಯೂ ಕೆಲವು ವಲಯಗಳಲ್ಲಿ ಆಶ್ಚರ್ಯವನ್ನು ಹುಟ್ಟಿಸುತ್ತದೆ ಎನ್ನುವುದು ನನಗೆ ಗೊತ್ತು... ನಮ್ಮ ಇಂದಿನ ಸ್ಥಿತಿಗತಿಗಳನ್ನು ಬ್ರಿಟಿಷರಿಗೆ ಪೂರ್ವ ಭಾರತೀಯ ಸಮಾಜದಲ್ಲಿಯ ನಾವು ಸಹಿಸಬೇಕಾಗಿದ್ದ ಸ್ಥಿತಿಗತಿಗೆ ಹೋಲಿಸಿಕೊಂಡಾಗ ನಾವು ಮುಂದುವರೆಯುವುದರ ಬದಲಿಗೆ ಕೇವಲ ಸಮಯ ತಳ್ಳುತ್ತಿದ್ದೇವೆ ಎಂದು ಕಾಣುತ್ತದೆ.... ಬ್ರಿಟಿಷರಿಗಿಂತ ಮೊದಲು ನಾವು ನಮ್ಮ ಅಸ್ಪೃಶ್ಯತೆಯಿಂದಾಗಿ ಹೀನ ಸ್ಥಿತಿಯಲ್ಲಿದ್ದೆವು. ಆದರೆ ಬ್ರಿಟಿಷ್ ಸರಕಾರವು ಅದನ್ನು ತೊಡೆದು ಹಾಕಲು ಏನನ್ನಾದರೂ ಮಾಡಿತೆ? ಬ್ರಿಟಿಷರ ಪೂರ್ವದಲ್ಲಿ ನಾವು ದೇವಸ್ಥಾನ ಪ್ರವೇಶಿಸುವಂತಿದ್ದಿಲ್ಲ. ಈಗ ನಾವು ಪ್ರವೇಶಿಸಬಲ್ಲೆವೆ? ಬ್ರಿಟಿಷರಿಗಿಂತ ಮೊದಲು ನಮಗೆ ಪೋಲೀಸ್ ಪಡೆಯಲ್ಲಿ ಪ್ರವೇಶ ನಿರಾಕರಿಸಲಾಗಿತ್ತು. ಬ್ರಿಟಿಷ್ ಸರ್ಕಾರವು ನಮ್ಮನ್ನು ಪೋಲಿಸ್ ಪಡೆಯಲ್ಲಿ ಸೇರಿಸಿಕೊಂಡಿತೆ? ಬ್ರಿಟಿಷ್ ಪೂರ್ವದಲ್ಲಿ ಸೈನ್ಯದಲ್ಲಿ ಸೇವೆ ಮಾಡುವ ಅವಕಾಶ ನಮಗಿರಲಿಲ್ಲ. ಈ ಉದ್ಯೋಗವಕಾಶವನ್ನು ಈಗ ನಮಗೆ ತೆರೆದಿಡಲಾಗಿದೆಯೇ? ಬದಲಿಗೆ ನಮ್ಮ ಮಟ್ಟಿಗೆ ಹೇಳುವುದಾದರೆ ಬ್ರಿಟಿಷ್ ಸರ್ಕಾರವು ಸಾಮಾಜಿಕ ವ್ಯವಸ್ಥೆಯು ಹೇಗಿದೆಯೋ ಹಾಗೆ ಅದನ್ನು ಸ್ವೀಕರಿಸಿದೆ ಮತ್ತು ಅವುಗಳನ್ನು ಇರುವಂತೆಯೇ ವಿಶ್ವಾಸದೊಂದಿಗೆ ಕಾದಿಡಲಾಗಿದೆ.... ವಿಧೇಯತೆಯು ಎಲ್ಲಿ ಕೊನೆಗೊಂಡು ಪ್ರತಿಭಟನೆಯು ಎಲ್ಲಿಂದ ಪ್ರಾರಂಭವಾಗುತ್ತದೆ ಎಂದು ಅರಿತಿರುವ, ತ್ವರಿತವಾಗಿ ನ್ಯಾಯದ ಅಧಿಕಾರವನ್ನು ಸ್ಥಾಪಿಸಲು ಸಾಮಾಜಿಕ ಮತ್ತು ಆರ್ಥಿಕ ಕಟ್ಟಳೆಗಳನ್ನು ಬದಲಾಯಿಸಲು ಹೆದರದ ಜನರು ಅಧಿಕಾರದಲ್ಲಿರುವಂತಹ ಒಂದು ಸರಕಾರವನ್ನು ನಾವು ಹೊಂದಬೇಕು. ಇಂತಹ ಪಾತ್ರವನ್ನು ಬ್ರಿಟಿಷ್ ಸರಕಾರವು ಎಂದಿಗೂ ನಿರ್ವಹಿಸಲು ಸಾಧ್ಯವಾಗದು. ಇದನ್ನು ನಿರ್ವಹಿಸಲು ಜನರ, ಜನರಿಗಾಗಿ ಮತ್ತು ಜನರಿಂದ ನಿರ್ಮಾಣಗೊಂಡ ಸರಕಾರದಿಂದ ಮಾತ್ರ ಸಾಧ್ಯ"

ದಮನಿತ ವರ್ಗಗಳ ಸಮಸ್ಯೆಯನ್ನು ಸಾಮಾನ್ಯ ರಾಜಕೀಯ ಒಪ್ಪಂದದ ಒಂದು ಅಂಗವಾಗಿ ಇತ್ಯರ್ಥಗೊಳಿಸಲೇಬೇಕು ಎಂದು ಮತ್ತು ನಮಗೆ ಅದರ ಮೇಲೆ ಹಿಡಿತ ದೊರಕಿಸಿಕೊಡುವಂತೆ ರಾಜಕೀಯ ವ್ಯವಸ್ಥೆಯನ್ನು ಹೊಂದಾಣಿಕೆ ಮಾಡುವುದರ ಮೂಲಕ ಎಂದು ಒತ್ತಾಯಿಸಿದ ಅಂಬೇಡ್ಕರ್ "ಒಬ್ಬ ಭಾರತೀಯ" ನಂತೆ ಮಾತನಾಡುತ್ತಾ ಜನರನ್ನು ದಮನಿಸುವುದಕ್ಕಾಗಿ ಅಧಿಕಾರವನ್ನು ಬಳಸುವುದರ ವಿರುದ್ಧ ಬ್ರಿಟಿಷ್ ಸರ್ಕಾರಕ್ಕೆ ಎಚ್ಚರಿಕೆ ನೀಡಿದರು. ಅಲ್ಲದೆ 'ಬಹುಸಂಖ್ಯಾತ ಜನರಿಗೆ ಒಪ್ಪಿತವಾಗದ ಸಂವಿಧಾನವೊಂದು ದೇಶದ ಪ್ರಸ್ತುತ ಪರಿಸ್ಥಿತಿಯಲ್ಲಿ ಕಾರ್ಯಸಾಧುವಲ್ಲ ಎಂಬ ಸತ್ಯದ ಅರಿವು ಸಾಕಷ್ಟು ಮಟ್ಟಿಗೆ ಆಗಿಲ್ಲ ಎಂದು ನನಗೆ ಭಯವಿದೆ. ನೀವು ಆಯ್ದುಕೊಂಡುದನ್ನು ಭಾರತವು ಸ್ವೀಕರಿಸಿಬಿಡುವ ಕಾಲವು ಎಂದೋ ಆಗಿ ಹೋಗಿದೆ. ಅದು ಮರಳಿ ಬರುವುದಿಲ್ಲ" ಎಂಬುದಾಗಿ ಅವರು ಹೇಳಿದರು.

ಈ ಭಾಷಣವನ್ನು ಸ್ವತಃ ಗಾಂಧೀಜಿಯವರು ಕೂಡಾ ಮೆಚ್ಚಿಕೊಂಡರು ಎಂಬುದಾಗಿ ವರದಿಯಾಗಿತ್ತು.

ಆದರೆ ಇಷ್ಟೆಲ್ಲಾ ಭಾವನೆಗಳ ಹೊರತಾಗಿಯೂ ಅಂಬೇಡ್ಕರ್‌ರವರು ಕಾಂಗ್ರೆಸ್ ಮುಂದಾಳತ್ವದ ಯಾವುದೇ ಚಳುವಳಿಗೆ ಬೆಂಬಲ ಅಥವಾ ಸಹಕಾರವನ್ನು ನೀಡಲಿಲ್ಲ. ಕಾಂಗ್ರೆಸ್‌ನ ಹಿಂದೂ ನಾಯಕತ್ವದ ಭಾಗ ವಿದೇಶಿ ನಿರಂಕುಶ ಪ್ರಭುತ್ವದ ವಿರುದ್ಧದ ತೀವ್ರ ಪ್ರತಿಕ್ರಿಯೆಯನ್ನು ಸದಾ ಅಲಕ್ಷಿಸುತ್ತಿತ್ತು. ಬ್ರಿಟಿಷರು ಅಲ್ಪಸಂಖ್ಯಾತರ ಮತ್ತು ಅಸ್ಪೃಶ್ಯರ ಬಗ್ಗೆ ತೋರಿಸುತ್ತಿದ್ದ ಕಾಳಜಿಯು ಕೇವಲ ಒಂದು ಒಡೆದು ಆಳುವ ನೀತಿಯ ಹೊರಕವಚ ಮಾತ್ರ ಆಗಿದೆ ಎನ್ನುವುದನ್ನು ಅವರಂತಹ ಯಾವುದೇ ಬುದ್ಧಿವಂತ ವ್ಯಕ್ತಿ ಗಮನಿಸದೇ ಇರಲಾಗುತ್ತಿದ್ದಿಲ್ಲ.

ಇದನ್ನು ಅವರು ಹಲವುಕಡೆ ಹೇಳಿದ್ದರು. ಗಾಂಧೀಜಿಯೂ ದೃಷ್ಟಿಕೋನದಲ್ಲಿ ಎಷ್ಟೇ ಮಿತಿಗಳಿದ್ದರೂ, ಅವರು ಅಸ್ಪೃಶ್ಯರ ಸಮಸ್ಯೆಯ ಕುರಿತು ಜನರಲ್ಲಿ ಹೊಸ ಎಚ್ಚರಿಕೆಯನ್ನು ಮೂಡಿಸಿದರು ಎನ್ನುವುದರ ಬಗ್ಗೆ ಸಂಶಯವೇ ಇಲ್ಲ. ಇದರಿಂದಾಗಿಯೇ ಸ್ವಾತಂತ್ರ್ಯಾನಂತರ ಪರಿಶಿಷ್ಟ ಜನರಿಗೆ ನೀಡಲಾದ ಮೀಸಲಾತಿಯನ್ನು ಜನ ಯಾವುದೇ ವಿವಾದಗಳಿಲ್ಲದೇ ಸ್ವೀಕರಿಸಲು ಸಾಧ್ಯವಾಯಿತು.

1932 ರಲ್ಲಿ ಬ್ರಿಟಿಷ್ ಸರಕಾರವು ಕೋಮು ತೀರ್ಪನ್ನು ಜಾರಿಗೆ ತಂದಿತು. ಇದು ಧಾರ್ಮಿಕ ಅಲ್ಪಸಂಖ್ಯಾತರಿಗೆ ಮತ್ತು ದಮನಿತ ವರ್ಗಗಳಿಗೆ ಪ್ರತ್ಯೇಕ ಚುನಾಯಕ್ ಸಮುದಾಯದ ಮುಖಾಂತರ ಪ್ರತ್ಯೇಕ ಪ್ರಾತಿನಿಧ್ಯವನ್ನು ನೀಡಿತು. ಗಾಂಧೀಜಿ ಮತ್ತು ಕಾಂಗ್ರೆಸ್ ಮುಸ್ಲಿಮರಿಗೆ ಪ್ರತ್ಯೇಕ ಚುನಾಯಕ ಸಮುದಾಯವನ್ನು ನೀಡುವುದನ್ನು ಒಪ್ಪಿಕೊಂಡರು. ಅಲ್ಲದೆ 1916 ರ ಲಕ್ನೋ ಒಪ್ಪಂದದಲ್ಲಿ ಇದನ್ನು ಆಗಲೇ ಒಪ್ಪಿಕೊಂಡೂ ಆಗಿತ್ತು. ಆದರೆ ಹರಿಜನರಿಗೆ ಪ್ರತ್ಯೇಕ ಚುನಾಯಕ ಸಮುದಾಯ ವ್ಯವಸ್ಥೆಯನ್ನು ಗಾಂಧಿಜೀಯವರು ವಿರೋಧಿಸಿದರು ಹಾಗೂ ಅದನ್ನು ತೆಗೆದುಹಾಕುವಂತೆ ಒತ್ತಾಯಿಸಿದರು. ಡಾ. ಅಂಬೇಡ್ಕರ್ ರವರು ಸೈಮನ್ ಕಮಿಷನ್ ಎದುರು ಎಲ್ಲಾ ಪ್ರತ್ಯೇಕ ಚುನಾಯಿತ ಸಮುದಾಯಗಳನ್ನು ವಿರೋಧಿಸಿದರು. ಇವುಗಳೆಲ್ಲಾ ವಿಭಾಜಕ ಶಕ್ತಿಗಳಾಗಿದ್ದವು. ಅದರ ಬದಲಿಗೆ ವ್ಯಕ್ತಿಯ ಆಸ್ತಿ ಅಥವಾ ವಿದ್ಯಾರ್ಹತೆಯನ್ನು ಗಮನಕ್ಕೆ ತೆಗೆದುಕೊಳ್ಳದೇ ಪ್ರೌಢ ಮತದಾನಕ್ಕೆ ಅವಕಾಶ ಕೊಡಬೇಕೆಂಬ ಬೇಡಿಕೆಯಿಟ್ಟರು. ಪ್ರೌಢ ಮತದಾನ ಮತ್ತು ಸೀಟುಗಳ ಮೀಸಲು ಸೌಲಭ್ಯವನ್ನು ದಮನಿತ ವರ್ಗಗಳಿಗೆ ನೀಡಬೇಕೆಂಬ ಬೇಡಿಕೆಯನ್ನು ಅವರು ಮುಂದಿಟ್ಟರು. ಒಂದು ವೇಳೆ ಪ್ರೌಢ ಮತದಾನವನ್ನು ನಿರಾಕರಿಸಿದರೆ ವಿಭಿನ್ನ ಚುನಾಯಿತ ಸಮುದಾಯವನ್ನು ಒಪ್ಪಿಕೊಳ್ಳುವುದಾಗಿ ಅವರು ಆಶಿಸಿದ್ದರು. ಬ್ರಿಟಿಷ್ ಸರ್ಕಾರವು ಪ್ರೌಢ ಮತದಾನವನ್ನು ನಿರಾಕರಿಸಿ ಎಲ್ಲಾ ಅಲ್ಪಸಂಖ್ಯಾತರಿಗೂ ಪ್ರತ್ಯೇಕ ಚುನಾವಣೆ ಸಮುದಾಯವನ್ನು ಮನ್ನಿಸಿತು.

ಗಾಂಧಿ ಇದಕ್ಕೆ ಪ್ರತಿಕ್ರಿಯೆಯಾಗಿ ಮುಸ್ಲಿಮರಿಗೆ ಪ್ರತ್ಯೇಕ ಚುನಾಯಕ ಸಮುದಾಯವನ್ನು ವಿರೋಧಿಸುವುದಿಲ್ಲವಾದರೂ ಹರಿಜನರಿಗೆ ಪ್ರತ್ಯೇಕ ಚುನಾಯಕ ಸಮುದಾಯವನ್ನು ತನ್ನ ಜೀವನದ ಬೆಲೆತೆತ್ತಾದರೂ ವಿರೋಧಿಸುವುದಾಗಿ ಹೇಳಿದ್ದರು. 1932 ರ ಸೆಪ್ಟೆಂಬರ್ 20 ರಂದು ತನ್ನ ಈ ಬೇಡಿಕೆಯನ್ನು ಒತ್ತಾಯಿಸಲು ಉಪವಾಸ ಸತ್ಯಾಗ್ರಹ ಆರಂಭಿಸಿದರು. ಪೂನಾ ಒಪ್ಪಂದದೊಂದಿಗೆ ಈ ಉಪವಾಸವು ಅಂತ್ಯಗೊಂಡಿತು. ಈ ಒಪ್ಪಂದದಲ್ಲಿ 151 ಸೀಟುಗಳನ್ನು ದಮನಿತ ವರ್ಗಗಳಿಗೆ ಮೀಸಲಿಡಲಾಯಿತು. ಹಾಗೂ ಸಂಯುಕ್ತ ಚುನಾಯಿತ ಸಮುದಾಯವನ್ನು ಒಪ್ಪಿಕೊಳ್ಳಲಾಯಿತು. ಒಂದು ರೀತಿಯಲ್ಲಿ ಈ ಒಪ್ಪಂದವು ಸೈಮನ ಕಮಿಶನ್‌ನ ಮುಂದೆ ಅಂಬೇಡ್ಕರ್ ಮಂಡಿಸಿದ್ದ ನಿಲುವಿಗೆ ಪೂರಕವಾಗಿತ್ತು. ಅಲ್ಲದೆ ಕಮ್ಯುನಲ್ ಅವಾರ್ಡ್ ನೀಡಿದ್ದ 71 ಮೀಸಲು ಸೀಟುಗಳಿಂದ(ವಿಭಿನ್ನ ಚುನಾಯಿತ ಸಮುದಾಯಗಳಲ್ಲಿ) ಪೂನಾ ಒಪ್ಪಂದದಲ್ಲಿನ 151 ಕ್ಕೆ ಮೀಸಲು ಸೀಟುಗಳು ಹೆಚ್ಚಾದದ್ದು ಕೂಡಾ ಒಂದು ಸಾಧನೆಯೆಂದು ಅಂಬೇಡ್ಕರ್ ಬೆಂಬಲಿಗರು ತಿಳಿದರು. ಪ್ರತ್ಯೇಕ ಚುನಾಯಿತ ಸಮುದಾಯಗಳಿಂದ ಹಿಂದೂಧರ್ಮವು ಒಡೆದುಹೋಗುವ ಅಪಾಯದಿಂದ ಮತ್ತು ಅಸ್ಪೃಶ್ಯತೆಯು ಖಾಯಂ ಆಗಿ ಉಳಿಯುವ ಸಾಧ್ಯತೆಯಿಂದ ತಪ್ಪಿಸಿದ ಸಮಾಧಾನವು ಗಾಂಧಿಯವರಿಗಾಯಿತು.

ಮತ್ತೆ ನೆಲದ ಎದೆಯ ಮೇಲೆ ತೆನೆಯ ಧ್ವಜವು ನಿಲ್ಲಲಿ - ದ.ರಾ.ಬೇಂದ್ರೆ

ಕೊಡಗಿನ ಗಡಿಯಲ್ಲಿ ರೈತರ ಸಮಾವೇಶ

ಮಡಿಕೇರಿಯು ರಾಜ್ಯದ ಗಡಿಯಲ್ಲಿ ಕೇರಳಕ್ಕೆ ಒತ್ತಾಗಿರುವ ಸಣ್ಣ ಗ್ರಾಮ. ಕೊಡಗು ಜಿಲ್ಲಾ ಕೇಂದ್ರದಿಂದ 65 ಕಿ.ಮಿ. ದೂರದಲ್ಲಿದೆ. ಪಶ್ಚಿಮ ಘಟ್ಟಗಳ ಪರ್ವತ ಶ್ರೇಣಿಯಿಂದ ಕೆಳಗೆ ಅರಬ್ಬೀ ಸಮುದ್ರದ ಕಡೆಗೆ ಚಾಚಿಕೊಂಡಿದೆ. ಕೊಡಗಿನಿಂದ ಭಿನ್ನವಾದ ಹವಾಗುಣದಿಂದಾಗಿ ಇಲ್ಲಿಯ ಬೆಳೆಗಳೂ ಭಿನ್ನ. ಪ್ರಮುಖ ಬೆಳೆಗಳು ಅಡಿಕೆ, ತೆಂಗು, ಗೇರುಬೀಜ, ರಬ್ಬರ್ ಮತ್ತು ಕರಿಮೆಣಸು. ವಾರ್ಷಿಕಕೃಷಿಗಳಾದ ಶುಂಠಿ, ಅರಿಶಿನ, ಮರಗೆಣಸು ಮತ್ತು ಬಾಳೆ ಇತ್ಯಾದಿಗಳಿವೆ. ಸಾಂಸ್ಕೃತಿಕವಾಗಿ ಕನ್ನಡ ಮತ್ತು ಮಲೆಯಾಳಂ ಮತ್ತು ಇದರ ಜೊತೆಗೆ ತುಳುಸೀಮೆಯ ಸಣ್ಣ ಪ್ರಭಾವವೂ ಇದೆ.

ಬವಣೆಗಳ ಅಡಕತ್ತಿಯಲ್ಲಿ ಬದುಕು

ನಮ್ಮ ಗ್ರಾಮವು ನೂರಕ್ಕೆ ನೂರರಷ್ಟು ಕೃಷಿ ಪ್ರಧಾನವಾದ ಗ್ರಾಮ. ಅತೀ ಸಣ್ಣ, ಸಣ್ಣ ಮತ್ತು ಮಧ್ಯಮ ರೈತರು. ಜೊತೆಗೆ ಕೃಷಿ ಕೂಲಿಕಾರರು ಸಾಕಷ್ಟು ಸಂಖ್ಯೆಯಲ್ಲಿದ್ದಾರೆ. ಕಳೆದ ನಾಲ್ಕು ವರ್ಷಗಳ ಮೊದಲು ರಬ್ಬರಿಗೆ ಕೆ.ಜಿ. ಒಂದಕ್ಕೆ 70 ರೂ. ಬೆಲೆ ಇತ್ತು. ಅಲ್ಲಿಂದ ಕುಸಿದ ರಬ್ಬರ್‌ನ ಬೆಲೆ ಈಗಲೂ 25 ರ ಆಸುಪಾಸಿನಲ್ಲಿದ್ದು ಅಲ್ಲಿಂದ ಮೇಲೇರಲಿಲ್ಲ. ಇದು ಬೆಳೆಗಾರರಿಗೆ ಪ್ರಥಮ ಹೊಡೆತವಾಯಿತು. ಕಳೆದ ವರ್ಷದಿಂದ (2000 ಇಸವಿ) ತೆಂಗಿನಕಾಯಿ, ಅಡಿಕೆ, ಗೇರುಬೀಜ ಮತ್ತು ಕರಿಮೆಣಸಿನ ಬೆಲೆ ಸಾರಸಗಟಾಗಿ ಕುಸಿದವು. ಇದರಿಂದಾಗಿ ಗ್ರಾಮದ ಒಟ್ಟು ಆರ್ಥಿಕ ಚಲನೆಗೆ ಮಂಕು ಕವಿದಿದೆ. ರೈತ ಕುಟುಂಬಗಳು ಕಂಗಾಲಾಗಿವೆ. ವರ್ಷದಿಂದ ವರ್ಷಕ್ಕೆ ನಿರಂತರವಾಗಿ ಉರುಳಿಹೋಗುತ್ತಿದ್ದ ಕುಟುಂಬಗಳಿಗೆ ಉರುಳು ಬಿದ್ದಿದೆ. ಮಕ್ಕಳ ಶಿಕ್ಷಣ, ಕುಟುಂಬದ ಆರೋಗ್ಯ, ಹೆಣ್ಣು ಮಕ್ಕಳ ಮದುವೆ ದೊಡ್ಡ ಹೊರೆಯಾಗತೊಡಗಿದೆ. ಕೃಷಿ ಕೂಲಿಕಾರರಿಗೆ ಕೆಲಸದ ಅವಕಾಶಗಳು ಗಣನೀಯವಾಗಿ ಇಳಿಮುಖವಾಗುತ್ತಿದೆ. ಕೃಷಿ ವಲಯದ ಹೊರತಾಗಿ ಬೇರಾವುದೇ ಉದ್ಯೋಗವಕಾಶಗಳು ಊರಿನಲ್ಲಿ ಇರುವುದಿಲ್ಲ. ಗ್ರಾಮಕ್ಕೆ ಒತ್ತಿಕೊಂಡ ನೆರೆಯ ಕೇರಳದಲ್ಲಿ ಗೇರುಬೀಜ ಪ್ಲಾಂಟೇಶನ್ ನಿಗಮದ ಸಾವಿರಾರು ಎಕ್ರೆ ಗೇರುಬೀಜ ತೋಟವಿದೆ. ಕೆಲವು ತಿಂಗಳುಗಳ ಕಾಲ ಅಲ್ಲಿ ಕೆಲಸ ಸಿಗುವ ಕಾರಣ ಕೂಲಿಕಾರ ವರ್ಗಕ್ಕೆ ಒದಗಬಹುದಾಗಿದ್ದ ಸಂಕಷ್ಟ ಸ್ವಲ್ಪ ತಪ್ಪಿದೆ.

ಜನರ ನಡುವೆ ಯುವಜನ ಅಪೂರ್ವಸ್ಪಂದನ

ಈ ಒಟ್ಟು ಸ್ಥಿತಿಯನ್ನು ಗಮನಿಸಿಕೊಂಡು ಜನರ ನಡುವೆ ಹಲವಾರು ವರ್ಷಗಳಿಂದ ಸಕ್ರಿಯವಾಗಿರುವ ಡಿವೈಎಫ್ಐ ರೈತರ ಇಂದಿನ ಸ್ಥಿತಿಗೆ ಕಾರಣವನ್ನು ಜನರ ಮಧ್ಯೆ ಪ್ರಚಾರ ನಡೆಸಿ ರೈತರನ್ನು ಈಗಿನ ಸಂದರ್ಭಕ್ಕೆ ಅಣಿನೆರೆಸುವ ಕಾರ್ಯವನ್ನು ಕೈಗೆತ್ತಿಕೊಂಡಿತು.

ಫೆ. 25 ರಂದು ರೈತ ಸಮಾವೇಶವನ್ನು ಏರ್ಪಡಿಸಲು ನಿಶ್ಚಯಿಸಿ ಸ್ವಾಗತ ಸಮಿತಿಯನ್ನು ರೂಪೀಕರಿಸಲಾಯ್ತು. ಕರಪತ್ರವನ್ನು ಅಚ್ಚು ಹಾಕಿಸಿ ಡಿವೈಎಫ್ಐ ಕಾರ್ಯಕರ್ತರ ತಂಡ ಮನೆ ಮನೆ ಭೇಟಿ ಕಾರ್ಯಕ್ರಮವನ್ನು ಹಮ್ಮಿಕೊಂಡಿತು. ಅದು ಒಂದು ಅದ್ಭುತ ಅನುಭವವಾಗಿತ್ತು. ಜನರು ನಾವು ತಿಳಿಸುತ್ತಿದ್ದ ವಿಷಯಗಳಿಗೆ ಜನ ಸ್ಪಂದಿಸುತ್ತಿದ್ದರು. ಡಿವೈಎಫ್ಐ ಕಾರ್ಯಕರ್ತರಿಗೂ ರೈತರಿಗೂ ನಡುವೆ ಬಲವಾದ ಸಂಬಂಧ ಬೆಳೆಯತೊಡಗಿದೆ. ಕೃಷಿ ವಲಯದ ಕುಸಿತಕ್ಕೆ ಕಾರಣವನ್ನು ವಿಶ್ಲೇಷಿಸಿ ಅವರ ಅಭಿಪ್ರಾಯವನ್ನು ಸಂಗ್ರಹಿಸಿತು. ಫೆ. 25 ರಂದು ನಡೆಸಲು ಉದ್ದೇಶಿಸಿದ್ದ ರೈತ ಸಮಾವೇಶದ ಬಗ್ಗೆ ಪ್ರಚಾರ ನಡೆಸಿತು. ಸಮಾವೇಶದ ಖರ್ಚಿಗೆ ಸಂಭಾವನೆಯನ್ನು ಸಂಗ್ರಹಿಸಿತು. ಜನರ ಪ್ರತಿಕ್ರಿಯೆಯು ಅತ್ಯಂತ ಪೂರಕವಾಗಿತ್ತು.

ಸಮಾವೇಶವನ್ನು ಉದ್ಘಾಟಿಸಿ ಎ.ಕೆ.ಸುಬ್ಬಯ್ಯನವರು ಮಾತನಾಡಿದರು. ಕೇಂದ್ರದ ಬಿಜೆಪಿ ನೇತೃತ್ವದ ಸರಕಾರ ರೈತರನ್ನು ವಿದೇಶಿ ಶಕ್ತಿಗಳಿಗೆ ಬಲಿಕೊಡುತ್ತಿರುವುದನ್ನು ವಿವರಿಸಿದರು. ಮುಖ್ಯ ಭಾಷಣಕಾರರಾಗಿ ಎಸ್.ವೈ.ಗುರುಶಾಂತ್‌ರವರು ಅತ್ಯಂತ ಸರಳವಾಗಿ ಕೃಷಿ ವಲಯದ ಈ ಕುಸಿತಕ್ಕೆ ಇರುವ ಕಾರಣಗಳನ್ನು ಮತ್ತು ಇದರಿಂದ ಪಾರಾಗಬಹುದಾದ ಮಾರ್ಗಗಳ ಬಗ್ಗೆ, ಒಮ್ಮೆ ಮಾರುಕಟ್ಟೆ ಪ್ರವೇಶಿಸಿ, ಹಿಡಿತ ಸಾಧಿಸಿ ನಂತರ ಭಾರತದ ಮಾರುಕಟ್ಟೆಯಲ್ಲಿ ಮನಬಂದಂತೆ ವರ್ತಿಸುವ ವಿದೇಶಿ ಕಂಪನಿಗಳ ದುಷ್ಟ ಯೋಜನೆಯನ್ನು ಬಿಡಿಸಿಟ್ಟು ಒಂದು ಸಮಗ್ರವಾದ ಪರಿಚಯವನ್ನು ನೀಡಿದರು. ಮುಖ್ಯ ಅತಿಥಿಗಳಾಗಿ ಬಿ.ಸಿ.ಜಯರಾಮಗೌಡ, ಎ.ಸಿ.ನಂದನ ಮುಂತಾದವರು ಮಾತನಾಡಿದರು.

- ರಮಾನಾಥ್ ಬಿ.ಎಸ್.




ಸಮಾವೇಶ ಉದ್ಘಾಟಿಸಿದ ಎ.ಕೆ.ಸುಬ್ಬಯ್ಯನವರು



ಬಾಬ್ರಿ ಆಯೋಗದ ಮುಂದೆ ಅಡ್ವಾಣಿ ಸಾಕ್ಷ್ಯ

ಜನಗಳನ್ನು ಮರುಳು ಮಾಡುವ ಇನ್ನೊಂದು ಪ್ರಯತ್ನ



ಹರ್ಕಿಶನ್ ಸಿಂಗ್ ಸುರ್ಜಿತ್

ಬಾಬ್ರಿ ಮಸೀದಿ ಧ್ವಂಸದ ಪ್ರಕರಣದ ತನಿಖೆ ನಡೆಸುತ್ತಿರುವ ನ್ಯಾಯಮೂರ್ತಿ ಎಂ.ಎಸ್.ಲಿಬರ್‌ಹಾನ್ ಆಯೋಗದ ಮುಂದೆ ಕೇಂದ್ರ ಗೃಹಮಂತ್ರಿ ಎಲ್.ಕೆ.ಅಡ್ವಾಣಿ ಮೊದಲ ಬಾರಿಗೆ ನೀಡಿರುವ ಸಾಕ್ಷಿ ಒಂದು ವಂಚನೆಯ ಕಸರತ್ತು ಎಂದೇ ಹೇಳಬೇಕಾಗುತ್ತದೆ.ಅದು ಈ ದೇಶದ ಜನಗಳನ್ನು ದಾರಿತಪ್ಪಿಸಲೆಂದೇ ನಡೆಸಿರುವ ಮತ್ತೊಂದು ಪ್ರಯತ್ನ.

ಬಾಬ್ರಿ ಮಸೀದಿ ಧ್ವಂಸದಲ್ಲಿ ಅಡ್ವಾಣಿಯವರ ಪಾತ್ರ ಬೇಕಿನಷ್ಟು ಸ್ಪಷ್ಟ. ಆದರೂ ಅವರು ಆಯೋಗದ ಮುಂದೆ ಮೊಸಳೆ ಕಣ್ಣೀರು ಸುರಿಸಿದ್ದಾರೆ, ಅದರ ನಡುವೆಯೂ ಆರ್. ಎಸ್. ಎಸ್. ಪಾತ್ರವನ್ನು ವೈಭವೀಕರಿಸಲು ಪ್ರಯತ್ನಿಸಿದ್ದಾರೆ.

ಮಸೀದಿ ಧ್ವಂಸ ಅವರಿಗೆ 'ದುರದೃಷ್ಟಕರ ಮತ್ತು ನೋವಿನ ' ಸಂಗತಿಯಂತೆ! ಡಿಸೆಂಬರ್ 6,1992ರಂದು ಅವರನ್ನಾವರಿಸಿದಂತಹ ಉತ್ಕಟ ವಿಷಾದ ಭಾವವನ್ನು ಅವರ ಜೀವನದಲ್ಲಿ ಹಿಂದೆಂದೂ ಅವರು ಅನುಭವಿಸಿರಲಿಲ್ಲವಂತೆ! ತನ್ನ ಪಕ್ಷ ಬೆಂಬಲಿಸುವ 'ಅಯೋಧ್ಯಾ ಆಂದೋಲನ'ದ ದೃಷ್ಟಿಯಿಂದಲೂ ಅದೊಂದು ದುರದೃಷ್ಟಕರ ಘಟನೆಯೆಂದಿದ್ದಾರೆ!

ಇವೆಲ್ಲಾ ಎಷ್ಟು ದೊಡ್ಡ ಸುಳ್ಳುಗಳು ಎಂದು ಅವರು ಈ ಹಿಂದೆ ನೀಡಿದ್ದ ಹೇಳಿಕೆಗಳನ್ನು ನೆನಪಿಸಿಕೊಂಡರೇ ಸ್ಪಷ್ಟವಾಗುತ್ತದೆ. ಏಪ್ರಿಲ್ 11ರ 'ಇಂಡಿಯನ್ ಎಕ್ಸ್‌ಪ್ರೆಸ್' ದೈನಿಕ ನೆನಪಿಸಿರುವ ಅವರ ಹಿಂದಿನ ಹೇಳಿಕೆಗಳನ್ನು ನೋಡಿದರೆ ಅಡ್ವಾಣಿಯವರು 'ವಿಶ್ವವಿದ್ಯಾಲಯ' ಎಂದಿರುವ ಆರ್.ಎಸ್.ಎಸ್. ತನ್ನ 'ವಿದ್ಯಾರ್ಥಿ'ಗಳಿಗೆ ಎಂತಹ 'ನೈತಿಕ ಶಿಕ್ಷಣ' ನೀಡುತ್ತಿದೆ ಎಂದು ತಿಳಿಯುತ್ತದೆ.

ಆ ದೈನಿಕದ ಪ್ರಕಾರ ಆರ್.ಎಸ್.ಎಸ್.ನ ಹಿಂದೀ ಪತ್ರಿಕೆ 'ಪಾಂಚಜನ್ಯ'ದಲ್ಲಿ ಬರೆಯುತ್ತಾ ಇದೇ ಅಡ್ವಾಣಿಯವರು ಈ ಧ್ವಂಸ ಕೃತ್ಯದ ಬಗ್ಗೆ ತನಗೆ 'ನಾಚಿಕೆ 'ಯೇನೂ ಇಲ್ಲ , ಈ ಬಗ್ಗೆ 'ವಿಧವಾ ವಿಲಾಪ 'ಕ್ಕೆ ಕಾರಣವೇನೂ ಇಲ್ಲ ಎಂದಿದ್ದರು! 1990ರ ಅವರ ರಥಯಾತ್ರೆ ಬಾಬ್ರಿ ಮಸೀದಿ ಧ್ವಂಸಕ್ಕೆ ಹಾದಿ ಮಾಡಿಕೊಟ್ಟಿತು ಎಂದು ನಮಗೆಲ್ಲರಿಗೂ ಗೊತ್ತು. ಈ ರಥಯಾತ್ರೆಯ ಕುರಿತು ಅಡ್ವಾಣಿಯವರು ಆಯೋಗದ ಎದುರು ಉಜ್ವಲ ವರ್ಣನೆ ನೀಡಿವರು. ಅತ್ಯುತ್ಸಾಹದಿಂದ ಕೆಲವು 'ಸ್ವಯಂಸೇವಕರು' ಮಸೀದಿಯನ್ನು ಬೀಳಿಸಿದರು ಎಂದು ಅವರು ಆಪಾದಿಸಿದರು. ಆದರೆ ಮರುದಿನದ ಪತ್ರಿಕೆಗಳಲ್ಲೆಲ್ಲಾ ವ್ಯಾಪಕ ಪ್ರಚಾರ ಪಡೆದ ಸಂತೋಷದಿಂದ ಅರಳಿದ್ದ ಅವರ ಭಾವಚಿತ್ರಗಳನ್ನು ಯಾರು ತಾನೇ ಮರೆಯಲು ಸಾಧ್ಯ? ಉಮಾ ಭಾರತಿ ಸಂತೋಷಾತಿರೇಕದಿಂದ ಜೋಷಿ,. ಅಡ್ವಾಣಿಯವರನ್ನು ಆಲಿಂಗಿಸಿಕೊಂಡ ಭಾವಚಿತ್ರಗಳನ್ನು ಯಾರು ತಾನೇ ಮರೆಯಲು ಸಾಧ್ಯ?

ಸಂಘ ಪರಿವಾರದ ಗೋಸುಂಬೆತನ

ಕೇಂದ್ರ ಗೃಹಮಂತ್ರಿಗಳು ಲಿಬರ್‌ಹಾನ್ ಆಯೋಗದ ಎದುರು ನೀಡಿದ ಸಾಕ್ಷ್ಯ ಒಂದೆಡೆ ಆರ್.ಎಸ್.ಎಸ್. ಮತ್ತು ಅದರ ಅಂಗ ಸಂಸ್ಥೆಗಳ ಗೋಸುಂಬೆತನವನ್ನು ಎತ್ತಿ ತೋರಿದರೆ, ಇನ್ನೊಂದೆಡೆ ಈ ಕಾವಿಪಡೆಗಳು ಎದುರಿಸುತ್ತಿರುವ ಉಭಯ ಸಂಕಟವನ್ನು ಕೂಡಾ ಎತ್ತಿ ತೋರಿದೆ.

ಗೋಸುಂಬೆತನದ ಬಗ್ಗೆ ಮೊದಲು ನೋಡೋಣ. ಆರ್.ಎಸ್.ಎಸ್. ಸ್ವಾತಂತ್ರ್ಯ ಹೋರಾಟದಲ್ಲಿ ಎಂದೂ ಭಾಗವಹಿಸಲಿಲ್ಲ, ಮಾತ್ರವಲ್ಲ,ಹಲವು ಸಂದರ್ಭಗಳಲ್ಲಿ ಬ್ರಿಟಿಶ್ ಸಾಮ್ರಾಜ್ಯಶಾಹಿಗಳ ಪರವಾಗಿ ಕೆಲಸ ಮಾಡಿದೆ ಎಂದು ಎಲ್ಲರಿಗೂ ತಿಳಿದಿದೆ. ಆದರೂ ಕೇಂದ್ರದಲ್ಲಿ ಹೇಗಾದರೂ ಅಧಿಕಾರ ಗಿಟ್ಟಿಸಬೇಕು ಎಂಬ ಆಕಾಂಕ್ಷೆ ಇಟ್ಟುಕೊಂಡ ಸಂಘಟನೆಯಿದು. ದೇಶದಲ್ಲಿ ಒಂದು ಮತೀಯ ಪ್ರಭುತ್ವವನ್ನು ಸಾಧಿಸುವುದು ಅದರ ಉದ್ದೇಶ. ಈ ಉದ್ದೇಶ ಸಾಧನೆಗಾಗಿ ಅದು ವಿವಿಧ ಕ್ಷೇತ್ರಗಳಲ್ಲಿ, ಪ್ರದೇಶಗಳಲ್ಲಿ ಕೆಲಸ ಮಾಡುವ ಹಲವು ಸಂಘಟನೆಗಳನ್ನು ಹುಟ್ಟು ಹಾಕಿದೆ. ಇವುಗಳ ಮರೆಯಲ್ಲಿ ತನ್ನ ಮೂಲ ಉದ್ದೇಶವನ್ನು ಅದು ಈಡೇರಿಸಿಕೊಳ್ಳಲು ಪ್ರಯತ್ನಿಸುತ್ತಾ ಬಂದಿದೆ. ಇವುಗಳಲ್ಲಿ ಬಿಜೆಪಿ, ವಿಹೆಚ್‌ಪಿ, ಭಜರಂಗ ದಳ, ಸ್ವದೇಶಿ ಜಾಗರಣಾ ಮಂಚ್ ಇತ್ಯಾದಿ ಅಖಿಲ ಭಾರತ ಸಂಘಟನೆಗಳು. ಆದರೆ ಕೆಳಗಿನ ವಿವಿಧ ಮಟ್ಟಗಳಲ್ಲಿ ಕೆಲಸ ಮಾಡುವ ಹತ್ತು ಸಾವಿರಕ್ಕೂ ಹೆಚ್ಚು ಸಂಘಟನೆಗಳನ್ನು ಆರ್ ಎಸ್ ಎಸ್ ಹುಟ್ಟು ಹಾಕಿದೆ 'ಎಂದು ಅಂದಾಜು ಮಾಡಲಾಗಿದೆ.

ಆರ್ ಎಸ್ ಎಸ್ ನ ಚಟುವಟಿಕೆಗಳನ್ನು ವೀಕ್ಷಿಸುತ್ತಿರುವವರ ಗಮನ ಸೆಳೆದಿರುವ ಒಂದು ಮುಖ್ಯ ಸಂಗತಿಯೆಂದರೆ ಆರ್ ಎಸ್ ಎಸ್ ಮತ್ತು ಎಲ್ಲಾ ಸಂಘಟನೆಗಳ ಗೋಸುಂಬೆತನ ಮತು ವಂಚನೆ. ವಾಸ್ತವವಾಗಿ ಅವರು ಇದನ್ನು ಒಂದು ಕುಶಲ ಕಲೆಯಾಗಿ ಕರಗತ ಮಾಡಿಕೊಂಡಿದ್ದಾರೆ. **ಒಂದೇ ವಿಷಯದ ಮೇಲೆ ಒಂದೊಂದು ಸಂಘಟನೆ ಒಂದೊಂದು ಹೇಳಿಕೆ ನೀಡಿ ಜನಗಳಲ್ಲಿ ಗೊಂದಲ ಉಂಟುಮಾಡಿ ಸಂಘಪರಿವಾರದ ನಿಜ ಉದ್ದೇಶವನ್ನು ಮರೆ ಮಾಚುವುದು ಅವರು ಸದಾ ಅನುಸರಿಸಿಕೊಂಡು ಬಂದಿರುವ ವಿಧಾನ.** ಉದಾ: ಕೇಂದ್ರದ ಬಿಜೆಪಿ ನೇತೃತ್ವದ ಸರಕಾರದ ಬಹುರಾಷ್ಟ್ರೀಯ ಕಂಪನಿಗಳನ್ನು, ಸಾಮ್ರಾಜ್ಯಶಾಹಿ ಹಣಕಾಸು ಬಂಡವಾಳವನ್ನು ಸಂತುಷ್ಟಗೊಳಿಸಲು ಸರ್ವಪ್ರಯತ್ನ ನಡೆಸುತ್ತಿದ್ದರೆ, ಸ್ವದೇಶಿ ಜಾಗರಣಾ ಮಂಚ್ 'ಸ್ವದೇಶಿ' ಯ ಬೊಬ್ಬೆ ಹಾಕುತ್ತಾ ಸರಕಾರದ ನೀತಿಗಳಿಂದ ಉಂಟಾದ ಅಸಂತೃಪ್ತಿಯನ್ನು ಕೂಡ ಆರ್ ಎಸ್ ಎಸ್ ತಂತ್ರಕ್ಕೆ ಪರವಾಗಿ ಕ್ರೋಢೀಕರಿಸುವ ಪ್ರಯತ್ನ ನಡೆಸಿದೆ. ಅದೇ ರೀತಿ ಬಿಜೆಪಿ ರಾಮ ದೇವಸ್ಥಾನ ಕಟ್ಟುವ ಕೆಲಸ ಈಗ ತನ್ನ ಅಜೆಂಡಾದಲ್ಲಿ ಇಲ್ಲ ಎನ್ನುತ್ತಿದ್ದರೆ, ವಿಹೆಚ್ ಪಿ ಆ ಪ್ರಶ್ನೆಯ ಮೇಲೆ ಕರ್ಣಕರ್ಕಶ ಪ್ರಚಾರ ನಡೆಸಿದೆ.

ಈ ಹಿಂದೆ ವಿಹೆಚ್‌ಪಿ ಆಯೋಧ್ಯ ವಿವಾದದ ಬಗ್ಗೆ ಪ್ರಚಾರ ಮಾಡುತ್ತಿದ್ದಾಗ ಕೂಡ ಬಿಜೆಪಿ ತನಗೂ ಅದಕ್ಕೂ ಸಂಬಂಧವಿಲ್ಲ ಎನ್ನುತ್ತಿತ್ತು. ಆದರೆ ವಿಪಿ ಸಿಂಗ್ ಸರಕಾರ ಹಿಂದುಳಿದ ವರ್ಗಗಳಿಗೆ ಮೀಸಲಾತಿ ಕುರಿತ ಮಂಡಲ್ ಆಯೋಗದ ಶಿಫಾರಸುಗಳನ್ನು ಜ್ಯಾರಿಮಾಡಲು ನಿರ್ಧರಿಸಿದಾಗ ಅಡ್ವಾಣಿ ರಥಯಾತ್ರೆ ಆರಂಭಿಸಿ ಬಿಜೆಪಿ ನೇರವಾಗಿ ವಿಹೆಚ್‌ಪಿ ಯ ಚಳವಳಿಯಲ್ಲಿ ಧುಮುಕಿದ್ದು, ಅದರ ಬೆನ್ನಲ್ಲೆ ಹರಿದ ರಕ್ತದ ಹೊಳೆ, ಕೊನೆಗೆ ಬಾಬ್ರಿ ಮಸೀದಿ ಧ್ವಂಸ ಹಾಗೂ ನಂತರದ ಘಟನೆಗಳು ಈಗ ಇತಿಹಾಸದ ಭಾಗ.

ಇಲ್ಲೊಂದು ಕುತೂಹಲದ ಸಂಗತಿಯೆಂದರೆ ಅಡ್ವಾಣಿಯವರು ತಾನು ಫ್ಯಾಸಿಸ್ಟ್ ಅಲ್ಲ ಎಂದು ಆಯೋಗದ ಎದುರು ಹೇಳಿಕೊಂಡರು. ಅವರು ಫ್ಯಾಸಿಸ್ಟ್ ಎಂದು ನ್ಯಾಯಸ್ಥಾನದಲ್ಲಿ ಯಾರೂ ಅಪಾದಿಸಿರಲಿಲ್ಲ. ಆದರೆ ಆರ್. ಎಸ್. ಎಸ್‌ನ ಕಾರ್ಯವಿಧಾನ ಅದರ ಫ್ಯಾಸಿಸ್ಟ್ ಮಾದರಿಯ, ಪಿತೂರಿಕಾರಕ ಸ್ವರೂಪಕ್ಕೆ ಇರುವ ಪ್ರತ್ಯಕ್ಷ ಸಾಕ್ಷಿ.

ಕಾವಿ ಪಡೆಗಳ ಉಭಯ ಸಂಕಟ

ಈ ಎರಡನೇ ಅಂಶಕ್ಕೂ ಮೇಲೆ ಹೇಳಿದ ಮೊದಲಿನ ಅಂಶಕ್ಕೂ ನಿಕಟ ಸಂಬಂಧವಿದೆ. ಕಾವಿ ಪಡೆಗಳು ಪಿತೂರಿಕಾರಕ ವಿಧಾನಗಳನ್ನು ಎಷ್ಟೇ ಬಳಸಿದರೂ ಅಧಿಕಾರದ ಬಳಿ ಸುಳಿಯುವುದೂ ಅವರಿಗೆ ಆಗಲಿಲ್ಲ. ಆಗ ಅವರು ತಮ್ಮ ತಂತ್ರ ಬದಲಿಸಿ ಇತರರನ್ನು ಇದಕ್ಕಾಗಿ ಬಳಸಿಕೊಳ್ಳಲು ನಿರ್ಧರಿಸಿದರು. ಜನ ಸಂಘವನ್ನು 1977ರಲ್ಲಿ ಜನತಾ ಪಾರ್ಟಿಯಲ್ಲಿ ವಿಲೀನಗೊಳಿಸಿ ಅದನ್ನು ಒಳಗಿನಿಂದ ನಿಯಂತ್ರಿಸುವ ಪ್ರಯತ್ನ ನಡೆಸಿದರು. ಆದರೆ ಅವರ ಆಕಾಂಕ್ಷೆ ಈಡೇರಲಿಲ್ಲ. ದೇಶದ ಧರ್ಮನಿರಪರೇಕ್ಷ ಜನತೆ ಅದಕ್ಕೆ ಅವಕಾಶ ನೀಡಲಿಲ್ಲ. ಹೇಗೋ 1996 ರಲ್ಲಿ ಸರ್ಕಾರ ರಚಿಸುವ ಅವಕಾಶ ಬಂದರೂ ಬಹುಮತ ಗಳಿಸಲಾಗದೆ 13 ದಿನಗಳಲ್ಲೇ ಮುಖಕ್ಕೆ ಮಸಿಬಳಿಸಿಕೊಳ್ಳ ಬೇಕಾಯಿತು.



ತಾನಾಗಿ ಅಧಿಕಾರಕ್ಕೆ ಬರುವುದು ಎಂದೂ ಸಾಧ್ಯವಿಲ್ಲ ಎಂದು ಮನಗಂಡ ಬಿಜೆಪಿ ಇತರ ಪಕ್ಷಗಳೊಂದಿಗೆ ಮೈತ್ರಿಗೆ ಪ್ರಯತ್ನ ಆರಂಭಿಸಿತು. 1998ರ ಲೋಕಸಭಾ ಚುನಾವಣೆಗಳ ನಂತರ 12 ಪಕ್ಷಗಳನ್ನು ಜೊತೆಗೂಡಿಸಿ ಎನ್ ಡಿ ಎ ರಚಿಸಿತು. 1999ರ ಲೋಕ ಸಭಾ ಚುನಾವಣೆಗಳ ವೇಳೆಗೆ ಅದನ್ನು ವಿಸ್ತರಿಸಿ 2 ಡಜನ್ ಪಕ್ಷಗಳ ಮೈತ್ರಿ ಕೂಟ ರಚಿಸಿಕೊಂಡಿತು. ಆದರೂ ಬಹುಮತ ಪಡೆಯಲಾಗಲಿಲ್ಲ ಎಂಬುದು ಬೇರೆ ಮಾತು. ಈಗಲೂ ಅದು ಹೊರಗಿನಿಂದ ತೆಲುಗುದೇಶಂ ಪಕ್ಷದ ಬೆಂಬಲವನ್ನು ಅದು ಅವಲಂಬಿಸಿದೆ.

ಇಲ್ಲಿಯೇ ಕಾವಿ ಪಡೆಗಳ ಮುಂದಿರುವ ಉಭಯಸಂಕಟ ನಮಗೆ ಕಾಣುವುದು. 1998ರಲ್ಲಿ ಎನ್ ಡಿ ಎ ರಚನೆಗೊಂಡಾಗ ಬಿಜೆಪಿ ರಾಮ ದೇವಸ್ಥಾನ ಮುಂತಾದ ತನ್ನ ಪ್ರಿಯ ವಿವಾದಾತ್ಮಕ ವಿಷಯಗಳನ್ನು ಬದಿಗಿಡಬೇಕಾಯಿತು. ಏಕೆಂದರೆ ಅದರೊಂದಿಗೆ ಕೈಮಿಲಾಯಿಸಿದ್ದ ಪಕ್ಷಗಳಲ್ಲಿ ಹಲವು ಮೂಲತ: ಧರ್ಮ ನಿರಪೇಕ್ಷ ಪಕ್ಷಗಳು; ಕೇವಲ ಅಧಿಕಾರದಾಹದಿಂದಾಗಿ ಬಿಜೆಪಿಯೊಂದಿಗೆ ಕೈಮಿಲಾಯಿಸಿದ್ದ ಪಕ್ಷಗಳವು. ಅದೇರೀತಿ ಈ ಕೂಟದ ಬಹಳಷ್ಟು ಪಕ್ಷಗಳು ಪ್ರಾದೇಶಿಕ ಪಕ್ಷಗಳು. ಇವು ಒಕ್ಕೂಟ ತತ್ವವನ್ನು ಪ್ರತಿಪಾದಿಸುವಂತಹವು. ಆದರೆ ಬಿಜೆಪಿ ತದ್ವಿರುದ್ಧ ನಿಲುವು ಹೊಂದಿರುವಂತದ್ದು.

ಹೀಗೆ ಬಿಜೆಪಿ ಒಂದು ವಿಭಿನ್ನ, ಪರಸ್ಪರ ವಿರೋಧಿ ತತ್ವ ಸಿದ್ಧಾಂತಗಳ ಕೂಟದ ನೇತೃತ್ವ ವಹಿಸಿಕೊಂಡು, ಅದನ್ನು ಹೇಗಾದರೂ ನಿಭಾಯಿಸಿ ಅಧಿಕಾರದಲ್ಲಿ ಉಳಿಯಲು ಏನೇನೋ ಕುತಂತ್ರ ನಡೆಸುತ್ತಿದೆ.

ಇನ್ನೊಂದೆಡೆ ಆರ್‌ಎಸ್‌ಎಸ್ ಕಾರ್ಯಕರ್ತರ ಚಡಪಡಿಕೆ ಹೆಚ್ಚುತ್ತಿದೆ. ಏಕೆಂದರೆ ಬಿಜೆಪಿ ನೇತೃತ್ವದ ಸರ್ಕಾರ ಬಂದರೂ ತಮ್ಮ ಕನಸುಗಳು ಈಡೇರುವ ಲಕ್ಷಣಗಳೇ ಅವರಿಗೆ ಕಾಣುತ್ತಿಲ್ಲ. ತಮ್ಮ ಆಧಾರಭೂತ ವಿಷಯಗಳನ್ನೇ, ತಮ್ಮ ಅಸ್ತ್ರಗಳನ್ನೇ ಅವರು ಬದಿಗಿಡಬೇಕಾದ ಪರಿಸ್ಥಿತಿಯಲ್ಲಿದ್ದಾರೆ. ಉದಾರವಾದೀ ಎಂದೆನಿಸಿಕೊಂಡ ವಾಜಪೇಯಿ ತಾನೊಬ್ಬ ಸ್ವಯಂಸೇವಕ ಎಂದು ಹೇಳಿಕೊಂಡರೂ ಏಕೆ ಏನು ಮಾಡಲಾಗುತ್ತಿಲ್ಲ ಎಂಬ ಕಸಿವಿಸಿ ಅವರಿಗೆ. ವಾಜಪೇಯಿಯನ್ನು ಬಿಡಲು ಸಾಧ್ಯವಿಲ್ಲ ಎಂದು ಸಂಘಪರಿವಾರಕ್ಕೆ ಗೊತ್ತಿದೆ, ಸಂಘಪರಿವಾರದ ಬೆಂಬಲವಿಲ್ಲದಿದ್ದರೆ ತಾನೇನೂ ಮಾಡಲಾರೆ ಎಂದೂ ವಾಜಪೇಯಿಗೂ ಗೊತ್ತಿದೆ. ಅಧಿಕಾರವನ್ನು ಲಂಗುಲಗಾಮಿಲ್ಲದೆ ಚಲಾಯಿಲಾಗದ ಹತಾಶೆ ಆರ್ ಎಸ್ ಎಸ್ ಗೆ.

ಈ ಹಿನ್ನೆಲೆಯಲ್ಲಿ ಬಿಜೆಪಿ ತಾನು ಹಿಂದುತ್ವದ ದಾರಿ ಬಿಟ್ಟಿಲ್ಲ ಎಂದು ಆರ್ ಎಸ್ ಎಸ್ ಕಾರ್ಯಕರ್ತರಿಗೆ ಆಶ್ವಾಸನೆ ನೀಡಲು ಪ್ರಯತ್ನಿಸುತ್ತಿದೆ.

ಈಗೇನು ಮಾಡಬೇಕು ?

ಈ ಒತ್ತಡಗಳೇನೇ ಇದ್ದರೂ ಬಿಜೆಪಿ ಆಳ್ವಿಕೆ ರಾಷ್ಟ್ರೀಯ ಐಕ್ಯತೆ, ಕೋಮು ಸಾಮರಸ್ಯ, ಮತ್ತು ದೇಶದ ಧರ್ಮನಿರಪೇಕ್ಷ ಅಡಿಗಲ್ಲಿಗೆ ಹಾಗೂ ಜನಗಳ ಆರ್ಥಿಕ ಒಳಿತಿಗೂ ಒಡ್ಡಿರುವ ಅಪಾಯವೇನೂ ತಗ್ಗಿಲ್ಲ. ಈಗ ತೆಹಲ್ಕಾ ಪ್ರಕರಣ ಈ ಸರಕಾರದ ಕೈಗಳಲ್ಲಿ ದೇಶದ ಭದ್ರತೆಯೂ ಸುರಕ್ಷಿತವಾಗಿಲ್ಲ ಎಂದೂ ತೋರಿಸಿದೆ. ಸರಕಾರದ ಈ ನಿರ್ಲಕ್ಷ್ಯವೇ ಕಾರ್ಗಿಲ್ ನಲ್ಲಿ ಪಾಕಿಸ್ತಾನೀ ನುಸುಳಿಕೆಗೆ ಅವಕಾಶ ನೀಡಿತು ಎಂಬುದನ್ನಿಲ್ಲಿ ನೆನಪಿಸಿಕೊಳ್ಳಬೇಕು.ನಮ್ಮ ಸೈನಿಕರ ಅಸಾಮಾನ್ಯ ಶೌರ್ಯ,ಬಲಿದಾನಗಳು ಮಾತ್ರವೇ ನಮ್ಮನ್ನು ಉಳಿಸಿತು. ಈ ಸರಕಾರ ಎಷ್ಟು ಬೇಗ ತೊಲಗುತ್ತದೋ, ಅಷ್ಟು ದೇಶಕ್ಕೆ ಜನಗಳಿಗೆ ಒಳ್ಳೆಯದು.

ಆದರೆ ಇದು ತಾನಾಗಿ ನಡೆಯುವ ಪ್ರಕ್ರಿಯೆ ಅಲ್ಲ. ಈಗಿನ ಸನ್ನಿವೇಶ ಉಂಟುಮಾಡಿರುವ ಅಸಂತೃಪ್ತಿಯನ್ನು ಪರಸ್ಪರ ಕಿತ್ತಾಟಗಳತ್ತ ದಾರಿ ತಪ್ಪಿಸಲು, ಜನಗಳ ಐಕ್ಯತೆಯನ್ನು ಮುರಿಯಲು ಪ್ರತಿಗಾಮಿ ಮತ್ತು ಕೋಮುವಾದಿ ಶಕ್ತಿಗಳ ಪ್ರಯತ್ನಿಸುತ್ತಿವೆ. ಇದನ್ನು ತಪ್ಪಿಸಲು ಎಡ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳು ಎಷ್ಟು ಸಾಧ್ಯವೋ ಅಷ್ಟು ಶಕ್ತಿಯನ್ನು ಕ್ರೋಢೀಕರಿಸಿ ಮಧ್ಯೆ ಪ್ರವೇಶಿಸಬೇಕು. ಸಂಯುಕ್ತ ಕಾರ್ಯಾಚರಣೆ ಮೂಲಕ ಮಾತ್ರವೇ ದೇಶವನ್ನು ಬಿಜೆಪಿ ನೇತೃತ್ವದ ಆಡಳಿತ ಹಿಡಿತದಿಂದ ಕೆಸರಿನಿಂದ ಮೇಲೆತ್ತಿ ಉಳಿಸಲು ಸಾಧ್ಯ.

ಸುಳ್ಳು ಹೇಳಿದ ರಾಯರು



ಮಾಜಿ ಪ್ರಧಾನಿ ನರಸಿಂಹರಾಯರು ಲಿಬರ್‌ಹಾನ್ ಆಯೋಗದ ಎದುರು ನೀಡಿದ ಹೇಳಿಕೆಯ ಬಗ್ಗೆ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಹರ್ಕಿಶನ್ ಸಿಂಗ್ ಸುರ್ಜಿತ್ ಈ ಕೆಳಗಿನ ಹೇಳಿಕೆಯನ್ನು ನೀಡಿದ್ದಾರೆ:

ಶ್ರೀ ನರಸಿಂಹರಾವ್ ,ಭಾರತದ ಮಾಜಿ ಪ್ರಧಾನ ಮಂತ್ರಿ, ನ್ಯಾಯಮೂರ್ತಿ ಲಿಬರ್ ಹಾನ್ ಆಯೋಗದ ಎದುರು ಕೆಲವು ಆಧಾರವಿಲ್ಲದ ಹೇಳಿಕೆಗಳನ್ನು ಕೊಟ್ಟಿದ್ದಾರೆ. ನವಂಬರ್ 1992ರಲ್ಲಿ ನಡೆದ ರಾಷ್ಟ್ರೀಯ ಸಮಗ್ರತಾ ಮಂಡಳಿ ಸಭೆ ಬಾಬ್ರಿ ಮಸೀದಿ ಧ್ವಂಸ ತಡೆಯುವಲ್ಲಿ ಮಧ್ಯಪ್ರವೇಶಿಸಲು ಸಾಕಷ್ಟು ಬೆಂಬಲ ನೀಡಲಿಲ್ಲ ಎಂದು ಹೇಳಿಕೊಂಡಿದ್ದಾರೆ.ಇದು ಸಂಪೂರ್ಣ ಅಸತ್ಯ. ನಾನು ಆ ಸಭೆಯಲ್ಲಿ ಭಾಗವಹಿಸಿದ್ದೆ. ಸಂವಿಧಾನ ಮತ್ತು ಕಾನೂನಿನ ಆಳ್ವಿಕೆಯನ್ನು ಎತ್ತಿಹಿಡಿಯಲು ಅಗತ್ಯವಾದ ಯಾವುದೇ ಕ್ರಮ ಕೈಗೊಳ್ಳಲು ಪ್ರಧಾನ ಮಂತ್ರಿಗಳಿಗೆ ಅಧಿಕಾರ ನೀಡುವ ಸರ್ವಾನುಮತದ ನಿರ್ಣಯವನ್ನು ನಾನು ಮಂಡಿಸಿದ್ದೆ.

ಅಯೋಧ್ಯೆಯಲ್ಲಿ ಸಾವಿರಾರು ಜನ ಸೇರಿದ್ದಾರೆ ಎಂಬ ವರದಿಗಳು ಬಂದಾಗ ಪರಿಣಾಮಕಾರಿಯಾಗಿ ಮಧ್ಯಪ್ರವೇಶಿಸಲು ಪ್ರಧಾನ ಮಂತ್ರಿಗಳಿಗೆ ನೀಡಿದ್ದ ಈ ಸಂಪೂರ್ಣ ಅಧಿಕಾರ ಸಾಕಾಗಿತ್ತು.

ಕೊನೆಯ ವರೆಗೂ ಶ್ರೀ ನರಸಿಂಹರಾವ್ ಪರಿಸ್ಥಿತಿ ಹತೋಟಿಯಲ್ಲಿದೆ, ಅಯೋಧ್ಯೆಯಲ್ಲಿ ಆಗಬಾರದ್ದೇನೂ ಆಗುವುದಿಲ್ಲ ಎಂದು ನನ್ನನ್ನೂ ಸೇರಿದಂತೆ ಧರ್ಮನಿರಪೇಕ್ಷ ಪ್ರತಿಪಕ್ಷಗಳ ಮುಖಂಡರಿಗೆ ಆಶ್ವಾಸನೆ ನೀಡುತ್ತಲೇ ಇದ್ದರು.

ಮತ್ತೆ ಗೆಲುವಿನ ನಿಣ

ಕೇರಳ ವಿಧಾನಸಭಾ ಚುನಾವಣೆಗಳು ಘೋಷಿತವಾಗಿವೆ. ಕೇರಳದ ಸಮಾಜದಲ್ಲಿ ಒಂದು ಕಡೆ ಅದನ್ನು ಅವನತಿಗೆ ಒಯ್ಯುವ ಯು.ಡಿ.ಎಫ್. ಇನ್ನೊಂದೆಡೆ. ಈ ಚ ಹೆಣೆದ ಪಿತೂರಿಗಳೇನು? ತನ್ನ ಆಡಳಿತದುದ್ದಕ್ಕೂ ಇಂತಹ ಪಿತೂರಿಗಳನ್ನೆದುರಿಸಿ ಅಧಿಕಾರಕ್ಕೆ ಏರಲು ಈ ಚುನಾವಣಾ ಹೋರಾಟ ಅತ್ಯಂತ ನಿರ್ಣಾಯಕ. ಈ ಐತಿಹಾ

ಕೇರಳ ಎಡಪ್ರಜಾಸತ್ತಾತ್ಮಕ ರಂಗ

ಎಸ್.ವೈ.ಗುರುಶಾಂತ್

ಪರಶುರಾಮ ಸೃಷ್ಟಿಯೆಂದೇ ಬಣ್ಣಿಸಲಾಗುವ ಕೇರಳ ಒಂದು ವಿಶಿಷ್ಟ ರಾಜ್ಯ. ಕಣ್ಮನಸೆಳೆವ ನೈಸರ್ಗಿಕ ಸಂಪತ್ತಿನ ಸಿರಿ ಒಂದೆಡೆಯಾದರೆ ಅಲ್ಲಿನ ಆರ್ಥಿಕ, ಸಾಮಾಜಿಕ,ಸಾಂಸ್ಕೃತಿಕ ಬದಲಾವಣೆಗಳು ದೇಶ ವಿದೇಶಗಳ ಅನೇಕರನ್ನು ನಿಬ್ಬೆರಗಾಗಿಸಿವೆ. ಅವುಗಳ ಅಧ್ಯಯನಕ್ಕೆ ಸೆಳೆದಿವೆ. 'ಕೇರಳ ನೂರಕ್ಕೂ ನೂರು ಸಾಕ್ಷರತೆ ಸಾಧಿಸಿರುವ ರಾಜ್ಯ'. ಅಲ್ಲಿನ ಪುರುಷರ ಸಂಖ್ಯೆ 1000 ಕ್ಕೆ ಹೋಲಿಸಿದರೆ ಮಹಿಳೆಯರು 1040(ಕರ್ನಾಟಕ 923). ಹೆಣ್ಣೆಂದರೆ ತಾರತಮ್ಯ-ಕೇವಲ ಸಾಮಾಜಿಕವಾಗಿ ಮಾತ್ರವಲ್ಲ, ಆಹಾರ, ಆರೋಗ್ಯದ ಗಮನದಲ್ಲಿಯೂ ಇರುವಾಗ ಅಲ್ಲಿ ಇಷ್ಟು ಸಾಕಲ್ಲವೇ ಕೇರಳದ ಅದ್ಭುತ ಸಾಧನೆಗೆ ಅಳತೆಗೋಲು. "ಕೇರಳ ಚೀನಾಕ್ಕಿಂತಲೂ ಹಲವು ರಂಗಗಳಲ್ಲಿ ಇಟ್ಟಿದೆ ದಾಪುಗಾಲು...." ಎಂದವರು ಬೇರಾರು ಅಲ್ಲ ಕರ್ನಾಟಕದ ಕಾಂಗ್ರೆಸ್ ಸರ್ಕಾರದ ಗ್ರಾಮೀಣಾಭಿವೃದ್ಧಿ ಸಚಿವ ಎಂ.ವೈ.ಘೋರ್ಪಡೆ ಒಂದು ಸಂದರ್ಭದಲ್ಲಿ.

ಹೊಸ ಪರಿವರ್ತನೆ

ಕೇರಳದಲ್ಲಿನ ಈ ಹೊಸ ಪರಿವರ್ತನೆಗೆ ಹಲವು ಶತಮಾನಗಳು ದೀರ್ಘ ಇತಿಹಾಸವಿದೆ. ಜಿಡ್ಡುಗಟ್ಟಿದ ಸಮಾಜಕ್ಕೆ ಚಲನೆ ನೀಡಿದ ಅನೇಕ ಸಮಾಜ ಸುಧಾರಣಾ ಚಳುವಳಿಗಳು, ಬ್ರಿಟಿಷರ ವಿರುದ್ಧದ ಮಹಾನ್ ಸ್ವಾತಂತ್ರ್ಯ ಸಂಗ್ರಾಮ, ಆ ಒಡಲಲ್ಲಿ ಮೂಡಿಬಂದ ದೀಮಂತ ಕಮ್ಯುನಿಸ್ಟ್ ಚಳುವಳಿ ನೀಡಿರುವ ಕೊಡುಗೆ ಅಪಾರ. ಇಂತಹ ಪರಿವರ್ತನಾ ಪ್ರಕ್ರಿಯೆಯನ್ನು ಮುಂದಕ್ಕೆ ಕೊಂಡೊಯ್ಯುವ ಶಕ್ತಿ ಇರುವುದೇ 'ಕಮ್ಯುನಿಸ್ಟ್ ಚಳುವಳಿಗೆ. ಜಾತಿ-ಮತೀಯ ಶಕ್ತಿಗಳ ಹಿಡಿತದಿಂದ ಶಿಕ್ಷಣದ ಬಿಡುಗಡೆ ಭೂಹೀನರಿಗೆ ಭೂ ಹಂಚಿಕೆಯಂತಹ ಕಾರ್ಷಿಕ ಸಂಬಂಧಗಳಲ್ಲಿ ಬದಲಾವಣೆ. ದುಡಿವ ಜನರ ಆದಾಯದ ಹೆಚ್ಚಳ ರೈತ-ಕೂಲಿ, ಕಾರ್ಮಿಕರ ಹಾಗೂ ಜನಸಾಮಾನ್ಯರ ಪ್ರಜಾಪ್ರಭುತ್ವ ಹಕ್ಕುಗಳ ರಕ್ಷಣೆ, ಅಸ್ಪೃಶ್ಯತೆ ವಿರುದ್ಧ ಹೋರಾಟ, ಸಹಕಾರಿ ಕ್ಷೇತ್ರದ ಬೆಳವಣಿಗೆ ಅಧಿಕಾರದ ವಿಕೇಂದ್ರೀಕರಣವನ್ನು ಅರ್ಥಪೂರ್ಣವಾಗಿಸುತ್ತಿರುವ ಜನ ರೂಪಿತ ಯೋಜನೆ, ಸಮಗ್ರ ಪಡಿತರವ್ಯವಸ್ಥೆ, ಭ್ರಷ್ಟಾಚಾರ ರಹಿತ ಆಡಳಿತ, ಸಂಪೂರ್ಣ ಸಾಕ್ಷರತಾ ಆಂದೋಲನ ಸಾಮಾಜಿಕ ಅನಿಷ್ಟಗಳ ವಿರುದ್ಧ



ಹೋರಾಟ ಮತ್ತು ಜಾತಿ-ಕೋಮುವಾದದ ವಿರುದ್ಧ ಹೋರಾಟ, ಜಾಗತೀಕರಣ, ಉದಾರೀಕರಣದ ವಿರುದ್ಧ ಪ್ರತಿರೋಧ... ಹೀಗೆ ಕೇರಳದ ಸಮಾಜದಲ್ಲಿನ ಪರಿವರ್ತನೆಗಳನ್ನು ಯಾರೂ ಸಹ ಸುಲಭವಾಗಿ ಗುರುತಿಸಬಹುದು. ಇದು ಎಡರಂಗದ ಮುಖ್ಯವಾಗಿ ಸಿಪಿಐ(ಎಂ)ನ ಅಹೋರತ ಹೋರಾಟದ ಫಲ. ಪ್ರಾಣ ಪಣವಾಗಿಟ್ಟು ಹೋರಾಡಿ ಹುತಾತ್ಮರಾದ ಉನ್ನತ ಪರಂಪರೆ ಇಲ್ಲಿದೆ. ಕಾಂ. ಕೃಷ್ಣಪಿಳ್ಳೆ, ಇ.ಎಂ.ಎಸ್., ಎ.ಕೆ.ಜಿ. ಮುಂತಾದ ಮಹಾನ್ ನಾಯಕರ ಪರಿಶ್ರಮ, ಮಾರ್ಗದರ್ಶನವಿದೆ.

ನಿರಂತರ ಸಂಘರ್ಷ

ಈ ಪರಿವರ್ತನಾ ಪ್ರಕ್ರಿಯೆಯಾಗಿ ಸದಾ ಅಡ್ಡಿ ಬಂದಿದ್ದೇ ಭೂಮಾಲಕ-ಬಂಡವಾಳಶಾಹಿಗಳಿಂದ, ವಿದೇಶಿ ಸಾಮ್ರಾಜ್ಯಶಾಹಿಗಳಿಂದ. ಜಾತೀಯ, ಮತೀಯ ಪ್ರತಿಗಾಮಿ ಶಕ್ತಿಗಳಿಂದ. ಎಂದೆಂದು ಕಾಂಗ್ರೆಸ್ ಅಧಿಕಾರಕ್ಕೆ ಬಂದಿಯೋ ಎಡಶಕ್ತಿಗಳು ಸಾಧಿಸಿದ ಪ್ರಗತಿಯನ್ನು ಸಮಾಜವನ್ನು ಹಿಂದಕ್ಕೆ ತಳ್ಳುವ ಹುನ್ನಾರಗಳೇ. ಈ ಹಿಂದೆ ಸಾಕ್ಷರತಾ ಆಂದೋಲನದಲ್ಲಿ ಇಡೀಕೇರಳವೇ ಭಾಗಿಯಾಗಿತ್ತು. ನಿರಕ್ಷರ ಕುಕ್ಷಿಯಾಗಿ ಕುಗ್ಗಿಹೋಗಿದ್ದು ಮೆಹರುನ್ನೀಸಾ ವಿದೇಶದಲ್ಲಿದ್ದ ತನ್ನ ಮಗನಿಗೆ ಪತ್ರ ಬರೆದಾಗ ಅವಳ ಕಣ್ಣಲ್ಲಿ ಮೂಡಿದ ಆತ್ಮಗೌರವ, ಸ್ಥೈರ್ಯದ ಬೆಳಕಿಗೆ ತಣ್ಣೀರೆರಚಲು ಮುಂದಾದುದು ಇದೇ ಕರುಣಾಕರನ್, ಆಂಟೋನಿ ಕಾಂಗ್ರೆಸ್ ನ ಸರ್ಕಾರ. ಭಾರಿ ಯಶಸ್ಸು ಕಾಣುತ್ತಿರುವ ಜನರೂಪಿತ ಯೋಜನೆಯನ್ನು ಬುಡಮೇಲು ಮಾಡಲು ಹವಣಿಸುತ್ತಿರುವುದು ಇದೇ ಕಾಂಗ್ರೆಸ್, ಬಿಜೆಪಿ ಮುಂತಾದವರೇ. ಇವು ಇತ್ತೀಚಿನ ಒಂದೆರಡು ಉದಾಹರಣೆಗಳು. ಹೀಗೆ ಇಂತಹ ಶಕ್ತಿಗಳೊಂದಿಗೆ ನಿರಂತರ ಸಂಘರ್ಷವನ್ನು ಎಡ-ಪ್ರಜಾಸತ್ತಾತ್ಮಕ ಶಕ್ತಿಗಳು ನಡೆಸುತ್ತಿರುವುದು.

ಕಾಂಗ್ರೆಸ್-ಬಿಜೆಪಿ ಒಂದೇ ದನಿ

ಕೇಂದ್ರ ದೇಶಭಕ್ತ ವಾಜಪೇಯಿ ಸರ್ಕಾರವು ಪ್ರಸ್ತುತವಾಗಿ ಹೊಸ ಆರ್ಥಿಕ ನೀತಿ - ಉದಾರೀಕರಣ, ಜಾಗತೀಕರಣ ಮತ್ತು ಮುಕ್ತ ಆಮದು ನೀತಿಗಳಿಂದ ಬಹಳಷ್ಟು ಕ್ರೂರ ಆಕ್ರಮಣ ಅನುಭವಿಸುತ್ತಿರುವ ರಾಜ್ಯ ಕೇರಳ. ದೇಶದ ಒಟ್ಟು ತೆಂಗು ಬೆಳೆಯಲ್ಲಿ ಸುಮಾರು 70 ಕ್ಕೂ ಹೆಚ್ಚು ಶೇ ಪಾಲು ಕೇರಳದ್ದೇ. ರಬ್ಬರ್, ಗೋಡಂಬಿ, ಕಾಫಿ, ಟೀ, ಭತ್ತ ಮುಂತಾದ ಹಲವಾರು ಬೆಳೆ ಬೆಳೆವ ರೈತರು ಬೆಲೆ ಕುಸಿದು ತತ್ತರಿಸಿ ಹೋಗಿದ್ದಾರೆ. ಕೂಲಿಕಾರರ ಬದುಕು ಬೆದರಿಕೆಗೊಳಗಾಗಿದೆ. ಇಂತಹ ನೀತಿಗಳ ವಿರುದ್ಧ ಜನರ ರಕ್ಷಣೆಗೆ ಸಿಪಿಐ(ಎಂ) ಹಾಗೂ ಎಡ ಶಕ್ತಿಗಳ ಅಹೋರತ ಹೋರಾಟ ಮಾರುತ್ತಿವೆ. ಆದರೆ ಕೇಂದ್ರದ ಬಿಜೆಪಿ ಸರ್ಕಾರದ ನೀತಿಗಳನ್ನೇ ಕೇರಳದ ಕಾಂಗ್ರೆಸ್ ಬೆಂಬಲಿಸುತ್ತಿದೆ. ಅವುಗಳ ಬಗ್ಗೆ ಒಂದು ಚಕಾರವೂ ಇಲ್ಲ.

ಇದು ಒಂದು ಕಡೆ ಇತ್ತೀಚಿಗೆ ತೆಹಲ್ಕಾ ಬಹಿರಂಗ ಪಡಿಸಿದ ರಕ್ಷಣಾ ಹಗರಣದ ಬಗ್ಗೆ ಸೋನಿಯಾ ಗಾಂಧಿಯನ್ನು ಒಳಗೊಂಡು ಕಾಂಗ್ರೆಸ್-ದೇಶವ್ಯಾಪಿ ಕೂಗು ಹಾಕುತ್ತಿದೆ. ಆದರೆ ಕೇರಳದಲ್ಲಿ ಮಾತ್ರ ಬಾಯಿ ಮುಚ್ಚಿಕೊಂಡಿದೆ. ಇಲ್ಲಿನ ಕಾಂಗ್ರೆಸ್ ಈ ಕುರಿತು ಪ್ರಚಾರವಿರಲಿ ಒಂದೇ ಒಂದು ಚಕಾರವನ್ನು ಎತ್ತಿಲ್ಲ. ಸಭೆಗಳ - ಮಾತು ದೂರವೇ ಉಳಿಯಿತು. ಕಾರಣ ಕಾಂಗ್ರೆಸ್ ಬಿಜೆಪಿ - ನಡುವಣ ಒಂದು ಪಿತೂರಿಯ ಮೈತ್ರಿ. ಇದು ಹಿಂದಿನಿಂದ ಏರ್ಪಟ್ಟಿದ್ದು ಎಂದು ಬೇರೆ ಹೇಳಬೇಕಿಲ್ಲ. ಈ ಚುನಾವಣೆಗಳಲ್ಲಿ ಎಲ್‌ಡಿಎಫ್ - ಅದರಲ್ಲೂ ಸಿಪಿಐ(ಎಂ) ನ್ನು ನಿರ್ನಾಮ ಮಾಡಬೇಕೆಂಬುದೇ ಇದರ ಉದ್ದೇಶ. ಸಿಪಿಐ(ಎಂ) ನಾಯಕರು - ಕಾರ್ಯಕರ್ತರ ಮೇಲೆ ಧಾಳಿ ನಡೆದಾಗ ಆವಾಗೆಲ್ಲಾ ಕಾಂಗ್ರೆಸ್ - ಬಿಜೆಪಿ - ಹಾಗೂ IUML ನಂತಹ ಕೋಮುವಾದಿಗಳು ಒಂದೇ ಕಂಠದಲ್ಲಿ ಮಾತನಾಡುತ್ತಿದ್ದಾರೆ. ಹಿಂದಿನಿಂದ ನಡೆಸಿದ ಹುನ್ನಾರಗಳು, ಪ್ರತಿ ವಿಧಾನಸಭಾ ಚುನಾವಣೆಗಳ ವಿವರಗಳು ಇತರೆ ಕಾಲಂಗಳಲ್ಲಿ ಕೊಡಲಾಗಿದೆ.)

ಕಣ್ಣೂರಿನಲ್ಲಿ ಆರ್.ಎಸ್.ಎಸ್. ಗಲಭೆಗಳನ್ನೆಬ್ಬಿಸಿ ಕೊಲೆಗಳಾದಾಗ ಕೊಲ್ಲಂ



ಕೇರಳಕ್ಕೆ ಕೊಳ್ಳಿ ಇಟ್ಟವರು ಆಂಟನಿ ಮತ್ತು ಕರುಣಾಕರನ್

ಜಿಲ್ಲೆಯಲ್ಲಿ ಕಳ್ಳಬಟ್ಟಿ ದುರಂತ ನಡೆದಾಗ, ಮಲಪುರಂನಲ್ಲಿ ಅಲ್ಪಸಂಖ್ಯಾತರ ವಿರುದ್ಧ ಆರ್.ಎಸ್.ಎಸ್. ಆಕ್ರಮಣ ಮಾಡಿದಾಗ ಕಾಂಗ್ರೆಸ್-ಬಿಜೆಪಿಗಳು ಹೇಳಿಕೆಗಳೇ ಇದನ್ನು ಸ್ಪಷ್ಟವಾಗಿ ಸಮರ್ಥಿಸುತ್ತಿವೆ. ಹಿಂದಿನ ವಿಧಾನಸಭೆ ಮತ್ತು ಇತ್ತೀಚಿಗೆ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಕಾಂಗ್ರೆಸ್-ಬಿಜೆಪಿ ಕೂಟದ ಮೈತ್ರಿ ಬೆಳೆದು ಈಗಿನ ವಿಧಾನಸೌಧ ಚುನಾವಣೆಗಳವರೆಗೂ ಮುಂದುವರಿದಿದೆ. ವಿಧಾನಸಭೆಯಲ್ಲಿ ಒಂದೇ ಒಂದು ಸ್ಥಾನವೂ ಇಲ್ಲದ ಬಿಜೆಪಿ ಈ ಬಾರಿ ಒಬ್ಬ ಶಾಸಕ ವಿಧಾನಸಭೆ ಪ್ರವೇಶಿಸುತ್ತಾನೆ ಎಂದು ಸಾರುತ್ತಿದೆ. ಈ ಕೂಟದ ಕಮ್ಯುನಿಸ್ಟ್ ವಿರೋಧ ಎಂತಹ ನೀಚ ಮಟ್ಟಕ್ಕೆ ಹೋಗಬಹುದು ಎಂಬುದಕ್ಕೆ ನಾದಪುರಂ ಘಟನೆಯೊಂದೇ ಸಾಕು.

ನೀಚ ಮೈತ್ರಿ

ಇತ್ತೀಚಿನ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಇಂಡಿಯನ್ ಯೂನಿಯನ್ ಮುಸ್ಲಿಂ ಲೀಗ್‌ಗೆ ಸೇರಿದ್ದ ಕೆಲವು ನಾಯಕರು ಹಾಗೂ ಮುಸ್ಲಿಂ ಜನತೆಯು 'ಈ ಬಾರಿ ಬಿಜೆಪಿಯ ಕೋಮುವಾ ಹಾಗೂ ಕಾಂಗ್ರೆಸ್ ಕುತಂತ್ರಗಳು ಆಟ ಸೋಲಿಸಿ' ಎಂದು ಮನವಿ ಮಾಡಿದ ಸಿಪಿಐ(ಎಂ)ಗೆ ಬೆಂಬಲ

ಕಳೆದ ಹತ್ತು ಅಸೆಂಬ್ಲಿ ಚುನಾವಣೆಗಳ ಪಕ್ಷಿನೋಟ

ಇಲ್ಲಿ ಪಿತೂರಿಗಳದ್ದೇ ಇತಿಹಾಸ

ಐಕ್ಯ ಕೇರಳದ 44 ವರ್ಷಗಳ ಅವಧಿಯಲ್ಲಿ 10 ಬಾರಿ ಅಸೆಂಬ್ಲಿ ಚುನಾವಣೆಗಳು ನಡೆದಿದ್ದು, ಪ್ರಪ್ರಥಮ ಬಾರಿಗೆ ಸಿಪಿಐ(ಎಂ) ನೇತೃತ್ವದ ಇ.ಕೆ.ನಾಯನಾರ್ ಸರ್ಕಾರ 5 ವರ್ಷಗಳ ಅವಧಿಯನ್ನು ಪೂರ್ಣಗಳಿಸಲಿದೆ. ನಂಬಲಾಗದಿದ್ದರೂ ಇದು ಸತ್ಯ. ಕಮ್ಯುನಿಸ್ಟ್ ವಿರೋಧಿ ಕೂಟದ ಕುತಂತ್ರದಿಂದ ಎಡ ಪಕ್ಷದ ಸರ್ಕಾರಗಳು ಅವಧಿಗೆ ಮುನ್ನ ಕುಸಿದಿವೆ.

1957 - ಇ.ಎಂ.ಎಸ್. ಸರಕಾರ: ವಿಶ್ವದಲ್ಲೇ ಪ್ರಥಮ ಬಾರಿಗೆ ಚುನಾವಣೆಗಳ ಮೂಲಕ ಅಧಿಕಾರಕ್ಕೆ ಬಂದ ಕಮ್ಯುನಿಸ್ಟ್ ಸರಕಾರ ಎಂಬ ಹೆಗ್ಗಳಿಕೆಗೆ ಪಾತ್ರವಾದ ಇ.ಎಂ.ಎಸ್. ನಂಬೂದರಿಪಾಡ್ ಅವರ ಸರಕಾರವನ್ನು 1959 ರಲ್ಲಿ 'ವಿಮೋಚನಾ ಸಮರ' ಎಂಬ ಹೆಸರಲ್ಲಿ ಕಿತ್ತುಹಾಕಲಾಗಿತ್ತು. ಪ್ರಧಾನ ಮಂತ್ರಿ ಜವಾಹರಲಾಲ ನೆಹರೂ, ಕಾಂಗ್ರೆಸ್ ಅಧ್ಯಕ್ಷೆ ಇಂದಿರಾಗಾಂಧಿ ಅಥವಾ ಕೇರಳದ ಕಾಂಗ್ರೆಸ್ ಪುಂಡರು ಮಾತ್ರ ಇದಕ್ಕೆ ಕಾರಣರಾಗಿರಲಿಲ್ಲ. ವಿದೇಶದಿಂದ, ಅದರಲ್ಲೂ ಅಮೆರಿಕಾದ ಹಣದ ಚೀಲವೇ ಕೇರಳವನ್ನು ಆವರಿಸಿತ್ತು. ಭಾರತದಲ್ಲಿ ಅಮೆರಿಕದ ರಾಯಭಾರಿಯಾಗಿದ್ದ ಮೊಹ್ನಿಯಾನ್ ಎಂಬುವವರು ಬರೆದ ಪುಸ್ತಕದಲ್ಲಿ ಇದನ್ನು ಒಪ್ಪಿಕೊಂಡಿದ್ದಾರೆ. ಕೇರಳದ ಪ್ರಗತಿಯ ದಿಕ್ಕನ್ನೇ ಬದಲಿಸಿದ, ಇ.ಎಂ.ಎಸ್. ಸರಕಾರ ಜಾರಿಗೆ ತಂದ ಭೂಸುಧಾರಣೆ, ವಿದ್ಯಾಭ್ಯಾಸ ಮಸೂದೆ, ಹೊಸ ಕೃಷಿ ನೀತಿ, ಒಕ್ಕಲೆಬ್ಬಿಸುವುದಕ್ಕೆ ತಡೆ ಇತ್ಯಾದಿ, ಶತಶತಮಾನಗಳಿಂದ ಸುಲಿಗೆ ಮಾಡುತ್ತಿದ್ದ ಶೋಷಕರ ಕಣ್ಣು ಕುಕ್ಕಿಸಿತು.

ಕಮ್ಯುನಿಸ್ಟ್ ಸರ್ಕಾರವನ್ನು ಕಿತ್ತು ಹಾಕಿದ ನಂತರ, 1960 ರಲ್ಲಿ ನಡೆದ ಚುನಾವಣೆಯಲ್ಲಿ ಯಾವುದೇ ಒಂದು ಪಕ್ಷಕ್ಕೆ ಬಹುಮತ ಸಿಕ್ಕಿರಲಿಲ್ಲ. ಕಮ್ಯುನಿಸ್ಟರು ಅಧಿಕಾರಕ್ಕೆಬಾರದಂತೆ ತಡೆಯಲು ಕಾಂಗ್ರೆಸ್ ಪಕ್ಷವು ಪ್ರಜಾ ಸೋಷಲಿಸ್ಟ್ ಪಕ್ಷದ ಪಟ್ಟೊಮ್ ತಾನು ಪಿಳ್ಳೆ ಅವರನ್ನು ಮುಖ್ಯಮಂತ್ರಿಯನ್ನಾಗಿಸಿತು. ಮುಂದೆ 1962 ರಲ್ಲಿ 'ಪಟ್ಟೊಮ್' ಅವರನ್ನು ಪಂಜಾಬಿನ ರಾಜ್ಯಪಾಲರನ್ನಾಗಿ ಮಾಡಿ ಕಾಂಗ್ರೆಸ್ ಪಕ್ಷದ ಆರ್.ಶಂಕರ್ ಮುಖ್ಯಮಂತ್ರಿಯಾದರು. ಇ.ಎಂ.ಎಸ್. ಸರಕಾರವು ಜಾರಿಗೆ ತಂದ ಜನಪರ ಅಂಶಗಳನ್ನು ತಿರುಗು-ಮುರುಗು ಮಾಡಿತು ಕಾಂಗ್ರೆಸ ಸರ್ಕಾರ.

ಈ ಸರ್ಕಾರವೂ ಹೆಚ್ಚು ಕಾಲ ಬಾಳಲಿಲ್ಲ. ಕಾಂಗ್ರೆಸ್ಸಿನ ಒಳ ಜಗಳದಿಂದ ಪ್ರಮುಖವಾಗಿ ಕ್ರಿಶ್ಚಿಯನ್ ಸಮುದಾಯಕ್ಕೆ ಸೇರಿದವರು, ಕೇರಳ ಕಾಂಗ್ರೆಸ್ ಎಂದು ಪ್ರತ್ಯೇಕ ಪಕ್ಷ ಮಾಡಿ ತಮ್ಮದೇ ಸರಕಾರವನ್ನು ಉರುಳಿಸಿದರು.

1965 ರಲ್ಲಿ ನಡೆದ 3ನೇ ಚುನಾವಣಾ ಸಂದರ್ಭದಲ್ಲಿ ಕಮ್ಯುನಿಸ್ಟ್ ಪಕ್ಷ ಇಬ್ಭಾಗವಾಗಿತ್ತು. ಸಿಪಿಐ(ಎಂ) ನ ಬಹುತೇಕ ಮುಖಂಡರು ಜೈಲಿನಲ್ಲಿದ್ದರು. ಆದರೂ ಅತಿ ಹೆಚ್ಚಿನ ಸೀಟುಗಳನ್ನು ಸಿಪಿಐ(ಎಂ) ಪಕ್ಷವೇ ಪಡೆದಿತ್ತು. ಕಾಂಗ್ರೆಸ್ ಪಕ್ಷ ಎಷ್ಟೇ ಪ್ರಯತ್ನಿಸಿದ್ದರೂ ಸರಕಾರ ರಚಿಸಲು ಸಾಧ್ಯವಾಗಲಿಲ್ಲ. ಆದರೂ, ಮುಖಂಡರು ಜೈಲಿನಲ್ಲಿದ್ದಾರೆ ಎಂಬ ನೆಪವೊಡ್ಡಿ ಸಿಪಿಐ(ಎಂ)ಗೆ ಸರಕಾರ ರಚಿಸಲು ಅವಕಾಶ ಕೊಟ್ಟಿರಲಿಲ್ಲ. ಅಸೆಂಬ್ಲಿಯನ್ನು ವಿಸರ್ಜಿಸಿ ರಾಷ್ಟ್ರಪತಿ ಆಡಳಿತ ಹೇರಲಾಯ್ತು.

1967 ರಲ್ಲಿ ಸಿಪಿಐ(ಎಂ) ನೇತೃತ್ವದ ಪಕ್ಷಗಳೇ ಪುನಃ ಅಧಿಕಾರಕ್ಕೆ ಬಂದಿತು. ಕಾಂಗ್ರೆಸ್‌ಗೆ ಕೇವಲ 9 ಸೀಟು ಮಾತ್ರ ಬಂದಿತ್ತು. ಆದರೂ ಕಾಂಗ್ರೆಸ್ ಕುತಂತ್ರದಿಂದ ಈ ಸರಕಾರವೂ ಹೆಚ್ಚು ಕಾಲ ಬಾಳಲಿಲ್ಲ. ಆದರೆ ಪ್ರಜಾಸತ್ತಾತ್ಮಕ ಚಳುವಳಿ ಮತ್ತು ರೈತರ, ಭೂಹೀನರ ಶಕ್ತಿಯುತ ಹೋರಾಟದ ಪರಿಣಾಮವಾಗಿ ಸಿಪಿಐ(ಎಂ) ನೇತೃತ್ವದ ಸರಕಾರ ಜಾರಿಗೆ ತಂದಿದ್ದ ಜನಪರ ಅಂಶಗಳನ್ನು ತಿರುಚಲು ಸಾಧ್ಯವಾಗಲಿಲ್ಲ.

1970 ರಿಂದ 1977 ರವರೆಗೆ ಕಾಂಗ್ರೆಸ್ ಪಕ್ಷವೇ ಪ್ರಧಾನ ಶಕ್ತಿಯಾಗಿದ್ದ ಅಚ್ಯುತ ಮೆನನ್ ಸರ್ಕಾರ ಅಧಿಕಾರದಲ್ಲಿತ್ತು. ಅಚ್ಯುತ ಮೆನನ್ ಸಿಪಿಐನ ಮುಖಂಡರು. ತುರ್ತು ಪರಿಸ್ಥಿತಿಯ ಈ ಕಾಲದಲ್ಲಿ (1975-77) ಪ್ರಜಾಸತ್ತಾತ್ಮಕ ಹೋರಾಟಗಳನ್ನು

ಪುಟ 10 ಕ್ಕೆ

...ಯಕ ಹೋರಾಟದತ್ತ

...ೆ ಪರಿವರ್ತನೆ ತಂದ ಎಲ್.ಡಿ.ಎಫ್. ...ಯಲ್ಲಿ ಕಾಂಗ್ರೆಸ್-ಕೋಮುವಾದಿಗಳು ...ಎಫ್ ಅವಧಿ ಪೂರ್ಣಗೊಳಿಸಿದೆ. ಮತ್ತೆ ...ರದ ಮಹತ್ವ ಕುರಿತ ಲೇಖನಗಳು ಇಲ್ಲಿವೆ

ಸೂಚಿಸಿದರು. ಸಕ್ರಿಯವಾಗಿಯೂ ಶ್ರಮಿಸಿದರು. ಇದರಿಂದ ಕುಪಿತಗೊಂಡ IUML ಅಂತಹವರಿಗೆ ಬುದ್ಧಿ ಕಲಿಸಲು ಬಯಸಿತು. ಗಲಭೆಗಳೂ ನಡೆದವು. ಇದನ್ನು ನೆಪವಾಗಿಟ್ಟು ಕಾಂಗ್ರೆಸ್, ಬಿಜೆಪಿ ಹಾಗೂ IUML ನ ನಾಯಕರು, ಅಂತೋಣಿ, ಪದ್ಮನಾಭನ್, ಅಹ್ಮದ್ ಒಂದು ಗೂಡಿ ಇದು ಸಿಪಿಐ(ಎಂ)ನವರ ಕೃತ್ಯವೆಂದು ಅಪಪ್ರಚಾರ ನಡೆಸಿದರು. ಬೆಂಕಿ ನಂದಿಸುವ ಬದಲು ತಿದಿಯೂದಿದರು. ಗಲಭೆ ನಡೆದಾಗ ಈ ನಾಯಕರ ಬಾಯಲ್ಲಿ ಶಾಂತಿ ಸ್ಥಾಪನೆಯ ಒಂದು ಶಬ್ದವೂ ಹೊರಬರಲಿಲ್ಲ. ಆದರೆ ಸಿಪಿಐ(ಎಂ) ನ ರಾಜ್ಯ ಕಾರ್ಯದರ್ಶಿ ಪಿಣರಾಯ್ ವಿಜಯನ್ ತಕ್ಷಣದಲ್ಲೇ ಭೇಟಿಯಿತ್ತು ಶಾಂತಿ ಸೌಹಾರ್ದತೆಗೆ ಕ್ರಮವಹಿಸಿದರು.

ಇಂತಹ ನೀಚ ಮೈತ್ರಿ ಈಗಲ್ಲ, ಈ ಹಿಂದೆ ನಡೆದ ಒಡಗರ ಲೋಕಸಭೆ ಹಾಗೂ ಬೆಯಿಪೊರೆ ವಿದಾನಸಭಾ ಮಧ್ಯಂತರ ಚುನಾವಣೆಯಲ್ಲಿ ತ್ರಿವಳಿಗಳೂ ಎಲ್‌ಡಿಎಫ್ ನ್ನು ಸೋಲಿಸಲು ಸಾಮಾನ್ಯ ಅಭ್ಯರ್ಥಿ ನಿಲ್ಲಿಸಿದ್ದರು. ಅದೇ ಮಾದರಿಯನ್ನು ಈಗಲು ಅನುಸರಿಸುತ್ತಿದ್ದಾರೆ.

ಇವರೆಲ್ಲರ ಗುರಿಯೊಂದೆ ಸಿಪಿಐ(ಎಂ) ನೇತೃತ್ವದ ಎಡ ಪ್ರಜಾಸತ್ತಾತ್ಮಕ ರಂಗ ಸೋಲಲೇಬೇಕು. ಇದಕ್ಕಾಗಿ ದೇಶದ - ವಿದೇಶಿಯರ ಬಂಡವಾಳಗಾರರು, ಬಹುರಾಷ್ಟ್ರೀಯ ಕಂಪನಿಗಳು ಸಾಮ್ರಾಜ್ಯಶಾಹಿಗಳ ಎಲ್ಲ ಜಾತೀಯ, ಮತೀಯ ಶಕ್ತಿಗಳು ನೆರವು ನೀಡುತ್ತಿದ್ದಾರೆ.

ಎಲ್‌ಡಿಎಫ್ ಸರ್ಕಾರ ಇ.ಕೆ.ನಾಯನಾರ್‌ರವರ ನೇತೃತ್ವದಲ್ಲಿ ಮೊದಲ ಬಾರಿಗೆ 5 ವರ್ಷಗಳು ಪೂರ್ಣ ಅವಧಿಯನ್ನು ಪೂರೈಸಿದೆ. ಜನಮನವನ್ನು ಗೆದ್ದಿದೆ. ಚುನಾವಣಾ ಭರವಸೆಗಳನ್ನು ಈಡೇರಿಸಿವೆ. ಅಲ್ಪಸಂಖ್ಯಾತರ ಹಕ್ಕು ಹಿತಗಳನ್ನು ರಕ್ಷಿಸಿದೆ. ಕಾನೂನು-ಸುವ್ಯವಸ್ಥೆ ಕಾಪಾಡಿಕೊಂಡಿದೆ. ಭ್ರಷ್ಟಾಚಾರ, ಹಗರಣವಿಲ್ಲದ ಸರ್ಕಾರವಾಗಿ ಹೊಮ್ಮಿದೆ. ಹೊಸ ಹೊಸ ಜನವಿಭಾಗಗಳೂ ಇಂದು ಎಲ್‌ಡಿಎಫ್‌ನ್ನು ಬೆಂಬಲಿಸುತ್ತಿದೆ. ಈ ಬಾರಿ ಜನರು ಮತ್ತು ಎಲ್‌ಡಿಎಫ್‌ನ್ನು ಅಧಿಕಾರಕ್ಕೆ ತರುವ ಮುನ್ಸೂಚನೆಗಳು ಸ್ಪಷ್ಟ ಇವೆ. ಈ ಚುನಾವಣಾ ಪ್ರಚಾರದಲ್ಲಿ ಜನರ ಅಪೂರ್ವ ಸ್ಪಂದನವೇ ಇದಕ್ಕೆ ಸಾಕ್ಷಿ. ಜನರು ಕೋಮುವಾದಿ ಗಳ ಕೂಟಕ್ಕೆ ಕಾಂಗ್ರೆಸ್‌ನ ದುಷ್ಟ ರಾಜಕೀಯಕ್ಕೆ ನೆಲೆಯೊದಗಿಸಬಾರದೆಂದು ನಿಶ್ಚಯಿಸಿದ್ದಾರೆ.

ಪ.ಬಂಗಾಳದ ಜೊತೆ ಕೇರಳದಲ್ಲಿಯೂ ಎಡಶಕ್ತಿಗಳು ಗೆಲುವು ಸಾಧಿಸುವುದು ಅಲ್ಲದೇ ಉಳಿದ 3 ರಾಜ್ಯಗಳಲ್ಲಿ ಬದಲಾವಣೆ ಬರುವುದು ದೇಶದ ರಾಜಕಾರಣದಲ್ಲಿ ಹೊಸ ಬದಲಾವಣೆ ತರಲಿದೆ.

ಈ ಚುನಾವಣಾ ಫಲಿತಾಂಶಗಳು ದೇಶದ್ರೋಹಿ, ಭ್ರಷ್ಟ ಎನ್‌ಡಿಎ ಸರ್ಕಾರಕ್ಕೆ ಭಾರಿ ಪೆಟ್ಟು ನೀಡಲಿವೆ ಎಂದು ಭೂರ್ಷ್ವಾ ಪತ್ರಿಕೆಗಳೂ ವಿಶ್ಲೇಷಿಸತೊಡಗಿವೆ. ಈ ಬಾರಿ ಎಲ್‌ಡಿಎಫ್ ಅದರಲ್ಲಿಯೂ ಸಿಪಿಐ(ಎಂ) ಬಹುತೇಕವಾಗಿ ಯುವಜನರ ತಂಡವನ್ನೇ ಕಣಕ್ಕಿಳಿಸಿದೆ. ಇದರ ನಾಯಕತ್ವ ಹಿರಿಯ ನಾಯಕರಾದ ಅಚ್ಯುತಾನಂದನ್ ವಹಿಸಿದ್ದಾರೆ. ಆದರೆ ಕಾಂಗ್ರೆಸ್‌ನಲ್ಲಿ (ಯುಡಿಎಫ್) ಕರುಣಾಕರನ್, ಆಂಟೋನಿ ಮುಂತಾದವರ ಒಳಜಗಳ ಸ್ಥಾನ ಹೊಂದಾಣಿಕೆಯಲ್ಲಿ ತಾರಕಕ್ಕೇರಿದೆ. ಕಾಂಗ್ರೆಸ್ ರಾಷ್ಟ್ರ ನಾಯಕರು ಕೈಕಾಲು ಹಿಡಿಯುತ್ತಿದ್ದಾರೆ. ಈ ಇವೆಲ್ಲವುಗಳ ನಡುವೆ ಈ ಬಾರಿಯೂ ಎಲ್‌ಡಿಎಫ್ ಆಯ್ಕೆಯಾಗಿ ಹೊಸ ದಾಖಲೆ ನಿರ್ಮಿಸಲಿ.

○

ಬೆಸೆದುಕೊಂಡಿರುವ ಕಾಂಗ್ರೆಸ್ ಮತ್ತು ಕೋಮುವಾದಿಗಳು

ಕಾಂಗ್ರೆಸ್ಸಿನವರು ಆರಂಭಿಸಿದ ಜಾಗತೀಕರಣವನ್ನು ಇನ್ನೂ ವೇಗವಾಗಿ ಬಿಜೆಪಿ ಸರ್ಕಾರ ಜಾರಿಗೊಳಿಸುತ್ತಿದೆ. ಅಲ್ಪಸಂಖ್ಯಾತರ ವಿರುದ್ಧ ಆಕ್ರಮಣಗಳನ್ನು ಮಾಡಿ ಜನರ ಮನಸ್ಸನ್ನು ಬೇರೆ ಕಡೆಗೆ ಸೆಳೆಯುವ ಪ್ರಯತ್ನವನ್ನು ಸದಾ ಬಿಜೆಪಿ ಮಾಡುತ್ತಿದೆ. ಹಾಗೂ ಈ ಶಕ್ತಿಗಳ ಜೊತೆ ಕೇರಳದ ಯುಡಿಎಫ್ ಮಿತ್ರತ್ವದಿಂದಿದೆ. ಕೇರಳವನ್ನು ಉತ್ತರ ಭಾರತದ ರಾಜ್ಯಗಳ ರೀತಿಯಲ್ಲಿ ಒಂದು ಅವ್ಯವಸ್ಥೆಯ ಕೂಪಕ್ಕೆ ತಳ್ಳಲು ಬಿಜೆಪಿ ಸದಾ ಶ್ರಮಪಡುತ್ತಾ ಬಂದಿದೆ. ಕೇರಳದ ಒಂದೇ ಒಂದು ಕ್ಷೇತ್ರದಲ್ಲಿ ಸ್ವತಂತ್ರವಾಗಿ ಗೆಲ್ಲಲು ಸಾಧ್ಯವಿಲ್ಲದಷ್ಟು ದಾರಿದ್ರ್ಯ ಹೊಂದಿರುವ ಈ ಪಕ್ಷ ಹಲವು ವೇಷಭೂಷಣಗಳನ್ನು ಧರಿಸಿ ತಾನೊಂದು ದೊಡ್ಡ ಶಕ್ತಿ ಎಂದು ಪ್ರಚಾರ ಗಿಟ್ಟಿಸಲು ಶ್ರಮಪಡುತ್ತಿದೆ. ಹಾಗೂ ಈ ರೀತಿಯಲ್ಲಿ 11ನೇ ವಿಧಾನಸಭೆಯಲ್ಲಿ ಪ್ರವೇಶಿಸಲು ಯೋಚಿಸುತ್ತಿದೆ.

ಆರ್.ಎಸ್.ಎಸ್. ಹಾಗೂ ಬಿಜೆಪಿ ಅವರ ಎಲ್ಲಾ ಶಕ್ತಿಗಳನ್ನು ಒಗ್ಗೂಡಿಸಿ ಕಾಸರಗೋಡಿನಿಂದ ತಿರುವನಂತಪುರದವರೆಗೆ ನಡೆದ ಪರಿವರ್ತನಾ ಜಾಥಾ ಚುನಾವಣೆಯ ಸ್ಪರ್ಧೆಯ ಚೌಕಾಸಿಯ ಒಂದು ತಂತ್ರವಾಯಿತು. ಪರಿವರ್ತನಾ ಜಾಥಾ ನ ಸಾಮಾನ್ಯ ಕಾರ್ಯಕ್ರಮಕ್ಕೆ ಸೇರುವ ಜನ ಸಹಾ ಈ ಕಾರ್ಯಕ್ರಮಕ್ಕೆ ಸೇರಿಲ್ಲ. ನಡು ದಾರಿಯಲ್ಲಿ ಪರಿವರ್ತನಾ ಜಾಥಾವನ್ನು ವಿಸರ್ಜಿಸಲು ಬಿಜೆಪಿ ಆಲೋಚನೆ ಮಾಡಿತ್ತು. ಪರಿವರ್ತನಾ ಜಾಥಾದ ಕೊನೆಯ ದಿನ ಎಲ್.ಕೆ.ಅಡ್ವಾಣಿಯನ್ನು ಕರೆಸಿ ದೊಡ್ಡ ಸಮಾರಂಭ ಆಚರಿಸಬೇಕಾದವರು ಕೊನೆಯಲ್ಲಿ ಶೋಕಸಭೆಯ ರೀತಿಯಲ್ಲಿ ಜಾಥಾ ಮುಕ್ತಾಯಗೊಳಿಸಿ ಹಿಂತಿರುಗಿದರು.

1999 ರ ಲೋಕಸಭಾ ಚುನಾವಣೆಯಲ್ಲಿ ಶೇ 8.01 ರಷ್ಟು ಮತಗಳನ್ನು ಬಿಜೆಪಿ ಪಡೆಯಿತು.

ಇ.ಕೆ.ಎನ್.ರಾಜನ್

ಮುಂದಿನ ವರ್ಷ ನಡೆದ ಪಂಚಾಯತ್ ಚುನಾವಣೆಯಲ್ಲಿ ಬಿಜೆಪಿ ಒಂದು ಅಪವಿತ್ರ ಸಖ್ಯತೆಯೊಂದಿಗೆ ಚುನಾವಣೆಯಲ್ಲಿ ಸ್ಪರ್ಧಿಸಿತು. ಆಗ ಶೇ 5.83 ರಷ್ಟು ಮತ ಮಾತ್ರ ಪಡೆಯಲು ಸಾಧ್ಯವಾಯಿತು. ದಿನನಿತ್ಯ ಕ್ಷೀಣಿಸುತ್ತಿರುವ ಬಿಜೆಪಿ ಮುಖವಾಡ ಪಂಚಾಯತ್ ಚುನಾವಣೆಯಲ್ಲಿ ಪೂರ್ಣ ಬಹಿರಂಗಗೊಂಡಿತು. ಕಾಸರಗೋಡು ಜಿಲ್ಲೆಯಲ್ಲಿ ತಮಗೆ ಹೆಚ್ಚಿನ ಶಕ್ತಿಯಿದೆ ಎಂದು ಬಗ್ಗೆ ವರದಿ ಮಾಡದಿರುವ ಪತ್ರಿಕೆಗಳನ್ನು ಹೆದರಿಸಿ ಮತ್ತು ಬೆದರಿಸಿ ಈ ಜಾತಾ ಬಗ್ಗೆ ಪ್ರಚಾರಗೊಳಿಸಿದರು. ಕೇಂದ್ರ ಆಡಳಿತದ ಅಧೀನದಲ್ಲಿರುವ ದೂರದರ್ಶನ ಮಾಧ್ಯಮದಿಂದ ಹೆಚ್ಚು ಹೆಚ್ಚು ಪ್ರಚಾರ ಸಹ ಮಾಡಲು ಸಾಧ್ಯವಾಯಿತು. ಹೀಗಿದ್ದರೂ ಆರ್.ಎಸ್.ಎಸ್. ಹೇಳಿಕೊಳ್ಳುವ ಸ್ಥಳದಲ್ಲಿ 1995 ರ ಗ್ರಾಮಪಂಚಾಯತ್ ಚುನಾವಣೆಯಲ್ಲಿ ಇವರಿಗೆ ಕೇವಲ ನಾಲ್ಕು ಸ್ಥಾನ ಪಡೆಯಲು ಸಾಧ್ಯವಾಯಿತು. ಆದರೆ ಇತ್ತೀಚಿಗೆ ನಡೆದ ಚುನಾವಣೆಯಲ್ಲಿ ಈ ಸ್ಥಾನ ಒಂದಕ್ಕೆ ಇಳಿದಿದೆ.

ಕ್ರೈಸ್ತರು ಭಾರತೀಕರಣಗೊಳ್ಳಬೇಕು. ಆರ್.ಎಸ್.ಎಸ್. ನ ಆಜ್ಞೆ, ಕ್ರೈಸ್ತ ಧರ್ಮ ಪ್ರಚಾರಕರನ್ನು ಸುಟ್ಟು ಕೊಲ್ಲುವುದು, ಕ್ರೈಸ್ತ ಸನ್ಯಾಸಿನಿಯರ ಮೇಲೆ ಅತ್ಯಾಚಾರ ನಡೆಸುವುದು ಇತ್ಯಾದಿ ಕುಕೃತ್ಯ ನಡೆಸುವವರ ಜೊತೆಯಲ್ಲಿ ಕ್ರೈಸ್ತ ಧರ್ಮೀಯರು ನಿಲ್ಲಲು ಸಾಧ್ಯವೇ? ಆದರೆ ಮಲೆಯಾಳಂ ಮನೋರಮಾ ಮಾಲೀಕರು ಹಾಗೂ ಕಮ್ಯುನಿಸ್ಟ್ ವಿರೋಧಿ ರೋಗಕ್ಕೆ ಒಳಗಾದ ಇವರು ಬಿಜೆಪಿ ಹಾಗೂ ಕ್ರೈಸ್ತರನ್ನು ಒಂದುಗೂಡಿಸುವ ಪ್ರಯತ್ನ ನಡೆಸಿರುತ್ತಾರೆ. ಕೊಲ್ಲಂ ಜಿಲ್ಲೆಯಲ್ಲಿ ಶ್ರೀ ನಾರಾಯಣಗುರು ಪ್ರತಿಮೆಗಳನ್ನು ಧ್ವಂಸಗೊಳಿಸಿ ಸಿಪಿಐ(ಎಂ) ಗೆ ಬೆಂಬಲ ನೀಡಿದ್ದವರನ್ನು ಸಿಪಿಐ(ಎಂ) ವಿರುದ್ಧ ತಿರುಗಿ ಬೀಳುವಂತೆ ಮಾಡುವ ಸಂಘ ಪರಿವಾರದ ಪಿತೂರಿ ಫಲಪ್ರದವಾಗಲಿಲ್ಲ. ಕೇರಳದಲ್ಲಿ ಮುಸ್ಲಿಂ ಜನ ವಿಭಾಗಧ ಜೊತೆ ಹೊಂದಾಣಿಕೆ ಮಾಡಲು ಸಹ ಬಿಜೆಪಿ ಗೆ ಸಾಧ್ಯವಾಗಿಲ್ಲ. ಆದರೆ ಮುಸ್ಲಿಂ ಲೀಗ್‌ನ ಕೆಲವು ಮುಖಂಡರು ಬಿಜೆಪಿ, ಯುಡಿಎಫ್ ಅಪವಿತ್ರ ಮೈತ್ರಿಗೆ ಹಲವು ಸಂದರ್ಭದಲ್ಲಿ ಪರಿಶ್ರಮ ಪಟ್ಟಿರುತ್ತಾರೆ: ಈ ಪರಿಶ್ರಮದಿಂದ ಬಿಜೆಪಿಗೆ ಅಲ್ಪಸ್ವಲ್ಪ ಮತ ಈ ಹಿಂದೆ ಬಂದಿದೆ. ಆದರೆ ಬಿಜೆಪಿಯವರ ಒಂದೂ ಮತವೂ ಮುಸ್ಲಿಂ ಲೀಗಿಗೆ ಧಕ್ಕಿರುವುದಿಲ್ಲ.

ಕಾಸರಗೋಡಿನ ಮಂಜೇಶ್ವರಂನಲ್ಲಿ ಆರ್.ಎಸ್.ಎಸ್-ಬಿಜೆಪಿಯವರು ತೋಳ್ಬಲ ಉಪಯೋಗಿಸಿ ಮತಗಟ್ಟೆ ವಶಪಡಿಸಿಕೊಂಡು

ಪುಟ 10 ಕ್ಕೆ

ಆರ್.ಎಸ್.ಎಸ್. ಬರ್ಬರತೆ:

ಕಣ್ಣು ಹುಬ್ಬುಗಳನ್ನು ಬೋಳಿಸಿದರು, ಕಾಲಿನ ಮೇಲೆ ಕತ್ತಿಯಿಂದ ಕೆತ್ತಿದರು



'ತನ್ನ ಮನೆಯಿಂದ ಸ್ವಲ್ಪ ದೂರದಲ್ಲಿರುವ ತಮ್ಮ ತರಕಾರಿ ತೋಟಕ್ಕೆ ನೀರಾಯಿಸಿ, ಮನೆಗೆ ಹಿಂದಿರುಗುತ್ತಿದ್ದ ಯುವತಿಯನ್ನು ಮಧ್ಯದಲ್ಲಿ ಅಡ್ಡಗಟ್ಟಿದ ಮುಸುಕುದಾರಿ ಯುವಕರಿಬ್ಬರು ಆಕೆಯ ಬಾಯನ್ನು ದಬ್ಬನೆ ಬಟ್ಟೆಯಿಂದ ಮುಚ್ಚಿ ತಮ್ಮಲ್ಲಿದ್ದ ರೇಸರ್‌ನಿಂದ ಆಕೆಯ ಎರಡು ಕಣ್ಣು ಹುಬ್ಬುಗಳನ್ನು ಶೇವ್ ಮಾಡಿ, ಆಕೆಯನ್ನು ಕೆಳಗುರುಳಿಸಿದರು. ಗಾಬರಿಯಿಂದ ಜ್ಞಾನ ತಪ್ಪಿ ಬಿದ್ದ 20ರ ಹರೆಯದ ಆ ಯುವತಿಯ ಎಡ ಕಾಲುಗಳ ಮೇಲೆ ತಮ್ಮಲ್ಲಿದ್ದ ಕತ್ತಿಯಿಂದ ಆರ್.ಎಸ್.ಎಸ್. ಎಂದು ಕೆತ್ತಿ, ಆಕೆಯ ಬಾಯೊಳಗೆ ಅವಾಚ್ಯ ಶಬ್ದಗಳನ್ನೊಳಗೊಂಡ ಪೇಪರ್ ತುರುಕಿ ಪರಾರಿಯಾದರು.

ಕೌತುಕ ಕಥೆಗಳಲ್ಲಿರುವ ಸಿನಿಮೀಯ ದೃಶ್ಯವಿರಬಹುದು ಎಂದು ಓದುಗರು ಭಾವಿಸಬಹುದು. ಆದರಿದು ಕಾಲ್ಪನಿಕ ಕಟ್ಟು ಕಥೆಯಲ್ಲ, ಸತ್ಯ ಸಂಗತಿ. ಆ ಯುವತಿ ಬೇರಾರು ಅಲ್ಲ ತನ್ನ ಪದವಿ ಪೂರ್ವ ವ್ಯಾಸಂಗ ಮುಗಿಸಿ, ಸಾಮಾಜಿಕ ಕಳಕಳಿಯೊಂದಿಗೆ ಈ ಹಿಂದೆ ಹಾಗೂ ಈಗ ಸರಾಯಿ ವಿರೋಧಿ ಹೋರಾಟದ ಸಕ್ರಿಯ ಕಾರ್ಯಕರ್ತೆ ಕುಮಾರಿ ಬಂಧು, ಕಣ್ಣೂರು ಜಿಲ್ಲೆಯ ಕೊಡ್ಲಿಪುರಂನ ಸಾಮಾನ್ಯ ರೈತ ಗೋಪಾಲನ್‌ರ ಮಗಳು ಈಕೆ. ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ಪತ್ತನೂರು ವಲಯ ಸಮಿತಿಯ ಸದಸ್ಯೆ ಹಾಗೂ ಕೋಡ್ಲಿಪುರಂ ಆಯಂ ಘಟಕದ ಅಧ್ಯಕ್ಷೆ ಕುಮಾರಿ ಬಿಂಧು.

ಆ ಪ್ರದೇಶದಲ್ಲಿ ಸರಾಯಿ ವಿರೋಧಿ ಚಳುವಳಿಯನ್ನು ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (DYFI ಹಾಗೂ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ (AIDWA) ನಡೆಸುತ್ತಿದೆ. ಮನೆ ಮನೆಗೆ ತೆರಳಿ ಸರಾಯಿ ವಿರೋಧಿ ಚಳುವಳಿಗೆ ಜನತೆಯ ಮನವೊಲಿಸುವಲ್ಲಿ ಯಶಸ್ವಿಯಾಗಿದ್ದ ಬಿಂಧುವಿಗೆ 2001 ರ ಫೆಬ್ರವರಿ 16 ರ ಸಂಜೆ ಕಾನೂನುಬಾಹಿರ ಕಳ್ಳಭಟ್ಟಿ ತಯಾರಕರ ಪರವಾಗಿ ಆರ್.ಎಸ್. ಎಸ್. ಗೂಂಡಾ ಯುವಕರು ನೀಡಿದ ಕೊಡುಗೆ ಇದು.

ಫೆಬ್ರವರಿ 16 ರ ಆ ಭಯಾನಕ ಬರ್ಬರತೆಯ ನಂತರ ಆಸ್ಪತ್ರೆ ಸೇರಿದ ಬಿಂಧು ಅನೇಕ ಬಾರಿ ಗಾಬರಿಯಿಂದ ಪ್ರಜ್ಞೆ ಕಳೆದುಕೊಂಡಿದ್ದಾಳೆ. ಈ ಬರ್ಬರತೆಯ ವಿವರಣೆ ನೀಡುವಾಗ ದಿನಗಟ್ಟಲೆ ರೋಧಿಸಿದ್ದಾರೆ. ಈ ಮೊದಲು ಅನೇಕ ಬಾರಿ ಆಕೆಗೆ ಅನಾಮಧೇಯ ಪತ್ರಗಳು - ಬೆದರಿಕೆಯನ್ನು ಸಹ ಒಡ್ಡದ್ದಾರೆಂದು, ಆ ಯಾವುದರನ್ನು ನಾನು ಲೆಕ್ಕಿಸದಿದ್ದಕ್ಕೆ ಅವರು ಈ ಬರ್ಬರ ಹಲ್ಲೆ ಎಸಗಿದ್ದಾರೆಂದು ತನ್ನ ಒಡಲಾಳದ ಉರಿಯನ್ನು ಹೊರ ಚೆಲ್ಲಿದ್ದಾಳೆ ಬಿಂದು.


ಬಿಂದುವಿನ ಹೇಳಿಕೆ ಆಧಾರದಲ್ಲಿ ಕಾರ್ಯೋನ್ಮುಖರಾದ ಪೋಲೀಸರ ಕೈಗೆ ಸಿಕ್ಕಿಬಿದ್ದ ಆ ಬರ್ಬರ ಹಲ್ಲೆ ನಡೆಸಿದ ಆಸಾಮಿಗಳ ಬಾಯಿ ಬಿಡಿಸಿದಾಗ ಗೊತ್ತಾದದ್ದು, ಅವರುಕಾನೂನು ಬಾಹಿರ ಕಳ್ಳಬಟ್ಟಿ ತಯಾರಿಸುವವರು, ಹಾಗೂ ಆರ್.ಎಸ್.ಎಸ್.ನ ಸಕ್ರಿಯ ಕಾರ್ಯಕರ್ತರೆಂಬುದು.

ಕಣ್ಣೂರು ಜಿಲ್ಲೆಯಲ್ಲಿ ತನ್ನ ಇಂತಹ ಕುಕೃತ್ಯಗಳಿಗೆ ಹೆಸರುವಾಸಿಯಾಗಿರುವ ಆರ್.ಎಸ್.ಎಸ್. ನ ಪೋಕರಿ ಗೂಂಡಾಗಳು ಆಯುಧಗಳಿಲ್ಲದೆ ಅಡ್ಡಾಡುವುದೇ ಇಲ್ಲ. ತನ್ನ ವಿರೋಧಿಗಳ ಬಾಯಿ ಮುಚ್ಚಿಸಲು, ಇಲ್ಲದಾಗಿಸಲು ಎಂತಹ ಬರ್ಬರತೆಯನ್ನು ನಡೆಸಲು ಅವರು ಸಿದ್ಧ ಎಂಬುದನ್ನು ಈ ಮೇಲಿನ ಘಟನೆ ತೋರುತ್ತದೆ.

ಹೆಣ್ಣನ್ನು ದೇವರೆಂದು ಪೂಜಿಸುವ ಗುರಿ ತಮ್ಮದೇ, ಬಾಯ್ಬಿಟ್ಟರೆ 'ಮಾತೃದೇವೋ ಭವ' ಎನ್ನುವ, ಭಾರತ ದೇಶವನ್ನು 'ಭಾರತಾಂಬೆ' ಎಂದು ಆರಾಧಿಸುವ ಕಟ್ಟಾ ದೇಶಭಕ್ತರ ಸಾಂಸ್ಕೃತಿಕ ಸಂಘ-ರಾಷ್ಟ್ರೀಯ ಸ್ವಯಂ -ಸೇವಕ ಸಂಘ(ಆರ್.ಎಸ್.ಎಸ್.) ಎಂದು ಬೀಗುವ ಇವರು ಪ್ರತಿಪಾದಿಸುವ ಸಂಸ್ಕೃತಿಯ ಸಂಕೇತವೇ - ಅಮಾಯಕ ಬಿಂದುವಿನ ಮೇಲೆಸಗಿರುವ ಬರ್ಬರತೆ!

ರಾಜ ಮಹಾರಾಜರ ಪಾಳೆಗಾರಿ ಆಳ್ವಿಕೆಯ ಕಾಲದಲ್ಲಿ, ಅವರು ತಮ್ಮ ಕುದುರೆಗಳ ಮೇಲೆ ಈ ರೀತಿಯ ತಮ್ಮ ಲಾಂಛನಗಳನ್ನು ಕತ್ತಿಯಿಂದ ಕೆತ್ತಿಸುತ್ತಿದ್ದರು. ಹಿಂದೂಧರ್ಮದ ರಕ್ಷಕರೆಂದು, ಹಿಂದೂ ಜನಾಂಗದ ಅಘೋಷಿತ ಚಕ್ರವರ್ತಿಗಳೆಂದು ಬೀಗುವ ಈ ಆರ್.ಎಸ್.ಎಸ್., ಈ ದೇಶದ ಹೆಣ್ಣು ಮಕ್ಕಳನ್ನು ಕುದುರೆಗಳೆಂದು ಭಾವಿಸಿದೆಯೇ? ಇಂತಹ ಬರ್ಬರ ಗೂಂಡಾ ಸಂಸ್ಕೃತಿಯ ಪ್ರತೀಕವಾಗಿರುವ ಆರ್.ಎಸ್.ಎಸ್. ತನ್ನ 'ಆತ್ಮ' ಎಂದಿರುವ ಮಹಾಶಯರು 'ಅಂತರರಾಷ್ಟ್ರೀಯ ಮಹಿಳಾ ಸಬಲೀಕರಣದ ವರ್ಷ'ದ ಸಂದರ್ಭದಲ್ಲಿ ಈ ರಾಷ್ಟ್ರದ ಪ್ರಧಾನಿಗಳಾಗಿದ್ದಾರೆ!!!

ಸಣ್ಣಪುಟ್ಟ ಕಳ್ಳತನಗಳಲ್ಲಿ ಹೆಸರು ಮಾಡಿ ಓಡಾಡಿಕೊಂಡಿದ್ದ ಗ್ಯಾರಳ್ಳಿ ತಮ್ಮಯ್ಯ ಈಗ ಕೋಟ್ಯಾಧೀಶ. ಅನೇಕ ರಾಜಕಾರಣಿಗಳ ಸ್ಪಾನ್ಸರರ್, ನೂರಾರು ಜನರನ್ನು ಕೈಯಲ್ಲಿಟ್ಟುಕೊಂಡವ, ಪೋಲೀಸರನ್ನು ಮ್ಯಾನೇಜ್ ಮಾಡುವವ, ಶಿಕ್ಷಣ ಪ್ರೇಮಿ, ದಾನರತ್ನಾಕರ ಎಂಬ ಬಿರುದಾಂಕಿತ!. ಇಂತಹ ಸಾಮಾನ್ಯ ಕಳ್ಳ ಈ ಮಟ್ಟಕ್ಕೆ ಏರಬೇಕಾದರೆ ಮಾಡಿದ ದಂಧೆ ಎಂತಹುದು? ಇವನೊಂದಿಗೆ ವ್ಯವಹಾರ ಮಾಡಿದವರು ಒಂದೇ ಪೂರ್ತಿ ಆಸ್ತಿ ಕಳಕೊಂಡಿದ್ದಾರೆ ಇಲ್ಲವೇ ಪ್ರಾಣ. ಹಾಸನದ ಬಡ್ಡಿ ಮಾಫಿಯಾದ ಭಾರಿ ದಾಂಧಲೆ ವ್ಯವಸ್ಥೆಯೊಳಗಿನ ಜಾಲಗಳ ಎಳೆಗಳನ್ನು ಬಿಡಿಸಿಟ್ಟ ಕುತೂಹಲಕಾರಿ ಲೇಖನವಿದು.



ಹಾಸನ ಬಡ್ಡಿ ಮಾಫಿಯಾ

ಧರ್ಮೇಶ್

ಹಾಸನ ನಗರದ 'ಬಡ್ಡಿ ಮಾಫಿಯಾ'ದ ಬಗ್ಗೆ ಬರೆಯತೊಡಗಿದರೆ ಇಡೀ ಶೋಷಕ ವ್ಯವಸ್ಥೆಯೇ ಕಣ್ಮುಂದೆ ಬಂದು ನಿಲ್ಲುತ್ತದೆ. ಈಚೆಗೆ ಅಂದರೆ ದಿನಾಂಕ ಮಾರ್ಚ್1ರಂದು ಹಾಸನನಗರದಲ್ಲಿ ಬಡ್ಡಿ ದಂಧೆ ನಡೆಸುತ್ತಿದ್ದ 27 ವರ್ಷದ ಯುವಕನೊಬ್ಬ ಆತ್ಮಹತ್ಯೆ ಮಾಡಿಕೊಂಡ. ಅದಕ್ಕೂ ಮುನ್ನ ಅವನು ಬರೆದಿಟ್ಟ ಪತ್ರ ಬಂಡವಾಳಶಾಹಿ ವ್ಯವಸ್ಥೆ ಹಾಕುವ ಮೋಡಿಗೆ ಸಿಲುಕಿ ಕ್ಷಿಪ್ರಮಾರ್ಗದಲ್ಲಿ ಹಣಮಾಡುವ ಆಸೆಯಿಟ್ಟುಕೊಂಡ ಯುವಕನೊಬ್ಬನ ದುರಂತದ ಕಥೆಯನ್ನು ಸಾರಿ ಹೇಳುತ್ತದೆ. ಅದರೊಟ್ಟಿಗೆ ನಾಶವಾದ ಸಾವಿರಾರು ರೈತ, ಬಡಜನ, ಮಧ್ಯಮವರ್ಗದ ದುರಂತಗಳನ್ನೂ.

ಮಾಯಾಮೃಗದ ಹಿಂದೆ

ಎಲ್ಲರಂತೆ ಬದುಕಿನ ಬಗ್ಗೆ ಸುಂದರ ಕನಸುಗಳನ್ನು ಹೊಂದಿದ್ದ ದಿನೇಶ ಶ್ರಮವಹಿಸಿ ದುಡಿಯುವುದರಿಂದ ಯಾವ ಪ್ರಯೋಜನ ಇಲ್ಲವೆಂದು ತೀರ್ಮಾನಿಸಿ ಅವನ ಓರಗೆಯವರಲ್ಲಿ ಆಗಲೇ ಜನಪ್ರಿಯವಾಗಿದ್ದ ಬಡ್ಡಿದಂಧೆಯನ್ನೇ ಆರಿಸಿಕೊಂಡಿದ್ದ. ಬಡ್ಡಿ ವ್ಯವಹಾರದವರು ಕೆಲವೇ ದಿನಗಳಲ್ಲಿ ಸಂಪಾದಿಸಿ ಕೈಗೆ, ಕುತ್ತಿಗೆಗೆ ಹಗ್ಗದಂತಹ ಚಿನ್ನದ ಸರಗಳು, ಎರಡೂ ಕೈ ಬೆರಳುಗಳಿಗೆ ಉಂಗುರಗಳು, ತಿರುಗಾಡಲು ಬೈಕ್, ದಿನರಾತ್ರಿ ಬಾರ್‌ಗಳಲ್ಲಿ ಮನಬಂದಂತೆ ಖರ್ಚು ಮಾಡಲು ಹಣ. ಇದನ್ನು ನೋಡಿದ ದಿನೇಶ ವಯಸ್ಸಿನ ಸಹಜ ಮನಸ್ಥಿತಿಯಿಂದ ಈ ವ್ಯವಸ್ಥೆ ಬೀಸಿದ ಜಾಲದಲ್ಲಿ ಸಿಕ್ಕಿಬಿದ್ದ.

ನಗರದ ಯುವ ಸಮುದಾಯದಲ್ಲಿ ಹೆಚ್ಚು ಜನಪ್ರಿಯವಾಗುತ್ತಿರುವ ಈ ದಂಧೆಯಲ್ಲಿ ಎಲ್ಲರಂತೆ ದಿನೇಶನೂ ಕೈಹಾಕಿ ಪ್ರಾರಂಭದಲ್ಲಿ ಒಳ್ಳೆ ವ್ಯವಹಾರವನ್ನೇ ನಡೆಸಿದ. ಅಮಾಯಕನೇನೂ ಅಲ್ಲದ ದಿನೇಶ ಬಡ್ಡಿ ವ್ಯವಹಾರಸ್ಥರ ಮಾಮೂಲಿ ತಂತ್ರ, ಚಾಳಿಗಳನ್ನೂ ಮೈಗೂಡಿಸಿಕೊಂಡು ಮೊದ ಮೊದಲು ಐಷರಾಮವಾಗಿಯೇ ಬದುಕಿದ. ಲಕ್ಷಗಟ್ಟಲೆ ವ್ಯವಹರಿಸುತ್ತಿದ್ದ ದಿನೇಶ ಹಾಸನದ ಬಡ್ಡಿ ಮಾಫಿಯಾದ ಭಾಗವಾಗಿಯೆ ಬೆಳೆದ. ಬಡ್ಡಿ ವ್ಯಾಪಾರಸ್ಥರು, ಫೈನಾನ್ಸಿಯರ್‌ಗಳು ದೊಡ್ಡ ಬಡ್ಡಿ ದೊರೆಯೊಬ್ಬನ ಆಶ್ರಯದ ನೆರಳಲ್ಲೆ ವ್ಯವಹಾರ ನಡೆಸಬೇಕಾಗಿರುವುದು ಈ ನಗರದ ಬಡ್ಡಿ ಮಾಫಿಯಾದ ವಿಶೇಷವಾಗಿತ್ತು. ಬಡ್ಡಿ ದೊರೆಗಳಿಂದ ಹಣಪಡೆದು ಜನಗಳಿಗೆ ಬಡ್ಡಿಗೆ ಬಿಟ್ಟು ಬಂದ ಬಡ್ಡಿ ಹಣದಲ್ಲಿ, ಬಡ್ಡಿ ದೊರೆಯ ಪಾಲು ಕೊಡಬೇಕಾಗುತ್ತದೆ.

ಹಾಸನದಲ್ಲಿಯೂ ಕೂಡ ಗ್ಯಾರಳ್ಳಿತಮ್ಮಯ್ಯ ಎಂಬ ದೊಡ್ಡ ಫೈನಾನ್ಸಿಯರ್‌ನ ಬಳಿ ಬಡ್ಡಿಗೆ ಸಾಲ ಪಡೆದು ದಿನೇಶ ಇತರರಿಗೆ ಶೇ. 10-15 ರಂತೆ ಬಡ್ಡಿಗೆ ಬಿಡುತ್ತಿದ್ದಾನೆಂದರೆ ರೈತರಿಂದ ಸಣ್ಣ ಪುಟ್ಟ ವ್ಯಾಪಾರಸ್ಥರಿಂದ ಅಮಾಯಕರಿಂದ ಇವರು ಸುಲಿದಿರುವ ಹಣ ಎಷ್ಟಿರಬಹುದೆಂದು ಆಶ್ಚರ್ಯವಾಗುತ್ತದೆ. ಮೊದಮೊದಲು ಚೆನ್ನಾಗಿಯೇ ಇದ್ದ ದಿನೇಶನ ವ್ಯವಹಾರ ರೈತರ ಬಳಿ, ವ್ಯಾಪಾರಸ್ಥರ ಬಳಿ ಹಣವಿಲ್ಲದಂತಾದಾಗ ಇವನ ಬಡ್ಡಿಗೂ ಸಂಚಕಾರ ಒದಗಿ ದಿನೇ-ದಿನೇ ದಿವಾಳಿಯತ್ತ ನಡೆದ. ಈ ಮಧ್ಯದಲ್ಲಿ ಚೀಟಿ ನಡೆಸುವವರಿಂದ ಬಡ್ಡಿಗೆ ಸಾಲ ತೆಗೆದುಕೊಳ್ಳುವುದು, ಕೊಡುವುದು, ಬಡ್ಡಿ ವ್ಯವಹಾರ ನಡೆದೇ ಇತ್ತು. ಅವನು ಸಾಯುವ ಮುಂಚೆ ಅವನಿಗೆ ಬೇರೆಯವರಿಂದ 25 ಲಕ್ಷರೂಪಾಯಿ ಸಾಲ ವಸೂಲಾಗಬೇಕಿತ್ತು ಹಾಗೂ ಇವನು ಬೇರೆಯವರಿಗೆ 10 ಲಕ್ಷ ಸಾಲ ಕೊಡಬೇಕಾಗಿತ್ತೆಂದು ಹೇಳಲಾಗುತ್ತಿದೆ.

ಇವನಿಗೆ ಬರುತ್ತಿದ್ದ ಬಡ್ಡಿ ಹಣ ಕೈಕೊಟ್ಟಾಗ ಇವನು ನಡೆಸುತ್ತಿದ್ದ ಚೀಟಿ ಇವನು ಕೊಡಬೇಕಾಗಿದ್ದ ಬಡ್ಡಿ ಸಾಲದ ಕಿರುಕುಳ ಜಾಸ್ತಿಯಾಗುತ್ತಾ ಬಂದಿತ್ತು. ಜೊತೆಗೆ ಬಡ್ಡಿದೊರೆ ಗ್ಯಾರಳ್ಳಿ ತಮ್ಮಯ್ಯನ ಬಳಿ ಇವನು ಮಾಡಿದ್ದ ಸಾಲ ಬೇರೆ ಇತ್ತು. ಅವನು ಸಾಲ ಕೊಡುವಂತೆ ಆಗಾಗ್ಗೆ ಪೀಡಿಸುತ್ತಿದ್ದ. ಕೆಲವು ಬಾರಿ ಬಹಿರಂಗವಾಗಿಯೇ ಹಲ್ಲೆ ನಡೆಸಿ ಕೊಲೆ ಬೆದರಿಕೆ ಹಾಕಿದ್ದ. ಇದನ್ನೆಲ್ಲವನ್ನೂ ಜಿಲ್ಲಾಡಳಿತಕ್ಕೆ ಹಾಗೂ ಪೊಲೀಸ್ ಅಧಿಕಾರಿಗಳಿಗೆ ದಿನೇಶ ಲಿಖಿತವಾಗಿ ವರದಿ ಮಾಡಿ ಹಾಗೂ ಯಾವುದೇ ಕ್ರಮ ಕೈಗೊಳ್ಳ ದಷ್ಟು ಅಸಹಾಯಕತೆಯನ್ನು ಜಿಲ್ಲಾಡಳಿತ ತೋರಿಸಿತ್ತು. ಏಕೆಂದರೆ ಗ್ಯಾರಳ್ಳಿ ತಮ್ಮಯ್ಯನ ಪ್ರಭಾವ ಜಿಲ್ಲಾಡಳಿತದ ಮೇಲೆ ಅಷ್ಟಿತ್ತು. ಒಮ್ಮೆಯಂತು ಅವನು ಗ್ಯಾರಳ್ಳಿ ತಮ್ಮಯ್ಯನ ಮೇಲೆ ಪೊಲೀಸ್ ಠಾಣೆಗೆ ದೂರು ಸಲ್ಲಿಸಿದ್ದಕ್ಕೆ ಪೊಲೀಸ್‌ಠಾಣೆ ಎದುರೇ ಹಲ್ಲೆಗೊಳಗಾಗಿದ್ದ. ತಮ್ಮಯ್ಯನಿಂದ ಹಾಗೂ ಅವನು ಸಾಕಿಕೊಂಡ ರೌಡಿಗಳಿಂದ ಬೆದರಿಕೆ, ಹಲ್ಲೆ, ಅಪಮಾನ ಅನುಭವಿಸಿದ ದಿನೇಶ ಕೊನೆಗೆ ತಮ್ಮಯ್ಯ ಮಾರ್ಚ್ 1 ರಂದು ಹಣ ಕೊಡದಿದ್ದರೆ ನಿನ್ನ ಕೊಲೆ ಮಾಡುತ್ತೇವೆ ಎಂದಾಗ ಕೆಲಗಂಟೆಗಳ ಗಡುವುಪಡೆದು ಮನೆಗೆ ಬಂದು ನೇಣುಹಾಕಿಕೊಂಡು ಆತ್ಮಹತ್ಯೆಮಾಡಿಕೊಂಡ. ತಾನು ಬರೆದಿಟ್ಟ ಪತ್ರದಲ್ಲಿ ಎಲ್ಲವನ್ನೂ ವಿವರವಾಗಿ ಬರೆದಿರುವ ದಿನೇಶ ನನ್ನ ಸಾವಿಗೆ ಗ್ಯಾರಳ್ಳಿ ತಮ್ಮಯ್ಯನೇ ಕಾರಣ ಎಂದು 4 ಕಡೆ ನಮೂದಿಸಿದ್ದಾನೆ. ಅಲ್ಲದೇ ಈ ಪತ್ರವನ್ನು ನೇರವಾಗಿ ಜಿಲ್ಲಾ ದಂಡಾಧಿಕಾರಿಗಳಿಗೇ ಬರೆದಿದ್ದಾನೆ. ದಿನೇಶ ಮೊದಲೇ ಜಿಲ್ಲಾಧಿಕಾರಿಗಳಿಗೆ, ಪೋಲೀಸ್ ವರಿಷ್ಠಾಧಿಕಾರಿಗಳಿಗೆ ಪತ್ರ ಬರೆದಿದ್ದರೂ ಗ್ಯಾರಳ್ಳಿತಮ್ಮಯ್ಯನ ಮೇಲೆ ಯಾವುದೇ ಕ್ರಮ ಜರುಗಿಸದೆ ದಿನೇಶನಿಗೆ ರಕ್ಷಣೆ ಒದಗಿಸದೆ ಇಡೀ ವ್ಯವಸ್ಥೆ ಬಡ್ಡಿ ದೊರೆಯ ಪರವಾಗಿ ನಿಂತಿದ್ದು ಇದೆ. ಇದು ಜಿಲ್ಲಾಡಳಿತವನ್ನೇ ಅಪಹಾಸ್ಯಕ್ಕೀಡು ಮಾಡಿದೆ. ದಿನೇಶನ ಮರಣ ಪತ್ರದ ಅನ್ವಯ ಠಾಣೆಯಲ್ಲಿ ಗ್ಯಾರಳ್ಳಿತಮ್ಮಯ್ಯನ ಮೇಲೆ 306ರ ಪ್ರಕಾರ ಮೊಕದ್ದಮೆ ದಾಖಲಿಸಲಾಗಿದ್ದರೂ ಅವನನ್ನು ಬಂಧಿಸುವಲ್ಲಿ ವಿಫಲರಾಗಿದ್ದಾರೆ. ಅಲ್ಲದೆ ಗ್ಯಾರಳ್ಳಿತಮ್ಮಯ್ಯ ಪೋಲೀಸ್ ದಾಖಲೆಗಳಲ್ಲಿ ಕಾಣೆಯಾಗಿ ಹಾಸನದಲ್ಲೇ ಪ್ರಭಾವಿ ವ್ಯಕ್ತಿಗಳ ಮನೆಯಲ್ಲಿದ್ದು ಮಧ್ಯಂತರ ಜಾಮೀನಿಗೆ ಪ್ರಯತ್ನಿಸುತ್ತಿದ್ದಾನೆ.

ದೊಡ್ಡ ತಿಮಿಮಂಗಿಲ

ಒಂದು ಹಂತದವರೆಗಷ್ಟೇ ನೇರವಾಗಿ ಸಾಲ ವಿತರಿಸಿ ಬಡ್ಡಿ ವಸೂಲಿ ಮಾಡುತ್ತಿದ್ದ ತಮ್ಮಯ್ಯ ಈಗ ಸಣ್ಣಪುಟ್ಟ ಫೈನಾನ್ಸ್‌ಗಳ ಮುಖಾಂತರ ವ್ಯವಹಾರಕ್ಕಿಳಿದ. ಸಣ್ಣಪುಟ್ಟ ಫೈನಾನ್ಸ್‌ನವರಿಂದ ಬಡ್ಡಿ ವಸೂಲಿ ಮಾಡುತ್ತಾ ಕೋಟಿಗಟ್ಟಲೆ ದುಡಿದ. ಇವನ ವ್ಯವಹಾರದ ಚತುರತೆ, ಗಟ್ಟಿತನ, ಲಾಭವೃದ್ಧಿಯ ವೇಗ ನೋಡಿ ಇವರ ಬಳಿ ಅನೇಕ ಭ್ರಷ್ಟ ಅಧಿಕಾರಿಗಳು, ಪೋಲೀಸ್ ಅಧಿಕಾರಿಗಳು, ಕೈಗಾರಿಕೋದ್ಯಮಿಗಳು, ಡಾಕ್ಟರುಗಳು, ಲಾಯರ್‌ಗಳು, ರಾಜಕೀಯ ಮುಖಂಡರು ತಾವು

ಸಾಮಾನ್ಯ ಕಳ್ಳ ಬಡ್ಡಿ ದೊರೆಯ ಪಟ್ಟಕ್ಕೆ?

ಗ್ಯಾರಳ್ಳಿ ತಮ್ಮಯ್ಯ ಕೆಲವೇ ವರ್ಷಗಳಲ್ಲಿ ತೀರಾ ಸಾಮಾನ್ಯನಿಂದ ಜಿಲ್ಲೆಯಲ್ಲಿ ಒಬ್ಬ ಪ್ರಬಲ ವ್ಯಕ್ತಿಯಾಗಿ ಬೆಳೆದುಬಂದ ದಾರಿ ವೇಗ ನೋಡಿದರೆ ಎಂಥಹವರೂ ಹುಬ್ಬೇರಿಸುತ್ತಾರೆ. ಹಾಸನ ನಗರದಿಂದ 6.ಕಿಮೀ ದೂರದಲ್ಲಿರುವ 'ಗ್ಯಾರಹಳ್ಳಿ'ಯ ಸಾಮಾನ್ಯ ರೈತ ಕುಟುಂಬದ ಈ ತಮ್ಮಯ್ಯ ಓದಿದ್ದು ಕೇವಲ ಹೈಸ್ಕೂಲ್ ಮಟ್ಟದವರೆಗೆ. ಅಷ್ಟಕ್ಕೆ ಸುಸ್ತಾಗಿ ಅಲ್ಲೆ ತಿರುಗಿಕೊಂಡಿದ್ದ ತಮ್ಮಯ್ಯ ಸಣ್ಣಪುಟ್ಟ ಕಳ್ಳತನಗಳಲ್ಲಿ ಹೆಸರುವಾಸಿಯಾಗಿದ್ದ. ಒಂದು ಸಲ ಕೋಳಿ ಕದ್ದ ಆರೋಪದ ಮೇಲೆ ಗ್ಯಾರಹಳ್ಳಿ ಪಕ್ಕದ ಊರಾದ ತವರದೇವರ ಕೊಪ್ಪಲಿನ ಗ್ರಾಮಸ್ಥರಿಂದ ಒದೆಯನ್ನು ತಿಂದಿದ್ದ. ಕೊನೆಗೆ ಹಾಸನಕ್ಕೆ ಗಾರೆ ಕೆಲಸಕ್ಕಾಗಿ ಬರುತ್ತಿದ್ದ. ಹಾಗೆಯೇ ಸರಾಯಿ ಅಂಗಡಿಯಲ್ಲಿ ಕೆಲಸಕ್ಕೆ ಸೇರಿ ತನ್ನಲ್ಲಿ ಅಂತರ್ಗತವಾಗಿದ್ದ ಕುಟಿಲ ವ್ಯವಹಾರತೆಯಿಂದ ಆ ಅಂಗಡಿಯ ಮಾಲಿಕನೂ ಆದ. ಜೊತೆಗೆ ತಲೆ ಹಿಡುಕನಾಗಿಯೂ ಕೆಲಸ ಮಾಡುತ್ತಿದ್ದ ವರದಿಗಳಿವೆ. ಹಾಗೆಯೇ ಗೆಳೆಯರೊಂದಿಗೆ ಸೇರಿ ಸೆಕೆಂಡ್ಸ್ ವ್ಯವಹಾರದಲ್ಲಿ ತೊಡಗಿಕೊಂಡ ತಮ್ಮಯ್ಯ ಜರ್ಕಿನ್‌ಗಳಲ್ಲಿ ಬಾಟಲ್‌ಗಳನ್ನು ಇಟ್ಟುಕೊಂಡು ಬೀದಿಯಲ್ಲಿ ಕೂಡ ಸೆಕೆಂಡ್ಸ್ ಮದ್ಯ ಮಾರುತ್ತಿದ್ದ ಎಂದು ತಿಳಿದುಬಂದಿದೆ. ಹೀಗೆ ತನ್ನ ವ್ಯವಹಾರ ಬದುಕಿನುದ್ದಕ್ಕೂ ಮೋಸ ವಂಚನೆಯನ್ನು ಮೈಗೂಡಿಸಿಕೊಂಡ ಗ್ಯಾರಳ್ಳಿತಮ್ಮಯ್ಯ ಶೇಖರವಾದ ಹಣವನ್ನು ಬಡ್ಡಿಗೆ ಬಿಡಲು ಪ್ರಾರಂಭಿಸಿದ. ಇವನು ಹೊಸತರಹದ ಬಡ್ಡಿ ವ್ಯವಹಾರದ ಸಂಶೋಧಕ ಎಂದು ಹೇಳಬಹುದು. ಬೆಳಿಗ್ಗೆ ಮಾರುಕಟ್ಟೆಗೆ ಬರುತ್ತಿದ್ದ ತಮ್ಮಯ್ಯ ಹಣದ ಅವಶ್ಯಕತೆ ಇರುತ್ತಿದ್ದ ವ್ಯಾಪಾರಸ್ಥರಿಗೆ ದಿನಕ್ಕೆ ಶೇ. 10 ರಂತೆ 100 ರೂ ಸಾಲದಲ್ಲಿ ಬಡ್ಡಿ ಮುರಿದು 90 ರೂ ಕೊಡುತ್ತಿದ್ದ, ಸಂಜೆಯೊಳಗೆ 100 ರೂ. ವಸೂಲಿ ಮಾಡುತ್ತಿದ್ದ. ಈ ದಂಧೆಯಲ್ಲಿ ತಮ್ಮಯ್ಯನಿಗೆ ಹಣ ಬರುತ್ತಿದ್ದಂತೆ ಬಡ್ಡಿ ವ್ಯವಹಾರವನ್ನೇ ತನ್ನ ಮುಖ್ಯ ಕಸುಬಾಗಿಸಿಕೊಂಡ. ಹಣ ಮತ್ತು ಅವನಲ್ಲಿದ್ದ ರೌಡಿ ಗುಣದಿಂದಾಗಿ 1990ರ ಆಸುಪಾಸಿನಲ್ಲಿ ಕೇವಲ ಸಾರಾಯಿ ವ್ಯಾಪಾರಿ, ಸೆಕೆಂಡ್ಸ್ ಮದ್ಯ ವ್ಯಾಪಾರಿಯಾಗಿದ್ದ ಗ್ಯಾರಳ್ಳಿ ತಮ್ಮಯ್ಯ ಈ ವ್ಯವಸ್ಥೆಯಲ್ಲಿರುವ ಎಲ್ಲಾ ಹುಳುಕುಗಳನ್ನು ಉಪಯೋಗಿಸಿಕೊಂಡೇ ಬೆಳೆದ. ಬೀದಿಯಲ್ಲಿ ಬಡ್ಡಿ ವ್ಯಾಪಾರ ನಡೆಸುತ್ತಿದ್ದ ತಮ್ಮಯ್ಯನಿಗೆ ಕಾನೂನಿನ ಚೌಕಟ್ಟಿನ ರಕ್ಷಣೆ ಅವಶ್ಯಕತೆ ಇತ್ತು. ಆಗ 'ಶ್ರೀ ವರಮಹಾಲಕ್ಷ್ಮಿ ಫೈನಾನ್ಸ್'ನ್ನು ಸ್ಥಾಪಿಸಿ ಕಾನೂನಿನ ಚೌಕಟ್ಟಿನಲ್ಲಿಯೇ ವ್ಯವಹಾರಕ್ಕೆ ತೊಡಗಿದ. ಇವನ ಬಡ್ಡಿ ವ್ಯವಹಾರದ ಸ್ವರೂಪವೇ ಕುತೂಹಲಕಾರಿಯಾಗಿದೆ. ಉದಾಹರಣೆಗೆ ಅವನ ಬಳಿ ಹತ್ತು ಸಾವಿರ ಸಾಲ ಪಡೆದು ಆಧಾರ ಪತ್ರಗಳನ್ನು ಇಟ್ಟರೆ ಮಾತ್ರ ಶೇ. 10 ರಷ್ಟು ಮಾತ್ರ ಬಡ್ಡಿ ವಿಧಿಸುತ್ತಿದ್ದ. ಇದನ್ನು ಕಡ್ಡಾಯವಾಗಿ ಕಟ್ಟದಿದ್ದರೆ ಮುಂದಿನ ತಿಂಗಳು ಎರಡೂ ತಿಂಗಳ ಬಡ್ಡಿಯ ಜೊತೆಗೆ ಮೊದಲ ತಿಂಗಳ ಬಡ್ಡಿಗೆ ಶೇ. 10 ರಷ್ಟು ಬಡ್ಡಿ ವಿಧಿಸಿ ವಸೂಲಿ ಮಾಡುತ್ತಿದ್ದ.

ಅವನ ಬಳಿ ವಿಶೇಷ ಸಾಲದ ಯೋಜನೆ ಇದೆ. ಅದು 'ಮೀಟರ್ ಬಡ್ಡಿ' ಸೌಲಭ್ಯ. ಈ ವಿಶೇಷ ಸಾಲ ತೆಗೆದುಕೊಂಡಾತ ಗಂಟೆಗಿಷ್ಟು, ನಿಮಿಷಕ್ಕಿಷ್ಟು ಬಡ್ಡಿ ಕಟ್ಟಬೇಕು. ಉದಾಹರಣೆಗೆ ಒಬ್ಬ ವ್ಯಕ್ತಿ ಮಧ್ಯಾಹ್ನ 1 ಗಂಟೆಗೆ ಶೇ. 10 ರಂತೆ ಬಡ್ಡಿಗೆ ಸಾಲ ತೆಗೆದುಕೊಂಡರೆ, ಇನ್ನೊಂದು ಗಂಟೆಯೊಳಗೆ ಅಂದರೆ 2 ಗಂಟೆಗೆ ಬಡ್ಡಿ ಸಮೇತ ಅಸಲು ಕೊಡಬೇಕು. ಇಲ್ಲದಿದ್ದರೆ ಗಡಿಯಾರದ ಮುಳ್ಳು ಓಡಿದಂತೆ ಇವನ ಬಡ್ಡಿಯೂ ಹೆಚ್ಚುತ್ತಾ ಹೋಗುತ್ತದೆ. ಗಡಿಯಾರದ ಮುಳ್ಳು ಸುತ್ತಿದಂತೆಲ್ಲಾ ಬಡ್ಡಿ ಹೆಚ್ಚು ಕೊಡಬೇಕಾಗುತ್ತದೆ. ಈ ಯೋಜನೆಯ ಫಲಾನುಭವಿಗಳು ಹೆಚ್ಚಾಗಿ ಚೀಟಿ, ಬಡ್ಡಿ ವ್ಯವಹಾರ, ಸಟ್ಟ ವ್ಯವಹಾರ, ಮಟ್ಕಾ ದಂಧೆಯಲ್ಲಿ ಮುಳುಗಿದ್ದವರೇ ಹೆಚ್ಚು. ಇವನು ಸಾಲ ವಸೂಲಾತಿಗೂ ತುಂಬ ಪ್ರಸಿದ್ಧವಾಗಿದ್ದಾನೆ. ಇವನ ಬಳಿ 30 ಹುಡುಗರು ಬಡ್ಡಿ ವಸೂಲಿಗಾಗಿಯೇ ಕೆಲಸ ಮಾಡುತ್ತಾರೆಂದು ಹೇಳಲಾಗುತ್ತಿದೆ. ಇವರಿಗೆಲ್ಲ ಒಂದೊಂದು ಬೈಕ್, ಸಣ್ಣಪುಟ್ಟ ಫೈನಾನ್ಸ್‌ಗಳು, ಎಂಟರ್ ಪ್ರೈಸಸ್‌ಗಳನ್ನು ತಮ್ಮಯ್ಯನೇ ಮಾಡಿಕೊಟ್ಟು ಸಾಕಿಕೊಂಡಿದ್ದಾನೆಂದು ಹೇಳಲಾಗಿದೆ. ಹೀಗೆ ಇವನಿಂದ ಸಾಲ ಪಡೆದು ತಮ್ಮ ಜಮೀನು ಆಸ್ತಿ ಕಳೆದುಕೊಂಡ ರೈತ-ಕಾರ್ಮಿಕ ಬಡಜನ ಕುಟುಂಬಗಳು ಅನೇಕ. ಹಾಸನ ನಗರದಲ್ಲೇ ಕಡಿಮೆ ಎಂದರೆ 300ಕ್ಕೂ ಹೆಚ್ಚು ಕುಟುಂಬಗಳಿಗೆ ಇವನು ಅನ್ಯಾಯ ಮಾಡಿದ್ದಾನೆಂದು ಹೇಳಲಾಗುತ್ತಿದೆ. ಒಂದು ಅಂದಾಜಿನ ಪ್ರಕಾರ ಎರಡು ಭವ್ಯ ಬಂಗಲೆಗಳು, 36 ಎಕರೆ ಕಾಫಿತೋಟ, ಎರಡು ಬಾರ್, ಒಂದು ಛತ್ರ, ಒಂದು ವಾಣಿಜ್ಯ ಸಂಕೀರ್ಣ, ಒಂದು ಸ್ಕೂಲ್, ಸುಮಾರು 500 ಸೈಟುಗಳು, ಸಣ್ಣಪುಟ್ಟ ಮನೆಗಳು, ಅಂಗಡಿ ಮಳಿಗೆಗಳು ಇವಕ್ಕೆಲ್ಲ ಲೆಕ್ಕವಿಲ್ಲ. ಇಷ್ಟೆಲ್ಲಾ ಇವನ ಮತ್ತು ಇವನ ಸಂಬಂಧಿಕರ ಹೆಸರಲ್ಲಿರುವಂತಹ ಆಸ್ತಿ ಪಾಸ್ತಿಗಳ ವಿವರ. ಇನ್ನೂ ಬೇನಾಮಿ ಎಷ್ಟಿದೆ ಎಂದು ಲೆಕ್ಕವಿಲ್ಲ. ಇವನಿಗೆ ತಿಂಗಳಿಗೆ ಸುಮಾರು 20 ರಿಂದ 25 ಲಕ್ಷ ಬಡ್ಡಿ ಆದಾಯವಿದೆ ಎಂದು ಹೇಳಲಾಗುತ್ತಿದೆ. ಹಾಗೂ ಇವನ ಒಟ್ಟಾರೆ ವ್ಯವಹಾರ ಕೋಟಿಗಟ್ಟಲೆ ದಾಟಿದೆ ಎಂಬ ಅಂದಾಜಿದೆ. ಇವನು ಕೆಲವೊಮ್ಮೆ ಶೇ. 25 ರಂತೆ ಬಡ್ಡಿ ವಿಧಿಸಿ ಸಾಲ ನೀಡಿರುವ ಉದಾಹರಣೆಗಳೂ ಉಂಟು. ಈ ಕಾನೂನು, ಬಡ್ಡಿ ವ್ಯವಹಾರವನ್ನೂ ನೋಡಿದರೆ ಎಂಥವರಿಗೂ ಆಶ್ಚರ್ಯವಾದೀತು ಹಾಗೂ ಇಂದಿನ ಸಣ್ಣಪುಟ್ಟ ಬಡ್ಡಿ ವ್ಯವಹಾರ ನಡೆಸುವ ಯುವಕರಿಗೆ ಇವನೊಬ್ಬ ಆದರ್ಶ ಪ್ರಾಯನಾಗಿ ಕಂಡಿರುವುದು ಆಶ್ಚರ್ಯವೇನಿಲ್ಲ.

ಪ.ಬಂಗಾಳ ಚುನಾವಣಾ ಕಣದಿಂದ

ಪ.ಬಂಗಾಳದಲ್ಲಿ ವಿಧಾನಸಭೆ ಚುನಾವಣೆಗೆ ಪಕ್ಷಗಳು ತಯಾರಿ ನಡೆಸಿವೆ. ಎಡರಂಗದ ಅಭ್ಯರ್ಥಿಗಳ ಪಟ್ಟಿ ಪ್ರಕಟವಾಗಿ ಕೆಲವು ವಾರಗಳೇ ಕಳೆದಿವೆ. ಅದು ಪ್ರಕಟವಾದ ನಂತರ ತೃಣಮೂಲ ಕಾಂಗ್ರೆಸ್ ಮತ್ತು ಬಿಜೆಪಿ ಒಕ್ಕೂಟದ ಅಭ್ಯರ್ಥಿಗಳ ಪಟ್ಟಿಯೂ ತಯಾರಾಗಿದೆ.

ಶತಾಯಗತಾಯ ಈ ಚುನಾವಣೆಯನ್ನು ಗೆಲ್ಲಬೇಕೆಂಬುದು ತೃಣಮೂಲ ಕಾಂಗ್ರೆಸ್‌ನ ಇಚ್ಛೆ. ಅದಕ್ಕೆ ಹೇಯ ಕೆಲಸ ಮಾಡಬೇಕಾಗಿ ಬಂದರೂ ಸರಿಯೇ ಎಂಬುದು ಅದರ ನಿಲುವು. ಯಾಕೆಂದರೆ ಈ ಬಾರಿ ಅವಕಾಶ ತಪ್ಪಿದರೆ ಇನ್ನು ಅವಕಾಶ ಇಲ್ಲ ಎಂಬಂತ ವಾತಾವರಣವನ್ನು ಅವರೇ ಸೃಷ್ಟಿಸಿಕೊಂಡಿದ್ದರು. 'ಪಾನ್ಸ್‌ಕುರಾ' ಲೈನನ್ನು ಉಪಯೋಗಿಸಿ ಚುನಾವಣೆ ಗೆಲ್ಲುವ ವಿಚಾರವನ್ನು ಅವರು ಹೊಂದಿದ್ದರು. (ಪಾನ್ಸಕುರಾ ಲೈನ್ - ಮೋಟಾರು ಸೈಕಲ್ಲುಗಳ ಸವಾರರು ದಿಢೀರನೆ ಬಂದು ಸಿಪಿಐ(ಎಂ) ನ ಬೆಂಬಲಿಗರ ಮನೆ ಗಳನ್ನು ಸುಡುವುದು, ಹಿಂಸಾಚಾರ ಮಾಡುವುದು, ಚುನಾವಣೆಗಳಲ್ಲಿ ದಾಂಧಲೆ ಎಬ್ಬಿಸುವುದು)

ಈಗ ತಹೆಲ್ಕಾ ಡಾಟ್ ಕಾಮ್ ಈ ಎಲ್ಲ ಯೋಜನೆಗಳನ್ನು ತಲೆಕೆಳಗು ಮಾಡಿ ಬಿಟ್ಟಿದೆ. ತೃಣಮೂಲ ಕಾಂಗ್ರೆಸ್ ಬಿಜೆಪಿಯ ಸ್ನೇಹದಲ್ಲಿ ಈಗ ಒಡಕು ಕಂಡುಬಂದಿದೆ. ತೃಣಮೂಲ ಕಾಂಗ್ರೆಸ್ ಮತ್ತು ಕಾಂಗ್ರೆಸ್ಸಿನ ನಡುವೆ ಚುನಾವಣಾ ಹೊಂದಾಣಿಕೆಯ ಮಾತುಕತೆಗಳು ನಡೆದಿವೆ. ಆದರೆ ಕೇಂದ್ರದ ಎನ್‌ಡಿಎ ಸರ್ಕಾರದಿಂದ ತೃಣಮೂಲ ಕಾಂಗ್ರೆಸ್ ಹೊರಗೆ ಬಂದ ಮೇಲೆ ಪ.ಬಂಗಾಳದ ಚುನಾವಣೆಯನ್ನು ಸರ್ಕಾರಿ ಯಂತ್ರದ ಮೂಲಕ ಪ್ರಭಾವಿತಗೊಳಿಸುವ ಹುನ್ನಾರಕ್ಕಂತೂ ದೊಡ್ಡ ಪೆಟ್ಟು ಬಿದ್ದಿದೆ. ಈ ತೃಣಮೂಲ ಬೆಂಬಲಿಗರೂ ಈಗ ಆ ಪಕ್ಷಕ್ಕೆ ಗೆಲುವು ಕಷ್ಟಕರ ಎಂದೇ ಹೇಳುತ್ತಿದ್ದಾರೆ.

ಎಡರಂಗದ ರ್‍ಯಾಲಿ

ಎಡಪಕ್ಷಗಳು ಕಲ್ಕತ್ತಾದಲ್ಲಿ ದೊಡ್ಡ ರ್‍ಯಾಲಿಯನ್ನು ಚುನಾವಣಾ ಪ್ರಚಾರದ ಅಂಗವಾಗಿ ಏರ್ಪಡಿಸಿದ್ದರು. ಇದರಲ್ಲಿ ಮುಖ್ಯವಾಗಿ ಕಾಂ. ಜ್ಯೋತಿಬಸು, ಮಾಜಿ ಪ್ರಧಾನಿ ಶ್ರೀ ವಿ.ಪಿ.ಸಿಂಗ್ ಮತ್ತು ಪ.ಬಂಗಾಳದ ಮುಖ್ಯಮಂತ್ರಿ ಬುದ್ಧದೇವ ಭಟ್ಟಾಚಾರ್ಯ ಮಾತನಾಡಿದರು. ಎರಡು ಲಕ್ಷಕ್ಕೂ ಹೆಚ್ಚು ಜನ ಭಾಗವಹಿಸಿದ ಈ ರ್‍ಯಾಲಿಯ ಶಿಸ್ತು ಮತ್ತು ಕ್ರಮಬದ್ಧತೆಯನ್ನು ನೋಡಿಯೇ ಇಲ್ಲಿಯ ಬೂರ್ಜ್ವಾ ಪತ್ರಿಕೆಗಳು ದಿಗಿಲುಗೊಂಡವು. ಎಲ್ಲಿಂದ ಎಷ್ಟು ಜನ ಹೇಗೆ ಬಂದರು ಎಂದು ಲೆಕ್ಕಾಚಾರ ಹಾಕುತ್ತ ಎಷ್ಟು ದುಡ್ಡು ಖರ್ಚಾಯಿತು ಎಂದು ಅವು ಅಚ್ಚರಿ ವ್ಯಕ್ತಪಡಿಸಿದವು. ಹಳ್ಳಿಗಾಡುಗಳಿಂದ ಬಂದವರಿಗೆ ಮೈದಾನದಲ್ಲಿಯೇ ಅಡಿಗೆ ಮಾಡಿ ಶಿಸ್ತಿನಿಂದ ಬಡಿಸಿದ್ದನ್ನು ಇವರು ಲೇವಡಿ ಮಾಡಿದವು. ಸಿಪಿಐ(ಎಂ)ನ ಪಾಲಿಟ್‌ಬ್ಯೂರೋ ಸದಸ್ಯ ಮತ್ತು ಪ.ಬಂಗಾಳ ರಾಜ್ಯ ಸಮಿತಿಯ ಕಾರ್ಯದರ್ಶಿ ಅನಿಲ್ ಬಿಸ್ವಾಸ್ ಬಸ್ಸುಗಳು, ಊಟ ಮತ್ತಿತರ ಖರ್ಚುಗಳನ್ನು ಪಕ್ಷಗಳ ಜಿಲ್ಲಾ ಸಮಿತಿಗಳು ಹಂಚಿಕೊಂಡವು ಎಂದು ವಿವರಿಸಬೇಕಾಯಿತು. ಬೂರ್ಜ್ವಾ ಪತ್ರಿಕೆಗಳಿಗೆ ಎಡ ಪಕ್ಷಗಳ ಸರಳ ರ್‍ಯಾಲಿ. 'ಬಂಗಾರು' (ಅಂದರೆ ಲಂಚದ ಹಣ) ಇಲ್ಲದೆ ನಡೆಯಿತು ಎನ್ನುವುದನ್ನೇ ಬರೆಯಲು ಇಷ್ಟವಾಗಿಲ್ಲ. ತಾನು ಕಳ್ಳ ಪರರನ್ನು ನಂಬ' ಎಂಬ ಗಾದೆ ಇಂತಹವರ ಸಲುವಾಗಿಯೇ ಹುಟ್ಟಿರಬೇಕು ಇರಲಿ.

ರ್‍ಯಾಲಿಯಲ್ಲಿ ವಿ.ಪಿ.ಸಿಂಗ್ ಖಂಡಿತವಾಗಿ ಹೇಳಿದರು. 'ಇಂದು ಇಲ್ಲಿ ನೆರೆದಿರುವ ಜನ ಸಮೂಹವನ್ನು ನೋಡಿದರೆ ಎಡರಂಗ ಗೆದ್ದೆ ಗೆಲ್ಲುತ್ತದೆ ಎಂಬುದು ಸ್ಪಷ್ಟವಾಗಿ ಗೊತ್ತಾಗುತ್ತದೆ'

ಇದಾದ ನಂತರದಲ್ಲಿ ಮಮತಾ ಬ್ಯಾನರ್ಜಿ ಮತ್ತು ಬಿಜೆಪಿಯ ನಡುವೆ ತೀವ್ರ ಮನಸ್ತಾಪ ಉಂಟಾಗಿ (ಈಗ ಉಂಟಾಗಿದ್ದಲ್ಲ ಮೊದಲೂ ಇತ್ತು ಈಗ ತೀವ್ರವಾಗಿ ಹೊರಬಂತು ಅಷ್ಟೆ). ಬಿಜೆಪಿ

ಜಿ.ಎಸ್.ಮಣಿ, ಕೊಲ್ಕತ್ತಾದಿಂದ

ಎಲ್ಲಾ ಸ್ಥಾನಗಳಿಗೂ ಬಿಜೆಪಿ ನೇತೃತ್ವದಲ್ಲಿ ಎನ್‌ಡಿಎ ಪಕ್ಷಗಳ ಅಭ್ಯರ್ಥಿಗಳನ್ನು ನಿಲ್ಲಿಸುವುದಾಗಿ ಘೋಷಿಸಿತು. ತೃಣಮೂಲ ಕಾಂಗ್ರೆಸ್ಸಂತೂ ಈಗ ಎನ್‌ಡಿಎಯಲ್ಲಿಲ್ಲ.

ಇದರ ನಂತರದ ಬೆಳವಣಿಗೆ ತೃಣಮೂಲ ಕಾಂಗ್ರೆಸ್ಸು ಮತ್ತು ಕಾಂಗ್ರೆಸ್ಸು ಹತ್ತಿರವಾಗಿರುವುದು ಕಾಂಗ್ರೆಸ್ಸು ಮತ್ತು ತೃಣಮೂಲ ಕಾಂಗ್ರೆಸ್ಸು ಒಟ್ಟಿಗೆ ಸೇರಿದರೆ ಎಡರಂಗಕ್ಕೆ ಉಳಿವಿಲ್ಲ ಎಂದು ಬಹಳ ದಿನಗಳ ಕೂಗು ಬೂರ್ಜ್ವಾಗಳದ್ದು. ಆದರೆ ಕಾಂಗ್ರೆಸ್ಸಿನೊಳಗೇ ಇದಕ್ಕೆ ತೀವ್ರ ವಿರೋಧವಿದೆ. ಕಾಂಗ್ರೆಸ್ ಕಛೇರಿಯ ಎದುರಿಗೆ ಈ ಚುನಾವಣಾ ಹೊಂದಾಣಿಕೆಯ ವಿರುದ್ಧ ಕಾಂಗ್ರೆಸ್ ಕಾರ್ಯಕರ್ತರು ಧರಣಿ ನಡೆಸಿದರು.

ಹೈಕಮಾಂಡಿನ ದೂತರಾಗಿ ಕಮಲನಾಥರು ಬಂದು ಮಾತುಕತೆ ನಡೆಸಿದರು. ಮಾತುಕತೆಯ ನಡುವೆ ಹಲವು ಅಡ್ಡಿಗಳು ಬಂದವು. ಕಮಲನಾಥ ದೆಹಲಿಗೆ ಹೋಗಿ ಹಿಂತಿರುಗಿ ಬಂದರು. ಕಾಂಗ್ರೆಸ್ಸಿನೊಳಗೆ ಈ ಬಾರಿ ಸೀಟು ದೊರಕದು ಎಂದು ಕಾಂಗ್ರೆಸ್ ಹೇಳಿದೆ. ಇದು



ಕಲ್ಕತ್ತದಲ್ಲಿ ನಡೆದ ಭಾರಿ ಬಹಿರಂಗ ಸಭೆಯಲ್ಲಿ ವಿ.ಪಿ.ಸಿಂಗ್, ಜ್ಯೋತಿಬಸು, ಬುದ್ಧದೇವ ಭಟ್ಟಾಚಾರ್ಯ

ತೃಣಮೂಲದೊಂದಿಗೆ ಹೊಂದಾಣಿಕೆ ಮಾಡಿಕೊಳ್ಳುವ ಸಲುವಾಗಿ ಕಾಂಗ್ರೆಸ್ ತೆರುತ್ತಿರುವ ಬೆಲೆ, ಹಾಲಿ ವಿಧಾನಸಭಾ ಸದಸ್ಯರಿಗೇ ಸೀಟು ದೊರಕದ ಮೇಲೆ ಕಾಂಗ್ರೆಸ್ಸಿನೊಳಗೆ ತೀವ್ರ ಪ್ರತಿರೋಧ ಉಂಟಾಗಿದೆ. ಪಕ್ಷದ ರಾಜ್ಯ ಅಧ್ಯಕ್ಷ ಪ್ರಣವ್ ಮುಖರ್ಜಿಯವರು ಸಹ ಈ ಬಗ್ಗೆ ಅಸಂತುಷ್ಟರಾಗಿದ್ದಾರಂತೆ. ಹಿಂದಿನ ರಾಜ್ಯ ಅಧ್ಯಕ್ಷ ಸೋಮನ್ ಮಿತ್ರ ಅವರೂ ತಮ್ಮ ಅಭ್ಯರ್ಥಿಗಳಿಗೆ ಸೀಟು ಸಿಕ್ಕಿಲ್ಲವೆಂದು ಕೋಪಗೊಂಡಿದ್ದಾರೆ.

ಮುಖ್ಯಮಂತ್ರಿ ಬುದ್ಧದೇವ ಭಟ್ಟಾಚಾರ್ಯ ಅವರ ವಿರುದ್ಧ ಜಾಧವಪುರದಲ್ಲಿ ಮಾದವಿ ಮುಖರ್ಜಿ ಎಂಬ ಸಿನಿಮಾ ನಟಿಯನ್ನು ತೃಣಮೂಲ ಕಾಂಗ್ರೆಸ್ಸು ಕಣಕ್ಕಿಳಿಸಿದೆ. ಹಿಂದೆ ವಾಹಿತಿ ಮಂತ್ರಿಗಳಾಗಿದ್ದ ಬುದ್ಧದೇವ ಭಟ್ಟಾಚಾರ್ಯರು ಈಕೆಯ ಸಿನಿಮಾ ಬಿಡುಗಡೆಯಾಗಲು ನೆರವಾಗಿದ್ದರಂತೆ. ಆದರೆ ಆಕೆಯ ಗಂಡ ಮತ್ತು ಮಗಳು ಆಕೆಗೆ ಬೆಂಬಲ ನೀಡಲಾರೆವು ಎಂದು ಸಾರ್ವಜನಿಕವಾಗಿ ಹೇಳಿಕೆ ನೀಡಿದ್ದಾರೆ. ಆಕೆಯ ಗಂಡ 'ತಾವೊಬ್ಬ ಕಮ್ಯುನಿಸ್ಟ್ ಆದ್ದರಿಂದ ಮಾಧವಿ ಮುಖರ್ಜಿಗೆ ಬೆಂಬಲ ನೀಡಲಾರೆ ಎಂದು ಹೇಳಿದ್ದಾರೆ. ಇದಲ್ಲದೆ ಚುನಾವಣಾ ಕಣಕ್ಕಿಳಿಯುವ ಬಗ್ಗೆ ನನ್ನೊಂದಿಗೆ ಆಕೆ ಚರ್ಚಿಸಿಯೂ ಇಲ್ಲ ಎಂದಿದ್ದಾರೆ. ಹೀಗೆ ಕುಟುಂಬದಲ್ಲೇ ತೀವ್ರ ಭಿನ್ನಾಭಿಪ್ರಾಯ ಬಂದಿದೆ.

ಇತ್ತ ಎಡರಂಗದ ಪಕ್ಷಗಳು ಚುನಾವಣಾ ಪ್ರಚಾರವನ್ನು ನಡೆಸುತ್ತಿವೆ. ಎಲ್ಲ ಭಾಗಗಳಲ್ಲಿ ಕಾರ್ಯಕರ್ತರು ಚುರುಕಾಗಿ ಕೆಲಸ ಮಾಡುತ್ತಿದ್ದಾರೆ. ಮನೆ ಮನೆಗೆ ತೆರಳಿ ವೋಟಿನ ಬೆಂಬಲ ಕೇಳುತ್ತಿದ್ದಾರೆ. ಎಡರಂಗ ಸರ್ಕಾರ ಮಾಡಿರುವ ಸಾಧನೆಗಳನ್ನು ವಿವರಿಸುತ್ತಿದ್ದಾರೆ. ತೃಣಮೂಲ ಕಾಂಗ್ರೆಸ್ಸು, ಕಾಂಗ್ರೆಸ್, ಬಿಜೆಪಿಗಳು ಎಂತಹ ಪಕ್ಷಗಳು ಎಂಬುದನ್ನು ವಿವರಿಸುತ್ತಿದ್ದಾರೆ.

ಈಗಾಗಲೇ ಜ್ಯೋತಿಬಸು ಅವರು ಎಲ್ಲೆಲ್ಲಿ ಚುನಾವಣಾ ಪ್ರಚಾರ ಭಾಷಣ ಮಾಡುತ್ತಾರೆ ಎಂಬ ಪಟ್ಟಿ ತಯಾರಿಸಲಾಗಿದೆ. ರಾಜ್ಯದ ಒಟ್ಟು 17 ಕಡೆಗಳಿಗೆ ಭೇಟಿ ನೀಡಲಿದ್ದಾರೆ. ಅವರ ಪ್ರಯಾಣಕ್ಕಾಗಿ ಹೆಲಿಕಾಪ್ಟರೊಂದನ್ನು ಪಡೆಯಲಾಗುತ್ತಿದೆ. ವಿರೋಧ ಪಕ್ಷಗಳು ಈ ವಯೋವೃದ್ಧರು ಪಕ್ಷದ ಖರ್ಚಿನಲ್ಲಿ ಹೆಲಿಕಾಪ್ಟರನ್ನು ಉಪಯೋಗಿಸುತ್ತಿರುವುದನ್ನೇ ದೊಡ್ಡ ವಿಷಯ ಮಾಡುವ ಪ್ರಯತ್ನ ಮಾಡಿದರು. ಆದರೆ ಪ.ಬಂಗಾಳದ ಜನ ಜ್ಯೋತಿಬಸು ಎಂತಹವರು ಎಂಬುದು ಅರಿತು ಕೊಂಡಿದ್ದಾರೆ. ಆದ್ದರಿಂದ ವಿರೋಧ ಪಕ್ಷಗಳು ಹುಯಿಲಿಗೆ ಬೆಲೆ ಬರಲಿಲ್ಲ.

ಚುನಾವಣಾ ಕಾವು ಏರುತ್ತಿದೆ. ತೃಣಮೂಲಿಗರ ಹತಾಶೆ ನೋಡಿದರೆ ಈ ಬಾರಿ ತೀವ್ರ ಹಿಂಸೆ ಆಗುವ ಲಕ್ಷಣಗಳಿವೆ. ಸಿಪಿಐ(ಎಂ) ನ ಹಲವು ಕಾರ್ಯಕರ್ತರು ಈಗಾಗಲೇ ಪ್ರಾಣ ಕಳೆದುಕೊಂಡಿದ್ದಾರೆ.

ಹಾಸನದ ಬಡ್ಡಿ ಮಾಫಿಯಾ

ಈ ಸಮಾಜದಿಂದ ಕೊಳ್ಳೆ ಹೊಡೆದ ಹಣವನ್ನು ಇವನ ಬಳಿ ಹೂಡಿ ಬಡ್ಡಿ ಪಡೆಯುತ್ತಿದ್ದಾರೆ. ಹಾಗೂ ಹಣ ದ್ವಿಗುಣ ಗೊಳಿಸಿಕೊಂಡಿದ್ದಾರೆ. ಹೀಗೆ ಇದೇ ಬಡ್ಡಿ ಸಾಲದ ವ್ಯವಹಾರ ಕ್ಷೇತ್ರವನ್ನೇ ಮಾಫಿಯಾವನ್ನಾಗಿ ಮಾಡಿ ಅದರ ಅಧಿಪತಿಯಾಗಿ ಬೆಳೆದು ನಿಂತಿದ್ದಾನೆ . ಹಾಗಾಗಿ ಇದೇ ವ್ಯವಸ್ಥೆಯನ್ನು ತನ್ನ ಕೈಯಲ್ಲಿಡಿದು ಜನರ ಬದುಕಿನೊಟ್ಟಿಗೆ ಆಟವಾಡಿ ತಾನು ಮಾತ್ರ ದಿನೇ ದಿನೇ ದೊಡ್ಡ ಬಂಡವಾಳಶಾಹಿಯಾಗಿ ಬೆಳೆದಿದ್ದಾನೆ.

ಇವನ ಬಳಿ ಸಾಲ ತೆಗೆದುಕೊಂಡರೆ ಅವರ ಕಥೆ ಮುಗಿದಂತೆಯೇ. ಕೊಲೆ ಬೆದರಿಕೆ ಹಾಕಿಯಾದರೂ ಸಾಲ ವಸೂಲಿ ಮಾಡಬಲ್ಲ. ಸರ್ಕಾರಿ ನೌಕರರು ಸಾಲಗಾರರಾಗಿದ್ದರೆ ಅವರ ಕಛೇರಿಗೇ ನುಗ್ಗಿ ಎಲ್ಲರೆದುರೇ ಥಳಿಸಿ ಸಾಲ ವಸೂಲಿ ಮಾಡಿದ್ದಾನೆ. ಪೋಲೀಸ್ ಇಲಾಖೆಯಲ್ಲೂ ಹಲವಾರು ಅಧಿಕಾರಿಗಳನ್ನು, ಪತ್ರಕರ್ತರನ್ನು ಸಾಕಿಕೊಂಡಿದ್ದಾನೆಂದು ಹೇಳಲಾಗುತ್ತಿದೆ. ಇವನಿಗೆ ಕಾನೂನು ಮಾಹಿತಿ ಒದಗಿಸಲೆಂದೆ 6 ಜನ ಲಾಯರ್‌ಗಳು ಕೆಲಸ ನಿರ್ವಹಿಸುತ್ತಿದ್ದಾರೆಂದರೆ ಇವನ ಮಟ್ಟವನ್ನು ಊಹಿಸಬಹುದು.

ಧಾರ್ಮಿಕ ಮುಖವಾಡ

ಎಲ್ಲಾ ಶೋಷಕರಂತೆ ಇವನೂ ಅಪಾರ 'ದೈವಭಕ್ತ'. ತನ್ನೆಲ್ಲ ಕಾನೂನುಬಾಹಿರ ಕೆಲಸಗಳಿಗೆ ಸಾಮಾಜಿಕ ಮುಖವಾಡ ತೊಡಗಿಸಲು ಆಗಾಗ್ಗೆ ದೇವಸ್ಥಾನಗಳಿಗೆ, ಸಂಘಸಂಸ್ಥೆಗಳಿಗೆ ದಾನ-ಧರ್ಮ ಮಾಡುತ್ತಾ ಯಾವುದೋ ಧರ್ಮಲಂಡರಿಂದ 'ಧರ್ಮರತ್ನಾಕರ' ಎಂಬ ಬಿರುದು ಬೇರೆ ಪಡೆದಿದ್ದಾನೆ. ಒಂದು ಬೋರ್ಡಿಂಗ್ ಶಾಲೆ, ಒಂದು ಮದುವೆ ಛತ್ರ ಕಟ್ಟಿಸಿ ಸಮಾಜದಲ್ಲಿ ಸಭ್ಯಸ್ಥನೆಂದು ತೋರಿಸಿಕೊಳ್ಳುತ್ತಿದ್ದಾನೆ. ಮುಂದೆ ಅವನಿಗೆ ಎಂ.ಎಲ್.ಎ ಸ್ಥಾನದ ಮೇಲೆ ಕಣ್ಣಿದೆ ಎಂದು ಹೇಳಲಾಗುತ್ತಿದೆ. ಇವನ ಕಲ್ಯಾಣಮಂಟಪದ ಉದ್ಘಾಟನೆಗೆ ಧರ್ಮಸ್ಥಳದ ವೀರೇಂದ್ರ ಹೆಗ್ಡೆಯವರನ್ನೇ ಕರೆಸಿ ಜನರ ಮತ್ತು ದೇವರ ಕೃಪೆಗೆ ಪಾತ್ರನಾಗಿದ್ದಾನೆ. ಎಲ್ಲಾ ರಾಜಕೀಯ ಪಕ್ಷಗಳಿಗೆ ಎಲೆಕ್ಷನ್ ಫಂಡ್ ನೀಡುತ್ತಾನೆ. ಎಲ್ಲಾ ಸಂಘ ಸಂಸ್ಥೆಗಳಿಗೆ ಫಂಡ್ ನೀಡುತ್ತಾನೆ. ಹಾಗಾಗಿ ಈ ರೀತಿಯ ಸಾಮಾಜಿಕ ಮುಖ ಹೊತ್ತು ಇನ್ನೊಂದು ಕಡೆ ಇಡೀ ಸಾಮಾಜಿಕ ವ್ಯವಸ್ಥೆಯನ್ನೇ ತಾನು ನಿಯಂತ್ರಿಸುವ ಹಂತ ತಲುಪಿಬಿಟ್ಟಿದ್ದಾನೆ.

ಇವನ ವ್ಯವಹಾರಕ್ಕೆ ಬೆಂಗಾವಲಾಗಿ ನಿಂತಿರುವವರಲ್ಲಿ ಪಾಲಿಕಾ ಕೃಷ್ಣ ಪ್ರಮುಖ. ಇವನು ತಮ್ಮಯ್ಯನ ಭಾವನಾಗಿದ್ದು ಮಹಾನ್ ರೌಡಿ. ಇವನ ಆಸ್ತಿಯೇ ಈಗ ಲೆಕ್ಕಕ್ಕೆ ಸಿಗದಷ್ಟು ಬೆಳೆದಿದೆ. ಜೊತೆಗೆ ಶ್ರೀರಾಮ್ 17 ಪ್ಲಸ್‌ನ ರವಿ (ಕುಟ್ಟಿರವಿ) ಹಾಗೂ ರಾಜ್ ಕುಮಾರ್ ಅಭಿಮಾನಿ ಸಂಘದ ಹಾ.ರಾ. ನಾಗರಾಜ್ ಕೂಡ ಇವನಿಗೆ ಆಪ್ತರಾಗಿದ್ದಾರೆ ಎಂದು ಹೇಳಲಾಗುತ್ತಿದೆ. ಜೊತೆಗೆ ಜಿಲ್ಲಾಡಳಿತದ ಒಬ್ಬ ಮುಖ್ಯ ಅಧಿಕಾರಿ ಪೋಲೀಸ್ ಸರ್ಕಲ್ ಇನ್ಸ್‌ಪೆಕ್ಟರ್, ಬ್ಯಾಂಕ್ ಮ್ಯಾನೇಜರ್‌ಗಳು, ಕೆಲ ಪತ್ರಕರ್ತರು ಇವನಿಗೆ ತುಂಬ ಪರಮಾಪ್ತರಾಗಿ ಇವನ ವ್ಯವಹಾರಕ್ಕೆ ರಕ್ಷಕರಾಗಿ ಪಾಲುದಾರರಾಗಿದ್ದಾರೆಂಬ ಮಾತುಗಳು ಕೇಳಿಬರುತ್ತಿದೆ.

ಇಷ್ಟು ಶಕ್ತನಾಗಿ ಬೆಳೆದಿರುವ ಬಡ್ಡಿದೊರೆ ಗ್ಯಾರಳ್ಳಿ ತಮ್ಮಯ್ಯನನ್ನು ಕೇವಲ ಒಬ್ಬ ದಿನೇಶನೆಂಬ ಯುವಕನ ಆತ್ಮಹತ್ಯೆ ಪ್ರಕರಣದಡಿ ಬಂಧಿಸಲು ಸಾಧ್ಯವೇ? ಹಾಗಾಗಿ ಇಡೀ ಜಿಲ್ಲಾಡಳಿತದ ಕಣ್ಣೆದುರಿಗೇ ಅನ್ಯಾಯ ನಡೆದರೂ ಕಣ್ಮುಚ್ಚಿ ಕುಳಿತಿದೆ. ತಾನೇ ಬೆಳೆಸಿದ ಈ ವ್ಯವಸ್ಥೆಯ ಪಾಪದ ಕೂಸು ಇಂದು ರಾಕ್ಷಸಾಕಾರ ತಾಳಿ ತಮ್ಮನ್ನು ನಿಯಂತ್ರಿಸುತ್ತಿರುವುದನ್ನು ಕಂಡು ಸುಮ್ಮನಾಗಿದ್ದಾರೆ. ಹಾಗಾಗಿ ಇನ್ನೂ ಎಷ್ಟು ಜೀವಗಳ ಬಲಿಗಾಗಿ ಕಾದಿದೆಯೋ.


ನನ್ನ ಮನೆ ಮಠವನ್ನಾದರೂ ಮಾರಿ ದಿನೇಶನ ಸಾಲ ತೀರಿಸುತ್ತೇನೆಂದು ಕದ್ದು ಹೋಗಿದ್ದ ಮಗನನ್ನು ವಾಪಸ್ ಕರೆತಂದ ದಿನೇಶ್‌ನ ತಂದೆ ಶಂಬೇಗೌಡ ಮಗನ ಸಾವಿನಿಂದ ನೊಂದು ನ್ಯಾಯಕ್ಕಾಗಿ ನ್ಯಾಯಾಲಯದ ಮೆಟ್ಟಲು ಹತ್ತಿದ್ದಾರೆ. ಐಪಿಸಿ ಸೆಕ್ಷನ್ 306ರ ಪ್ರಕಾರ ಮೊಕದ್ದಮೆ ದಾಖಲಾಗಿದ್ದರೂ ಗ್ಯಾರಳ್ಳಿತಮ್ಮಯ್ಯ ನಗರದಲ್ಲೇ ಇರುವುದನ್ನು ಕೆಲವು ಜನ ಕಂಡಿದ್ದಾರೆ.

ಇವನಿಂದ ಅನುಕೂಲ ಪಡೆದು ಹಾಗೂ ಇವನ ಬಳಿ ತಮ್ಮ ಭ್ರಷ್ಟ ಹಣವನ್ನಿಟ್ಟವರು ಕಂಗಾಲಾಗಿ ಹೋಗಿ ಇವನನ್ನು ರಕ್ಷಿಸಲು ಪ್ರಯತ್ನಿಸುತ್ತಿದ್ದಾರೆ. ಇವನಿಂದ ತಮ್ಮ ಬದುಕು, ಮನೆ, ಮಠ ಕಳೆದುಕೊಂಡು ಬೀದಿಗೆ ಬಂದವರು ಇವನ ಅವನತಿ ಹೇಗೆಂದು ಕುತೂಹಲದಿಂದ ನೋಡುತ್ತಿದ್ದಾರೆ. ಹಣಬಲ, ಭುಜಬಲ ಎರಡನ್ನು ಹೆಚ್ಚಿಸಿಕೊಂಡಿರುವ ಇವನನ್ನು ಯಾರೂ ಎದುರು ಹಾಕಿಕೊಳ್ಳುವ ಧೈರ್ಯ ಮಾಡುತ್ತಿಲ್ಲ.

ಈ ಪ್ರಜಾಪ್ರಭುತ್ವವಾದಿ ವ್ಯವಸ್ಥೆಯಲ್ಲಿ ಯಾರು ಏನು ಬೇಕಾದರೂ ಆಗಬಹುದು ಎನ್ನುವುದಕ್ಕೆ ಗ್ಯಾರಳ್ಳಿ ತಮ್ಮಯ್ಯ ಒಂದು ಜ್ವಲಂತ ಉದಾಹರಣೆ ಹಾಗೂ ಪ್ರಜಾಪ್ರಭುತ್ವಕ್ಕೆ ಒಂದು ಕಳಂಕ. ಧರ್ಮರತ್ನಾಕರ, ಬಡ್ಡಿದೊರೆ ಗ್ಯಾರಳ್ಳಿ ತಮ್ಮಯ್ಯನಂತವರ ದಬ್ಬಾಳಿಕೆ ಕೊನೆಗೊಳ್ಳುವುದು ಇವನನ್ನು ಸಾಕಿ, ಬೆಳೆಸಿ ರಕ್ಷಿಸುತ್ತಿರುವ ಇಡೀ ಬಂಡವಾಳಶಾಹಿ ಶೋಷಕ ವ್ಯವಸ್ಥೆಯನ್ನು ಕಿತ್ತೊಗೆದಾಗ ಮಾತ್ರ. ಹಾಗಾಗಿ ಇಡೀ ಶೋಷಕ ವ್ಯವಸ್ಥೆಯ ವಿರುದ್ಧ ಹೋರಾಟ ಮಾಡುವುದೊಂದೇ ಶೋಷಿತರಿಗೆ ಇರುವ ಏಕೈಕ ಮಾರ್ಗ.


ವಚನ ಪಾಲಿಸಿದ ನಾಯನಾರ್ ಸರ್ಕಾರ

'57 ವರ್ಷಕ್ಕೆ ಮೊದಲು ಕಾಂ. ಇ.ಕೆ.ನಾಯನಾರ್ ಹಾಗೂ ಪಿ.ಕೆ.ವಾಸುದೇವನ್ ನಾಯರ್ ಹಾಗ ಇತರರು ಸೇರಿ ಕೇರಳದ ಜನತೆಯ ಮುಂದೆ ಒಂದು ಚುನಾವಣಾ ಪ್ರಣಾಳಿಕೆ. ಎಡ ಪ್ರಜಾಪ್ರಭುತ್ವ ರಂಗದಿಂದ ಮುಂದಿಟ್ಟರು. ಈ ಪ್ರಣಾಳಿಕೆ ಬಿಡುಗಡೆಗೊಳಿಸಿದಾಗ ಕಮ್ಯುನಿಸ್ಟ್ ವಿರೋಧಿಗಳು ಈ ಪ್ರಣಾಳಿಕೆಯನ್ನು ಜಾರಿ ಮಾಡಲು ಸಾಧ್ಯವೇ ಎಂದು ಪ್ರಶ್ನಿಸಿದರು. ಆದರೆ ಈ ಅರವತ್ತು ತಿಂಗಳ ಅವಧಿಯಲ್ಲಿ ಈ ಪ್ರಣಾಳಿಕೆಯನ್ನು ಅಕ್ಷರಶಃ ಜಾರಿ ಮಾಡಲು ಎಡ ಪ್ರಜಾಪ್ರಭುತ್ವ ರಂಗಕ್ಕೆ ಸಾಧ್ಯವಾಗಿದೆ. ಕಾಂಗ್ರೆಸ್‌ನ ಗರೀಬಿ ಹಟಾವೊ ರೀತಿಯ ಪ್ರಣಾಳಿಕೆ ಇದಾಗಿರಲಿಲ್ಲ ಎಂದು ಜನತೆಗೆ ಗೊತ್ತಾಗಿದೆ. ಕಳೆದ ಚುನಾವಣೆಯಲ್ಲಿ ಬಿಜೆಪಿಯ ಪ್ರಣಾಳಿಕೆಯಲ್ಲಿ ಎಲ್ಲರೂ ಭ್ರಷ್ಟರು ತಾವು ಮಾತ್ರ ಉತ್ತಮರು ಎಂದು ಹೇಳಿ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದಿದ್ದಾರೆ. ಆದರೆ ಪ್ರಧಾನಮಂತ್ರಿಯಿಂದ ಹಿಡಿದು ಬಿಜೆಪಿಯ ಕಛೇರಿಯ ಅಟೆಂಡರ್‌ವರೆಗೆ ಎಲ್ಲರೂ ಇಂದು ಭ್ರಷ್ಟಾಚಾರದಲ್ಲಿ ಪಾಲುದಾರರಾಗಿದ್ದಾರೆ. ಇವರ ಪ್ರಣಾಳಿಕೆ ಹಾಗೂ ನಡವಳಿಕೆ ಭಿನ್ನವಾಗಿರುತ್ತದೆ. 1957 ರಲ್ಲಿ ಕೇರಳದಲ್ಲಿ ಮೊಟ್ಟಮೊದಲ ಬಾರಿಗೆ ಚುನಾವಣೆಯಲ್ಲಿ ಕಮ್ಯುನಿಸ್ಟ್ ಪಕ್ಷ ಅಧಿಕಾರಕ್ಕೆ ಬಂದಾಗ ಹೇಳಿಕೊಂಡಂತೆ ಜಮೀನುದಾರಿ ಪದ್ಧತಿಯನ್ನು ಕೊನೆಗೊಳಿಸುತ್ತೇವೆ, ಶಿಕ್ಷಣ ರಂಗವನ್ನು ಕೆಳಗಿನಿಂದ ಮೇಲಿನವರೆಗೆ ಸುಧಾರಣೆ ಮಾಡುತ್ತೇವೆ ಎಂಬ ಪ್ರಣಾಳಿಕೆಯನ್ನು ಎಲ್ಲಾ ಪ್ರಬಲವಾದ ವಿರೋಧಗಳ ನಡುವೆ ಜಾರಿ ಮಾಡಲು ಸಾಧ್ಯವಾಗಿದೆ.




ಇದೇ ರೀತಿ 1957 ರ ನಂತರದಲ್ಲಿ 1967, 1980, 1987 ರಲ್ಲಿ ಅಧಿಕಾರಕ್ಕೆ ಬಂದ ಎಡಪಕ್ಷ, ಸರಕಾರಗಳ ಅನುಭವ ಕೂಡಾ ಇದೇ ಆಗಿದೆ. ಚುನಾವಣೆಯಲ್ಲಿ ನೀಡಿದ ಆಶ್ವಾಸನೆಯನ್ನು ಜಾರಿ ಮಾಡಲು ಸಾಧ್ಯವಾಗಿದೆ. 1996 ರಲ್ಲಿ ಅಧಿಕಾರಕ್ಕೆ ಬಂದ ಎಡ ಪ್ರಜಾಪ್ರಭುತ್ವ ರಂಗ ಸರ್ಕಾರಕ್ಕೆ 12 ಲಕ್ಷ ನಿರುದ್ಯೋಗಿಗಳಿಗೆ ಕೆಲಸ ಕೊಡಿಸಲು ಸಾಧ್ಯವಾಗಿದೆ. ದುರ್ಬಲ ವರ್ಗದವರಿಗೆ ಮನೆ ಕಟ್ಟಿ ಕೊಡಲು ನೀರು ಹಾಗೂ ವಿದ್ಯುಚ್ಛಕ್ತಿ ಒದಗಿಸಲು ಸಾಧ್ಯವಾಗಿದೆ. ಎಲ್ಲೆಡೆಗಳಲ್ಲಿಯೂ ಪ್ರಶಂಸೆಗೆ ಒಳಗಾದ ಜನರ ಕೈಗೆ ಅಧಿಕಾರ ನೀಡಿದ ಜನತಾ ಯೋಜನೆಯ ಮೂಲಕ 10 ಲಕ್ಷ ಮಹಿಳೆಯರಿಂದ ಸಹಕಾರಿ ಕೃಷಿ ಉತ್ಪಾದನೆ ನಡೆಸಲು ಸಾಧ್ಯವಾಗಿದೆ. ರಾಜ್ಯ ಸರ್ಕಾರದ ಒಡೆತನದಲ್ಲಿದ್ದ ಮುಚ್ಚಿರುವ ಸಾರ್ವಜನಿಕ ಕ್ಷೇತ್ರದ ಕೈಗಾರಿಕೆಗಳನ್ನು ತೆರೆದು ಲಾಭದಾಯಕವಾಗಿ ನಡೆಸಲು ಸಾಧ್ಯವಾಗಿದೆ . ಭಾರತ ದೇಶದಲ್ಲಿ ಉತ್ತಮ ಕಾನೂನು ಸುವ್ಯವಸ್ಥೆ ಉಳ್ಳ ರಾಜ್ಯವನ್ನಾಗಿಸಲು ಹಾಗೂ ಮತೀಯ ಗಲಭೆ ಇಲ್ಲವಾಗಿಸಲು ಸಾಧ್ಯವಾಗಿದೆ. ಸಾಕ್ಷರತೆಯಲ್ಲಿ ಕೇರಳ ದೇಶದಲ್ಲಿ ಮೊದಲ ಸ್ಥಾನ.

ಸಹಕಾರಿ ರಂಗದಲ್ಲಿ ಕಳೆದ 5 ವರ್ಷದ ಅವಧಿಯಲ್ಲಿ 50 ವರ್ಷದಷ್ಟು ಸಾಧನೆ ಎಡ ಪ್ರ.ರಂಗ ಸರ್ಕಾರ ಮಾಡಿದೆ. ಹೊಸ ಸಹಕಾರಿ ಕಾನೂನು ತರಲಾಯಿತು. ಸಣ್ಣ ಪುಟ್ಟ ರೈತರು, ಕೃಷಿ ಕೂಲಿಗಾರರನ್ನು ಸಂಘಟಿಸಿ ಅವರಿಗೆ ಸ್ವಆಶ್ರಯ ಯೋಜನೆ ಜಾರಿಗೆ ತರಲಾಯಿತು. ರೈತರಿಗೆ ಸಾಲ ಒದಗಿಸಲು ಹೊಸದಾಗಿ 3 ಸಹಕಾರಿ ಬ್ಯಾಂಕುಗಳನ್ನು ಆರಂಭ ಮಾಡಲಾಗಿದೆ. ಕಾಫಿ ಬೆಳೆಗಾರರಿಗೆ ಕಾಫಿ ಮಾರ್ಕೆಟಿಂಗ್ ಮತ್ತು ಪ್ರೊಸೆಸಿಂಗ್ ಕೋ ಆಪರೇಟಿವ್ ಸೊಸೈಟಿ ರಚಿಸಲಾಯಿತು. ಇದೇ ರೀತಿ ರಬ್ಬರ್ ಬೆಳೆಗಾರರಿಗೆ ಸಹಕಾರ ಸಂಘ ರಚಿಸಿ ಮಾರುಕಟ್ಟೆ ಬೆಲೆಗಿಂತ ರೂ: 2.00 ಹೆಚ್ಚು ಕೊಟ್ಟು ಬೆಳೆಗಾರರಿಂದ ರಬ್ಬರ್ ಖರೀದಿಸಲಾಯಿತು. ರಾಜ್ಯದಲ್ಲಿ ಒಟ್ಟಾರೆಯಾಗಿ 104 ಸಹಕಾರಿ ಮೆಡಿಕಲ್ ಸ್ಟೋರ್‌ಗಳನ್ನು ಆರಂಭಿಸಲಾಗಿದೆ. ಹಾಗೂ ಕಡಿಮೆ ಬೆಲೆಗೆ ಔಷಧಿಗಳು ಜನರಿಗೆ ಲಭ್ಯವಾಗುವಂತೆ ಮಾಡಲಾಗಿದೆ. ಪರಿಶಿಷ್ಟ ವರ್ಗ ಮತ್ತು ಪರಿಶಿಷ್ಟ ಜಾತಿ ಸಹಕಾರಿ ಅಭಿವೃದ್ಧಿ ನಿಗಮ ಮುಂದಾಳತ್ವದಲ್ಲಿ ರೂ. 110.42 ಲಕ್ಷ ಬಂಡವಾಳ ತೊಡಗಿಸಿ ಆಯುರ್ವೇದ ಔಷಧಿ ಉತ್ಪಾದನೆ ಆರಂಭಿಸಲಾಗಿದೆ. 13 ಜಿಲ್ಲೆಗಳಲ್ಲಿ ಆಸ್ಪತ್ರೆ, ಚಿಕಿತ್ಸಾಲಯಗಳನ್ನು ಸಹಕಾರಿ ಬ್ಯಾಂಕುಗಳ ಮೂಲಕ



ಆರಂಭಿಸಲಾಗಿದೆ. ವೃತ್ತಿಪರ ಶಿಕ್ಷಣ ರಂಗದಲ್ಲಿ ಸಹಕಾರಿ ಅಕಾಡೆಮಿ ಆರಂಭಿಸಿ 10 ಇಂಜಿನಿಯರಿಂಗ್ ಕಾಲೇಜು, ಒಂದು ಮೆಡಿಕಲ್ ಕಾಲೇಜು, ಸಹಕಾರಿ ಆಸ್ಪತ್ರೆಗಳ ಒಂದು ಸರಮಾಲೆಯನ್ನು ಆರಂಭಿಸಲು ಸಾಧ್ಯವಾಯಿತು. ರೈತರ ಅಭಿವೃದ್ಧಿ ಬ್ಯಾಂಕುಗಳನ್ನು 19 ತಾಲ್ಲೂಕುಗಳಲ್ಲಿ ಹೊಸದಾಗಿ ಆರಂಭಿಸಲಾಗಿದೆ. ಶೇಂದಿ ಮಾರಾಟ ಸಹಕಾರಿ ಸಂಘಗಳಿಗೆ ನೀಡಲಾಗಿದೆ. ಮದ್ಯ ಮಾರಾಟ ಸರಕಾರವೇ ವಹಿಸಿಕೊಂಡಿದೆ.



ಬೆಸೆದುಕೊಂಡಿರುವ ಕಾಂಗ್ರೆಸ್ ಮತ್ತು ಕೋಮುವಾದಿಗಳು

ಪುಟ 7 ರಿಂದ

ಯಾವುದೇ ರೀತಿಯಲ್ಲಾದರೂ ವಿಧಾನಸಭೆಗೆ ಒಬ್ಬ ಅಭ್ಯರ್ಥಿಯನ್ನು ಗೆಲ್ಲಿಸಲು ಪ್ರಯತ್ನ ಪಡುತ್ತಿದ್ದಾರೆ.

ಚುನಾವಣೆ ಕೆಲವು ತಿಂಗಳು ಮುಂಚಿತವಾಗಿ ಕೇರಳದ ಕಾನೂನು ಸುವ್ಯವಸ್ಥೆಯನ್ನು ಅಲ್ಲೋಲ ಕಲ್ಲೋಲ ಮಾಡಲು ಆರ್‌ಎಸ್‌ಎಸ್,ಬಿಜೆಪಿ, ಕಾಂಗ್ರೆಸ್ ಮೈತ್ರಿಕೂಟಗಳು ಗಂಭೀರ ಪ್ರಯತ್ನ ಮಾಡುತ್ತಿದ್ದಾರೆ. ಆಗ ಆರ್.ಎಸ್.ಎಸ್. ನವರು ಬಹಿರಂಗವಾಗಿ ಹೀಗೆ ಹೇಳಿದರು "ಇನ್ನು ಮುಂದೆ ನಾವು ಬಲ್ಬ್‌ಗಳನ್ನು ಒಡೆಯುವುದಿಲ್ಲ. ಬದಲಾಗಿ ಟ್ರಾನ್ಸ್‌ಫಾರ್ಮರ್‌ಗಳನ್ನು ನಾಶ ಪಡಿಸುತ್ತೇವೆ" ಇದರ ಅರ್ಥವೇನೆಂದರೆ ಸಿಪಿಐ(ಎಂ) ಕಾರ್ಯಕರ್ತರನ್ನು ಸಿಪಿಐ(ಎಂ) ಮುಖ್ಯ ನಾಯಕರನ್ನು ಕೊಲ್ಲುತ್ತೇವೆ ಎಂಬುದಾಗಿದೆ. ನಂತರ ಕೇರಳದ ಪ್ರಮುಖ ಹಬ್ಬ ಓಣಂ ದಿನದಂದು ಕಣ್ಣೂರು ದೇಶಾಭಿಮಾನಿ ಪತ್ರಿಕೆ ಮ್ಯಾನೇಜರ್ ಹಾಗೂ ಸಿಪಿಐ(ಎಂ) ರಾಜ್ಯ ಸಮಿತಿ ಸದಸ್ಯ ಪಿ.ಜಯರಾಜ್ ಮೇಲೆ ಭೀಕರ ಹಲ್ಲೆ ನಡೆಸಿದರು. ಅವರು ಸತ್ತಿದ್ದಾರೆಂದು ತಿಳಿದು ಕೈಕಾಲು ತುಂಡು ತುಂಡು ಮಾಡಿದರು. ನಂತರ ಕಣ್ಣೂರು ಜಿಲ್ಲಾ ಕಾರ್ಯದರ್ಶಿ ಇ.ಪಿ.ಜಯರಾಜನ್ ಮೇಲೆ ಯೋಜಿತ ರೀತಿಯಲ್ಲಿ ಹಲ್ಲೆ ನಡೆಸಲಾಯಿತು. ಅವರನ್ನು ಕೊಲ್ಲುವುದೇ ಆದೇಶವಾಗಿತ್ತು. ಇದಕ್ಕಾಗಿ ವಿವರವಾದ ಯೋಜನೆಯನ್ನು ರೂಪಿಸಿ ಆಯ್ಕೆ ಮಾಡಿದ ಆರ್.ಎಸ್.ಎಸ್. - ಕ್ರಿಮಿನಲ್‌ಗಳನ್ನು ಕೇರಳದಿಂದ ಹಾಗೂ ಹೊರ ರಾಜ್ಯಗಳಿಂದ ತಂದಿದ್ದರು. ಇದಕ್ಕೆ ರಾಷ್ಟ್ರದ ಆರ್.ಎಸ್.ಎಸ್. ನಾಯಕರ ಆಶೀರ್ವಾದವಿದೆ. ನಂತರದಲ್ಲಿ ತೊಕ್ಕಲಿಂಗಡಿಯಲ್ಲಿ ಆರ್.ಎಸ್.ಎಸ್. ಗೂಂಡಾಪಡೆ ಸಿಪಿಐ(ಎಂ) ನಾಯಕರು ಕಾರ್ಯಕರ್ತರ ಮೇಲೆ ಬಾಂಬ್, ಮಾರಕಾಸ್ತ್ರಗಳಿಂದ ಧಾಳಿ ನಡೆಸಿತ್ತು. ಹತ್ತಾರು ಸಿಪಿಐ(ಎಂ) ಕಾರ್ಯಕರ್ತರನ್ನು ಕಣ್ಣೂರು ಕಾಸರಗೋಡು ಜಿಲ್ಲೆಗಳಲ್ಲಿ ಆರ್.ಎಸ್.ಎಸ್. ಗೂಂಡಾಗಳು ಕೊಲೆಗೈದರು. ಈ ಕೊಲೆಗಡುಕ ಆರ್.ಎಸ್.ಎಸ್. ಗೂಂಡಾಗಳಿಗೆ ಕರ್ನಾಟಕದ ಆರ್.ಎಸ್.ಎಸ್. ಗೂಂಡಾಗಳ ಸಂಬಂಧವಿದೆ. ಮಂಗಳೂರು ಲೋಕಸಭಾ ಸದಸ್ಯ ಹಾಗೂ ಕೇಂದ್ರ ಮಂತ್ರಿ ಧನಂಜಯ ಕುಮಾರ್ ಬೆಂಬಲ ಈ ಗೂಂಡಾಗಳಿಗಿದೆ. ಸಿಪಿಐ(ಎಂ) ಕಾರ್ಯಕರ್ತರನ್ನು ಕೊಲೆ ಮಾಡಿ ಪರಾರಿಯಾಗುವ ಆರ್.ಎಸ್.ಎಸ್. ಬಿಜೆಪಿ ಗೂಂಡಾಗಳು ಕರ್ನಾಟಕದಲ್ಲಿ ಭೂಗತರಾಗಿ ಇರಲು ವ್ಯವಸ್ಥೆಗಳನ್ನು ಧನಂಜಯ ಕುಮಾರ್ ಏರ್ಪಡಿಸಿಕೊಡುತ್ತಿದ್ದಾರೆ. ○

.... ಅಸೆಂಬ್ಲಿ ಚುನಾವಣೆಗಳ ಪಕ್ಷಿನೋಟ

ಪುಟ 6 ರಿಂದ

ಮೊಟಕುಗೊಳಿಸಲಾಯಿತು. ಜನರ ಮೇಲೆ ವಿಪರೀತ ದಬ್ಬಾಳಿಕೆ ನಡೆಸಲಾಯ್ತು.

1977 ರಲ್ಲಿ ನಡೆದ ಚುನಾವಣೆಗಳಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದಿತ್ತು. ಕರುಣಾಕರನ್ ಮುಖ್ಯಮಂತ್ರಿ ಆದರು. ಆದರೆ ತುರ್ತು ಪರಿಸ್ಥಿತಿಯಲ್ಲಿ ನಡೆದ ಅತಿರೇಕಗಳಿಂದಾಗಿ, ಹೈಕೋರ್ಟು ಹಾಕಿದ ಛೀಮಾರಿಯ ಹಿನ್ನೆಲೆಯಲ್ಲಿ ಆ ಸರಕಾರವೂ ಹೆಚ್ಚು ಕಾಲ ಬಾಳಲಿಲ್ಲ. ನಂತರ, ಇಂದಿನ ಕಾಂಗ್ರೆಸ್ ಮುಖಂಡರಾದ ಎ.ಕೆ.ಆಂಟೋನಿ ಅಂದು ಕಾಂಗ್ರೆಸ್ಸಿಗೆ ರಾಜಿನಾಮೆ ನೀಡಿದ್ದರು.


ಆದ್ದರಿಂದ ಪುನಃ 1980 ರ 6ನೇ ಅಸೆಂಬ್ಲಿ ಚುನಾವಣೆ ನಡೆಯಿತು. ಕಾಂಗ್ರೆಸ್ ತೊರೆದಿದ್ದ ಎ.ಕೆ.ಆಂಟೋನಿ ಮತ್ತು ಅವರ ಗುಂಪು ಎಡ ಪಕ್ಷಗಳೊಂದಿಗೆ ಹೊಂದಾಣಿಕೆ ಮಾಡಿಕೊಂಡಿತ್ತು. ಸಿಪಿಐ(ಎಂ) ನೇತೃತ್ವದಲ್ಲಿ ಇ.ಕೆ.ನಾಯನಾರ್ ಮುಖ್ಯಮಂತ್ರಿಯಾದರು. ಆದರೆ ಕಾಂಗ್ರೆಸ್ಸಿನ ಎಲ್ಲಾ ಗುಣಗಳನ್ನು ಹೊಂದಿದ್ದ ಎ.ಕೆ.ಆಂಟೋನಿ ಬೆನ್ನಿಗೆ ಚೂರಿ ಹಾಕಿದರು. ಪುನಃ ಕಾಂಗ್ರೆಸ್ಸಿನ ಬಾಲ ಹಿಡಿದರು.

1982 ರಲ್ಲಿ ಪುನಃ ನಡೆದ ಚುನಾವಣೆಗಳಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ, 1987 ರಲ್ಲಿ ಎಡ ಪ್ರಜಾಪ್ರಭುತ್ವ ರಂಗ(ಎಲ್‌ಡಿಎಫ್) ಅಧಿಕಾರಕ್ಕೆ ಬಂದಿತು. ಈ ಚುನಾವಣೆಯ ವಿಶೇಷವೆಂದರೆ ಕೇರಳದ ರಾಜಕೀಯದಲ್ಲಿ ತನ್ನ ಬೆಂಬಲವಿಲ್ಲದೆ ಅಧಿಕಾರಕ್ಕೆ ಬರಲು ಸಾಧ್ಯವಿಲ್ಲ ಎಂದು ಕೊಚ್ಚಿಕೊಳ್ಳುತ್ತಿದ್ದ ಮುಸ್ಲಿಂ ಲೀಗ್‌ನ್ನು ದೂರ ಮಾಡಿದುದು ಮಾತ್ರವಲ್ಲ ಮುಸ್ಲಿಂ ಲೀಗ್‌ನೊಂದಿಗೆ ಹೊಂದಾಣಿಕೆ ಮಾಡಿಕೊಳ್ಳಬೇಕೆಂದು ಪ್ರತಿಪಾದಿಸುತ್ತಿದ್ದ ಸಿಪಿಐ(ಎಂ) ನ ಪ್ರಮುಖ ಮುಖಂಡರನ್ನು ಹೊರಹಾಕಿದ್ದು. ಆದರೂ ಕೂಡಾ ಸಿಪಿಐ(ಎಂ) ನೇತೃತ್ವದ ಎಲ್‌ಡಿಎಫ್ ಅಧಿಕಾರಕ್ಕೆ ಬಂತು.

ನಂತರ 1991 ರಲ್ಲಿ ರಾಜೀವ್ ಕೊಲೆಯ ಹಿನ್ನೆಲೆಯಲ್ಲಿ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಅಧಿಕಾರಕ್ಕೆಬಂದರೆ, 1996 ರಲ್ಲಿ ಅಧಿಕಾರಕ್ಕೆ ಬಂದ ಎಲ್‌ಡಿಎಫ್ ಸರ್ಕಾರ ತನ್ನ ಪೂರ್ಣ ಅವಧಿಯನ್ನು ಮುಗಿಸುತ್ತಿದೆ. ಹಲವಾರು ಜನಪರ ಯೋಜನೆಗಳ ಮೂಲಕ ಜನಪ್ರಿಯಗೊಂಡಿರುವ ಸಿಪಿಐ(ಎಂ) ನೇತೃತ್ವದ ಸರಕಾರ ಪುನಃ ಅಧಿಕಾರಕ್ಕೆ ಬರುವ ಪೂರ್ಣ ವಿಶ್ವಾಸ ಹೊಂದಿದೆ.

140 ಸೀಟುಗಳ ಪೈಕಿ ಸಿಪಿಐ(ಎಂ) 77 ಸ್ಥಾನಗಳಿಗೆ ಸ್ಪರ್ಧಿಸುತ್ತಿದ್ದರೆ, ಸಿಪಿಐ 24, ಜನತಾದಳ (ಎಸ್) 12, ಎನ್‌ಸಿಪಿ 11, ಕೇರಳ ಕಾಂಗ್ರೆಸ್ (ಜೆ)10 ಮತ್ತು ಆರ್.ಎಸ್.ಪಿ. 6 ಸ್ಥಾನಗಳಿಗೆ ಸ್ಪರ್ಧಿಸುತ್ತಿದೆ. ಆದರೆ ಎದುರಾಳಿ ಕಾಂಗ್ರೆಸ್‌ನಲ್ಲಿ ಇನ್ನೂ ಗುಂಪುಗಾರಿಕೆ ನಡೆದೇ ಇದೆ. ಜತೆಯಲ್ಲಿ ತೆರೆಯಮರೆಯಲ್ಲಿ ಬಿಜೆಪಿಯೊಂದಿಗೆ ಮಾಡಿಕೊಂಡಿರುವ ಅಪವಿತ್ರ ಮೈತ್ರಿಗೆ ಪ್ರಜ್ಞಾವಂತ ಕೇರಳದ ಮತದಾರರು ತಕ್ಕ ಉತ್ತರ ನೀಡಲಿದ್ದಾರೆ.

- ಬಾಲಕೃಷ್ಣ ಶೆಟ್ಟಿ



[illegible] ಮುಕ್ತ [illegible] ನೀತಿ ವಿರೋಧಿಸಿ ಬಂದರಿಗೆ ಮುತ್ತಿಗೆ [illegible]

ಚೀನಾ ಗಡಿಯೊಳಗೆ ನುಗ್ಗಿ ಅಮೆರಿಕದ ಪ್ರಚೋದನೆ

ಏಪ್ರಿಲ್ 1 ರಂದು ಅಮೆರಿಕ ಗೂಢಾಚಾರ ವಿಮಾನವೊಂದು ಚೀನಿ ವಿಮಾನಕ್ಕೆ ಢಿಕ್ಕಿ ಹೊಡೆದು ಉರುಳಿಸಿ, ಚೀನಾದ ಹೈನಾನ್ ದ್ವೀಪದಲ್ಲಿ ಹೋಗಿ ಇಳಿಯಿತು. ಅಂದಿನಿಂದ ಹತ್ತು ದಿನಗಳವರೆಗೆ ಅಮೆರಿಕ ಈ ಘಟನೆ ಬಗ್ಗೆ ಕ್ಷಮೆ ಹೇಳಿ, ಇಂತಹ ಘಟನೆಗಳು ಪುನರಾವರ್ತನೆಯಾಗದ ಹಾಗೆ ಕ್ರಮ ವಹಿಸುವ ಬಗ್ಗೆ ಭರವಸೆ ಕೊಡದೆ ಗೂಢಾಚಾರ ವಿಮಾನ ಹಾಗೂ ಅದರ 24 ಸಿಬ್ಬಂದಿಗಳನ್ನು ವಾಪಸು ಮಾಡುವುದಿಲ್ಲ ಎಂದು ಚೀನಾ ಹೇಳಿತು. ಜಗತ್ತಿನ ಏಕಮಾತ್ರ 'ಸೂಪರ್‌ಪವರ್' ಗೆ ಇದು ನುಂಗಲಾರದ ತುತ್ತಾಗಿತ್ತು. ಕೊನೆಗೂ ಅಮೆರಿಕಾ 'ವೆರಿಸಾರಿ' ಎಂಬ ಪತ್ರ ಕೊಟ್ಟ ಮೇಲೆ 24 ಸಿಬ್ಬಂದಿಗಳನ್ನು ವಾಪಸು ಮಾಡಲಾಗಿದೆ. ಆದರೆ ಇಂತಹ ಅಂತರ್‍ರಾಷ್ಟ್ರೀಯ ಕಾನೂನೂ ಮತ್ತು ಶಾಂತಿ ಉಲ್ಲಂಘಿಸುವ ಗೂಢಾಚಾರಿಕೆ ನಿಲ್ಲಿಸುವ ಬಗ್ಗೆ ಒಪ್ಪಂದಕ್ಕೆ ಬರುವವರೆಗೆ ವಿಮಾನ ವಾಪಸು ಮಾಡುವುದಿಲ್ಲ ಎಂದು ದೃಢವಾಗಿ ಹೇಳಿದೆ.

ತೈವಾನ್‌ಗೆ ಅತ್ಯಂತ ಆಧುನಿಕ ಶಸ್ತ್ರಾಸ್ತ್ರ ಮತ್ತು ಗೂಢಚಾರಿಕೆ ಉಪಕರಣಗಳನ್ನು ಮಾರಿ ಚೀನಾದ ಮೇಲೆ ಆಕ್ರಮಕ ಧೋರಣೆ ಹೆಚ್ಚಿಸುವುದು ಅಮೆರಿಕದ ಹೊಸ ಸರ್ಕಾರದ ನೀತಿ. ಅಲ್ಲದೆ ಚೀನಾಕ್ಕೆ ಪ್ರಚೋದಿಸುವ ಮೂಲಕ ಆ ದೇಶ ತನಗೆ ಭಾರಿ 'ಅಪಾಯಕಾರಿ' ಎಂದು 'ತಾರಾಸಮರ'ದ ಹೊಸ ಅವಕಾಶ ಆರಂಭಿಸುವ ಹುನ್ನಾರ ಈ ಘಟನೆ ಹಿಂದಿದೆ. ಆದರೆ ಚೀನಾದ ದೃಢ ನಿಲುವು ಅಮೆರಿಕಕ್ಕೆ ಭಾರಿ ರಾಜತಾಂತ್ರಿಕ, ನೈತಿಕ, ಮಿಲಿಟರಿ ಸೋಲು.

ಚೀನಾದ ಮೇಲೆ ಅಮೆರಿಕದ ಆಕ್ರಮಕ ಧೋರಣೆ ಹೊಸತಲ್ಲ. ಆದರೆ ಇತ್ತೀಚೆಗೆ ಚೀನಾದ ಪೂರ್ವ ಮತ್ತು ದಕ್ಷಿಣ ಸಾಗರ ಗಡಿಗಳಲ್ಲಿ ಅಮೆರಿಕ ತನ್ನ ಗೂಢಾಚಾರ ಚಟುವಟಿಕೆಗಳನ್ನು ತೀವ್ರವಾಗಿ ಹೆಚ್ಚಿಸಿದೆ. ಈ ಘಟನೆ ಒಂದಲ್ಲ ಒಂದು ದಿನ ಆಕಸ್ಮಾತಾಗಿ ಆಗುವ ಪರಿಸ್ಥಿತಿ ಇತ್ತು. ಅಥವಾ ಇದು ಯೋಜಿತವೇ ಆಗಿರಬಹುದು. ಏಕೆಂದರೆ ಕಳೆದ ಒಂದು ವರ್ಷದಲ್ಲಿ ಚೀನಾದ ದಕ್ಷಿಣ-ಪೂರ್ವ ಸಾಗರ ಗಡಿಯೊಳಗೆ ಅಥವಾ ಗಡಿಯ ಭಾರಿ ಸಮೀಪದಲ್ಲಿ 900 ಇಂತಹ ಗೂಢಾಚಾರ ವಿಮಾನ ಹಾರಾಟಗಳು ನಡೆದಿವೆಯಂತೆ. ಅಂದರೆ ಸುಮಾರು ದಿನಕ್ಕೆ ಮೂರು. ಈ ಗೂಢಾಚಾರ ವಿಮಾನ ಹಾರಾಟಗಳ ಉದ್ದೇಶ ಚೀನಾದ ರಕ್ಷಣಾ ಸಾಮರ್ಥ್ಯ ಮತ್ತು ತಯಾರಿ ಬಗ್ಗೆ ತಿಳಿದುಕೊಳ್ಳುವುದು. ಮಿಲಿಟರಿ ಕಮಾಂಡರ್‌ಗಳ ನಡುವಣ ಸಂಭಾಷಣೆಯನ್ನು ಸತತವಾಗಿ ಕದ್ದಾಲಿಸುವುದು. ಇದಲ್ಲದೆ ಚೀನಾಕ್ಕೆ ಸತತ ಮಿಲಿಟರಿ ಪ್ರಚೋದನೆ ಕೊಡುವುದು. ಈ ಬಗ್ಗೆ ಚೀನಾ ಹಲವು ಬಾರಿ ಪ್ರತಿಭಟಿಸಿದ್ದರೂ ಇದು ಅವ್ಯಾಹತವಾಗಿ ಮುಂದುವರೆದಿತ್ತು.

ಕ್ಷಮೆ ಬದಲು ಬೆದರಿಕೆ

ಆಗಿದ್ದು ಇಷ್ಟೇ, ಅಮೆರಿಕದ ಗೂಢಾಚಾರ ವಿಮಾನವೊಂದು ಚೀನಾದ ದಕ್ಷಿಣ-ಪೂರ್ವ ಸಾಗರದಲ್ಲಿರುವ ಹೈನಾನ್ ದ್ವೀಪದ ಬಳಿ ಚೀನಾದ ವಾಯು ಪ್ರದೇಶದೊಳಗೆ ಯಾವುದೇ ಮಾಹಿತಿ ಇಲ್ಲದೆ ನುಗ್ಗಿತು. ಈ 'ನುಗ್ಗುವಿಕೆ'ಗೆ ಸವಾಲು ಹಾಕಲು ಚೀನಾದ ಮಿಲಿಟರಿ ಫೈಟರ್ ವಿಮಾನವೊಂದು ಅಮೆರಿಕದ ಗೂಢಾಚಾರ ವಿಮಾನವನ್ನು ಹಿಂಬಾಲಿಸಿತು. ಚೀನಾದ ವಾಯುಪ್ರದೇಶದಿಂದ ಹೊರಗೆ ಹೋಗುವ ಬದಲು ಅದು ಚೀನಾದ ವಿಮಾನಕ್ಕೆ ಢಿಕ್ಕಿ ಹೊಡೆದು, ಯಾವುದೇ ಅನುಮತಿ ಇಲ್ಲದೆ ಹೈನಾನ್ ದ್ವೀಪದ ಮಿಲಿಟರಿ ವಾಯುನೆಲೆಯಲ್ಲಿ ಇಳಿಯಿತು. ಈ ನಡುವೆ ಚೀನಿ

ಉದ್ಧಟತನಕ್ಕೆ 'ವೆರಿ ಸಾರಿ' ಹೇಳುವಂತೆ ಮಾಡಿದ ಚೀನಾ

ತೈವಾನ್‌ಗೆ ಅತ್ಯಂತ ಆಧುನಿಕ ಶಸ್ತ್ರಾಸ್ತ್ರ ಮತ್ತು ಗೂಢಚಾರಿಕೆ ಉಪಕರಣಗಳನ್ನು ಮಾರಿ ಚೀನಾದ ಮೇಲೆ ಆಕ್ರಮಕ ಧೋರಣೆ ಹೆಚ್ಚಿಸುವುದು ಅಮೆರಿಕದ ಹೊಸ ಸರ್ಕಾರದ ನೀತಿ. ಅಲ್ಲದೆ ಚೀನಾಕ್ಕೆ ಪ್ರಚೋದಿಸುವ ಮೂಲಕ ಆ ದೇಶ ತನಗೆ ಭಾರಿ 'ಅಪಾಯಕಾರಿ' ಎಂದು 'ತಾರಾಸಮರ'ದ ಹೊಸ ಅವಕಾಶ ಆರಂಭಿಸುವ ಹುನ್ನಾರ ಈ ಘಟನೆ ಹಿಂದಿದೆ. ಆದರೆ ಚೀನಾದ ದೃಢ ನಿಲುವು ಅಮೆರಿಕಕ್ಕೆ ಭಾರಿ ರಾಜತಾಂತ್ರಿಕ, ನೈತಿಕ, ಮಿಲಿಟರಿ ಸೋಲು.

ಫೈಟರ್ ವಿಮಾನದ ಪೈಲಟ್ ಪ್ಯಾರಾಜೂಟ್‌ನಿಂದ ಹಾರಲು ಪ್ರಯತ್ನಿಸಿ ಸಾಗರಕ್ಕೆ ಬಿದ್ದ. ಈವರೆಗೆ ಸಿಕ್ಕಲ್ಲವಾದ್ದರಿಂದ ಆತ ಸತ್ತಿರಬಹುದೆಂದು ಭಾವಿಸಲಾಗಿದೆ. ಇದು 'ಆಕ್ರಮಣವೇ'. ಚೀನಾ ವಿಮಾನವನ್ನು ಸುತ್ತುವರೆದು, ಅದರಲ್ಲಿದ್ದ 24 ಮಿಲಿಟರಿ ಸಿಬ್ಬಂದಿಯನ್ನು ಬಂಧಿಸಿದರು. ವಿಮಾನ ಅತ್ಯಂತ ಆಧುನಿಕ ಗೂಢಚಾರಿಕೆ ಉಪಕರಣಗಳನ್ನು ಹೊಂದಿತ್ತು.

ಮುಂದಿನ ಹತ್ತು ದಿನಗಳಲ್ಲಿ ಚೀನಾ ಒತ್ತಾಯಿಸಿದಂತೆ 'ಕ್ಷಮೆ' ಕೇಳುವ ಬದಲು, ಅಮೆರಿಕ ಬೆದರಿಕೆ ಹಾಕಲು ಆರಂಭಿಸಿತು. ಆದರೆ ಚೀನಾ ಅದಕ್ಕೆ ಸೊಪ್ಪು ಹಾಕದೆ 'ಕ್ಷಮೆ' ಕೇಳುವಂತೆ ಪಟ್ಟು ಹಿಡಿಯಿತು. ಅಮೆರಿಕ ಮತ್ತು ಚೀನಾದ ಜನರಲ್ಲಿ ಆಕ್ರೋಶ ಆರಂಭವಾಗಿತ್ತು. ಬೇರೆ ಬೇರೆ ಕಾರಣಕ್ಕೆ. ಚೀನಾದಲ್ಲಿ ಅಮೆರಿಕ ಮಿಲಿಟರಿ ಉದ್ಧಟತನ ಮತ್ತು ಅದರಿಂದ ಒಬ್ಬ ಚೀನಿ ದೇಶಭಕ್ತ ಪೈಲಟನ ಸಾವಿನ ಬಗ್ಗೆ ಆಕ್ರೋಶವಿತ್ತು. ಅಮೆರಿಕ 'ಕ್ಷಮೆ' ಕೇಳದೆ ವಿಮಾನ ಮತ್ತು ಸಿಬ್ಬಂದಿ ವಾಪಸು ಮಾಡದಿರುವ ಚೀನಾದ ಸರ್ಕಾರದ ನಿಲುವಿಗೆ ಭಾರಿ ಬೆಂಬಲ ವ್ಯಕ್ತವಾಯಿತು. ಅಮೆರಿಕದಲ್ಲೂ 24 ಮಿಲಿಟರಿ ಸಿಬ್ಬಂದಿಯನ್ನು ವಾಪಸು ಪಡೆಯಲು 'ಕ್ಷಮೆ' ಕೋರಬೇಕು ಎಂದು ಸರ್ಕಾರಕ್ಕೆ ಒತ್ತಾಯ ಆರಂಭವಾಗಿತ್ತು. ಹಲವು ಸಾರ್ವಜನಿಕ ವ್ಯಕ್ತಿಗಳು, ರಾಜಿಯ ನಾಯಕರು ಚೀನಿಯೊಬ್ಬನ ಸಾವಿಗೆ ಕಾರಣವಾದ ಮಿಲಿಟರಿ ಕಾರ್ಯಾಚರಣೆ ಬಗ್ಗೆ 'ಕ್ಷಮೆ' ಕೇಳಬೇಕು ಹೇಳಿದರು. ಚೀನಿ ಪೈಲೆಟ್‌ಗೆ ಸಾಗರದಲ್ಲಿ ಹುಡುಕಾಟ, ಆತ ಸಿಗದೆ ಸತ್ತಿರುವುದು ಹೆಚ್ಚು ಕಡಿಮೆ ಖಚಿತವಾದಂತೆ ಅಮೆರಿಕನ್ ಸರ್ಕಾರದ ಮೇಲಿನ ಒತ್ತಡ ಜಾಸ್ತಿಯಾಯಿತು.

ಅಮೆರಿಕದ ಕಸಿವಿಸಿ. 24 ಮಿಲಿಟರಿ ಸಿಬ್ಬಂದಿಯನ್ನು ದಿನಕ್ಕೆ ಎರಡು ಬಾರಿ 'ನೋಡಿ ಕ್ಷೇಮ ವಿಚಾರಿಸಲು' ಅವಕಾಶ ಕೊಡಬೇಕು ಎಂದು ಅಮೆರಿಕ ಒತ್ತಾಯಿಸುತ್ತಿದ್ದರು. ಅವರನ್ನು ಕಾಡುತ್ತಿದ್ದುದು 'ಗೂಢಾಚಾರ ವಿಮಾನ' ದ ಯೋಗಕ್ಷೇಮ. ಮಿಲಿಟರಿ ಕ್ರಮದಂತೆ ಚೀನಾದಲ್ಲಿ ಇಳಿಯಬೇಕಾದ

ಸಿಕ್ಕಿಬಿದ್ದ ಬೇಹುಗಾರರು



ತುರ್ತು ಪರಿಸ್ಥಿತಿ ಬಂದಾಗ, ಗೂಢಾಚಾರಿ ಉಪಕರಣಗಳಲ್ಲಿ ಹಲವನ್ನು ನಿಷ್ಕ್ರಿಯಗೊಳಿಸಲಾಗಿತ್ತು. ಆದರೂ ಚೀನಿಯರಿಗೆ ಗೂಢಾಚಾರ ವಿಮಾನದ ಉಪಕರಣಗಳ ಬಗ್ಗೆ ಸಾಕಷ್ಟು ಮಾಹಿತಿ ಮತ್ತು ಚೀನಾದ ವಿರುದ್ಧ 'ವೆರಿ ಸಾರಿ' ಹೇಳಬೇಕಾಯಿತು.

24 ಮಿಲಿಟರಿ ಸಿಬ್ಬಂದಿಯ ಬಗ್ಗೆ ಭಾರಿ 'ಕಾಳಜಿ'ಯನ್ನು ಅಮೆರಿಕ ಪ್ರದರ್ಶಿಸಿದರೂ, ಅದಕ್ಕೆ ಭಯವಿದ್ದದ್ದು ಗೂಢಾಚಾರ ವಿಮಾನದ ಬಗ್ಗೆ. ಈ ಬಿಕ್ಕಟ್ಟು ಮುಂದುವರೆದಷ್ಟು ಚೀನಾದ ಪರಿಣತರಿಗೆ ಗೂಢಾಚಾರ ವಿಮಾನದ ಬಗ್ಗೆ ಹೆಚ್ಚು ಮಾಹಿತಿ ಸಂಗ್ರಹಿಸಲು ಅವಕಾಶ ಕೊಟ್ಟಂತೆ ಆಗುತ್ತದೆ ಎಂದು ಪ್ರಚೋದನೆಗೆ ಇದನ್ನು ಬಳಸಲಾಗುತ್ತಿತ್ತು ಎಂಬ ಬಗ್ಗೆ ನೇರ ಪುರಾವೆ ಸಿಕ್ಕಂತಾಗಿದೆ.

ತೀವ್ರ ರಾಜತಾಂತ್ರಿಕ ಚಟುವಟಿಕೆ ನಂತರ, ಅಮೆರಿಕದ ರಾಯಭಾರಿ 'ವೆರಿಸಾರಿ' ಎಂದು ಹೇಳುವ ಪತ್ರವನ್ನು ಚೀನಾ ಸರ್ಕಾರಕ್ಕೆ ಕೊಟ್ಟರು. ಈ ಪತ್ರದ ಪ್ರಕಾರ ಚೀನಿಯೊಬ್ಬನ ಸಾವಿಗೆ ಕಾರಣವಾದ ಈ ಘಟನೆ ಬಗ್ಗೆ 'ವೆರಿ ಸಾರಿ' ಹೇಳಿದ್ದು ಮಾತ್ರವಲ್ಲದೆ, ಈ ಘಟನೆ ಮೂಲ ಕಾರಣದ ಬಗ್ಗೆ ಚರ್ಚೆ - ತನಿಖೆಗೆ ಒಪ್ಪಿಕೊಂಡಿದೆ. ಅಲ್ಲದೆ ಚೀನಾದ ಗಡಿಯಲ್ಲಿ ಅಮೆರಿಕನ್ ಗೂಢಾಚಾರ ಚಟುವಟಿಕೆ ಬಗ್ಗೆ ಸಮಗ್ರ ಚರ್ಚೆಗೂ ಒಪ್ಪಬೇಕಾಗಿ ಬಂದಿದೆ. 'ಕ್ಷಮೆ' ಕೇಳದಿದ್ದರೂ ಅಮೆರಿಕ ಸಾಕಷ್ಟು ಮಣಿದದ್ದರಿಂದ ಚೀನಾ ಸರ್ಕಾರ 24 ಮಿಲಿಟರಿ ಸಿಬ್ಬಂದಿಯನ್ನು ಬಿಡುಗಡೆ ಮಾಡಿ ವಾಪಸು ಮಾಡಲು ನಿರ್ಧರಿಸಿತು. ಏಪ್ರಿಲ್ 18 ರಂದು ಮೊದಲ ಮಾತುಕತೆಗೆ ತಾರೀಖು ನಿರ್ಧರಿಸಲಾಗಿದೆ. ತನ್ನ ಉಳಿದ ಒತ್ತಾಯಗಳ ಬಗ್ಗೆ ಒಪ್ಪಂದಕ್ಕೆ ಬರದೆ ವಿಮಾನವನ್ನು ಹಿಂದಿರುಗಿಸುವುದಿಲ್ಲ ಎಂದು ಚೀನಾ ದೃಢವಾಗಿ ಹೇಳಿದೆ.

ಚೀನಾದ ವಿರುದ್ಧ 'ಶೀತಸಮರ'ಕ್ಕೆ ತಯಾರಿ

ಚೀನಾ ಈ ಬಿಕ್ಕಟ್ಟನ್ನು ಎಚ್ಚರಿಕೆಯಿಂದ ನಿರ್ವಹಿಸಿದ್ದು, ಅದು ನಿರ್ವಹಿಸಿದ ರೀತಿ, ಚೀನಾ ವಿರುದ್ಧ 'ಶೀತಸಮರ'ದ ತಯಾರಿ ನಡೆಸಿದ್ದ ಅಮೆರಿಕದ ಹುನ್ನಾರಕ್ಕೆ ಏಟುಕೊಟ್ಟಿದೆ. ಅಮೆರಿಕದ ಮಿಲಿಟರಿ-ಕೈಗಾರಿಕಾ ಸಂಕೀರ್ಣದ 'ಶೀತಸಮರ' ಕೊನೆಯಾದ್ದರಿಂದ ಮೆಗಾ ಬಜೆಟ್ ಹೊಸ ಮಿಲಿಟರಿ ಕಾರ್ಯಕ್ರಮಗಳಿಗೆ ಹಣ ಒದಗಿಸಲು ಕಷ್ಟಪಡುತ್ತಿದೆ. ಅಲ್ಲದೆ ಚೀನಾದ ಆರ್ಥಿಕ, ಮಿಲಿಟರಿ ಬಲಾಢ್ಯತೆ ತನ್ನ 'ಏಕಮಾತ್ರ ಸೂಪರ್‌ಪವರ್' ಸ್ಥಾನಕ್ಕೆ ಒಂದಲ್ಲ ಒಂದು ದಿನ ಕುಂದು ತರುತ್ತದೆ. ಮುಖ್ಯವಾಗಿ ತಾರಾಸಮರದ ಹೊಸ ಅವಕಾಶವಾದ 'ರಾಷ್ಟ್ರೀಯ ಕ್ಷಿಪಣಿ ರಕ್ಷಣಾ ವ್ಯವಸ್ಥೆ' ಗೆ ಹಣ ಒದಗಿಸಲು 'ಚೀನಾದ ಅಪಾಯ'ವನ್ನು ತೋರಿಸುವುದು ಅಗತ್ಯವಾಗಿದೆ. ಅದಕ್ಕಾಗಿ ಚೀನಾಕ್ಕೆ ಸತತ ಪ್ರಚೋದನೆ ಅಗತ್ಯ. ಅಲ್ಲದೆ 'ತಾರಾಸಮರ'ದ ಅಂಗವಾಗಿ ಹಲವು ಗೂಢಾಚಾರ, ಉಪಕರಣಗಳನ್ನು ತೈವಾನ್‌ನಲ್ಲಿ ನೆಲೆಗೊಳಿಸುವುದು. 'ಚೀನಾದ ಬೆದರಿಕೆ' ನೆಪದಲ್ಲಿ ತೈವಾನ್‌ಗೆ ಚೀನಾದ ಮೇಲೆ 'ಶೀತ ಸಮರ' ಹರಿಯಬಿಡಬಹುದು. ಶಸ್ತ್ರಾಸ್ತ್ರಗಳನ್ನು ಕೊಡುವುದು. ಚೀನಾವನ್ನು ಸತತವಾಗಿ ಕಾಲ್ತುದಿಯ ಮೇಲೆ ನಿಲ್ಲುವಂತೆ ಮಾಡುವುದು. ಇವೆಲ್ಲ ಸೇರಿ ಅಮೆರಿಕ ಹಾಕಿಕೊಂಡಿದ್ದ ಯೋಜನೆ ಚೀನಾದ ಈ ದೃಢ ಸವಾಲಿನಿಂದ ಕುಸ್ಸೆಂದಿದೆ. ಚೀನಾದ ದೃಢ ನಿಲುವಿಗೆ ಜಗತ್ತಿನಾದ್ಯಂತ ಬೆಂಬಲ ಸಹ ವ್ಯಕ್ತವಾಗಿದೆ. ಅಮೆರಿಕನ್ ಸಾಮ್ರಾಜ್ಯಶಾಹಿ ಹುನ್ನಾರಕ್ಕೆ ಇದು ದೊಡ್ಡ ರಾಜತಾಂತ್ರಿಕ, ನೈತಿಕ, ಮಿಲಿಟರಿ ಸೋಲು.

- ಶರತ್ ಚಂದ್ರ


ಕರ್ನಾಟಕದಲ್ಲಿ ಕಳೆದ ವಾರ...

ಪುಟ 3 ರಿಂದ

ಗುಲ್ಬರ್ಗಾ, ಬೀದರ್, ಬಿಜಾಪುರ, ರಾಯಚೂರು, ಬಳ್ಳಾರಿಗಳನ್ನು ಒಳಗೊಂಡು ದ.ಕ., ಕೋಲಾರ ಮುಂತಾದ ಬಹಳಷ್ಟು ಜಿಲ್ಲೆಗಳು ನೀರಿನ ಬವಣೆಯಿಂದ ಬಳಲುತ್ತಿವೆ. ಅಂರ್ಜಲ ಮಟ್ಟವೂ ಕುಸಿಯುತ್ತಿದೆ. ಕೆರೆ ಬಾವಿಗಳು ಹೂಳುತ್ತಿವೆ. ಕುಡಿಯುವ ನೀರಿಗಾಗಿ ಇಂತಹ ಗಂಭೀರ ಸ್ಥಿತಿ ತಲೆದೋರುವುದು ಖಚಿತವಾಗಿದ್ದರೂ ಸರ್ಕಾರ ಮುಂಜಾಗೂರಕತೆಯಿಂದ ಪಾರು ಮಾಡಲು ಮುಂದಾಗಲಿಲ್ಲ ಎಂಬುದೇ ಗಂಭೀರ ಸಂಗತಿ. ಈಗ ಜಾರಿಯಿರುವ ಕುಡಿಯುವ ನೀರಿನ ಪೂರೈಕೆ ಯೋಜನೆ ಅನೇಕ ಕಡೆ ಒಬಿರಾಯನ ಕಾಲದ್ದು. ಬದಲಾದ ಜನಸಂಖ್ಯೆ, ನಗರ-ಹಳ್ಳಿಗಳ ಬೆಳವಣಿಗೆಗೆ ಹಾಗೂ ಭವಿಷ್ಯತ್ತಿನ ದೂರದೃಷ್ಟಿ ಇಟ್ಟು ಪುನರ್ ರೂಪಿತವಾಗಲಿಲ್ಲ. ಕೈಗಾರಿಕೆಗಳಿಗೆ ಬಳಸಲಾದ ನೀರಿಗೆ ಪರ್ಯಾಯ ರೂಪಿಸಲಿಲ್ಲ.ಈಗೇನೋ ಕಂದಾಯ ಸಚಿವರು ಜಿಲ್ಲೆಗಳಿಗೆ ಕುಡಿಯುವ ನೀರಿಗೆಂದೇ 50 ಲಕ್ಷ ಮೀಸಲಿರಿಸಲಾಗಿದೆ ಎಂದು ಪ್ರಕಟಿಸಿದ್ದಾರೆ. ಆದರೆ ಕೊರತೆಯ ಪ್ರಮಾಣಕ್ಕೆ ಹೋಲಿಸಿದರೆ ಇದೆಷ್ಟೂ ಸಾಲದು. ಈಗ ತಕ್ಷಣದಲ್ಲೇ 43 ಕೋಟಿ ರೂಪಾಯಿಗಳು ಬಿಡುಗಡೆಯಾಗಬೇಕೆಂದು ಜಿಲ್ಲಾಧಿಕಾರಿಯವರು ವರದಿ ಕಳಿಸಿದ್ದಾರೆ. ಅದೇನಿದ್ದರೂ ಇದು ಕೇವಲ ತತ್ಕಾಲಿಕವಾದ ಶಮನ. ಇದರಲ್ಲಿಯೂ ಜಡತೆ ಆವರಿಸಿಕೊಂಡು, ಜಾರಿಯಾಗುವುದು ದುಸ್ತರ ಸ್ಥಿತಿ. ಮೇಲಾಗಿ ಯಥಾರೀತಿ ಸೋರಿಕೆ. ಂದರೆ ಜನತೆಯ ಈ ಸಮಸ್ಯೆಗಳು ಪರಿಹಾರ ಕಾಣಲು ಪ್ರಯಾಸ ಪಡಬೇಕಾದ ಸ್ಥಿತಿ. ಆದ್ದರಿಂದ ಸಮಸ್ಯೆ ತೀವ್ರವಾಗಿ, ಪ್ರತಿಭಟನೆ ನಡೆಸಿದ ನಂತರವೇ ಗಡಬಡಿಸುವ ಮೊದಲೇ ಇದಕ್ಕೆ ಒಂದು ಶಾಶ್ವತ ಯೋಜನೆ ರೂಪಿಸಿ ನೀರಿನ ಬವಣೆ ಇತ್ಯರ್ಥಪಡಿಸಬಾರದೇಕೆ? ಮೂಲಸೌಲಭ್ಯದ ಕುರಿತು ಮಾತನಾಡುವ ಸರ್ಕಾರ ಇದನ್ನು ಮೂಲಭೂತ ಪ್ರಶ್ನೆಯೆಂದು ಗಣಿಸಿಯೇ ಇಲ್ಲ. ಸರ್ಕಾರ, ಸ್ಥಳೀಯ ಸಂಸ್ಥೆಗಳು ಶಾಶ್ವತ ಪರಿಹಾರದತ್ತ ಕ್ರಮ ವಹಿಸಬೇಕು. ಬಹುದೊಡ್ಡ ಗಡಿಗೆಯ ತಳದಲ್ಲಿದ್ದ ಬೊಗಸೆ ನೀರಿಗಾಗಿ ಕಲ್ಲು ತುಂಬಿ ನೀರು ಕುಡಿದು ಹಾಕಿದ ಬುದ್ಧಿವಂತ ಕಾಗೆಯ ಕಥೆಗಳಿಗೆ ಪೂರ್ಣವಿರಾಮ ಹಾಕಬೇಕು.

ಸಿನಿಮಾ

ನಾನು ಮೆಚ್ಚಿದ ಹುಡುಗಿ



ಬಸರಿ ಕಟ್ಟೆ ಸರಿಯಾದ ಸಾರಿಗೆ ಸಂಪರ್ಕವಿಲ್ಲದ ಒಂದು ಕುಗ್ರಾಮ. ಸುತ್ತ ನೀರು, ದೋಣಿಯೇ ಸಂಪರ್ಕ ಸಾಧನ. ಪಾಳು ಬಿದ್ದ ಮನೆಯಂತಿರುವ ಹಳ್ಳಿ ಪ್ರೌಢಶಾಲೆ. ಪಾಠ ಮಾಡದ ಶಿಕ್ಷಕರು ಈಗಲೋ-ಆಗಲೋ ಬೀಳುವಂತಿರುವ ಬೋರ್ಡ್. ಇಂತಹ ಶಾಲೆಗೆ ವಿದ್ಯಾರ್ಥಿಗಳಲ್ಲಿನ ಪ್ರತಿಭೆಯನ್ನು ಗುರುತಿಸಿ ಪ್ರೋತ್ಸಾಹಿಸುವ ಉತ್ಸಾಹಿ ಹೆಡ್‌ಮಾಸ್ಟರರೆಬ್ಬರು ಬರುತ್ತಾರೆ. ತನ್ನ ಗೆಳೆಯರೊಂದಿಗೆ ಕೂಡಿ ಇತರರ ಸೈಕಲ್ ಕದ್ದು ತುಳಿಯುವುದು ಇತ್ಯಾದಿ ತುಂಟಾಟ ಮಾಡಿಕೊಂಡಿದ್ದ ಪುಟ್ಟು(ಧ್ಯಾನ್) ಇಂಪಾಗಿ ಕೊಳಲು ನುಡಿಸುತ್ತಾನೆಂದು ಗೊತ್ತಾದಾಗ ಅದನ್ನು ಪ್ರೋತ್ಸಾಹಿಸುತ್ತಾರೆ.

ಭಾರತದ ಸಂಸ್ಕೃತಿಯನ್ನು ಅರಿಯಲು ಒಂದೆರಡು ಭಾರಿ ಭಾರತಕ್ಕೆ ಭೇಟಿ ನೀಡಿದ್ದ ಅಮೆರಿಕದ ಮಹಿಳೆ 'ಸೂಸಾನ್' ಳ ಆಸಕ್ತಿಯಂತೆ ಸಾಂಸ್ಕೃತಿಕ ವಿನಿಮಯ ಕಾರ್ಯಕ್ರಮ ಅಂಗವಾಗಿ ಪುಟ್ಟು ಅಮೆರಿಕಾದಲ್ಲಿ ಒಂದು ವರ್ಷದ ಅಧ್ಯಯನಕ್ಕೆ ಆಯ್ಕೆಯಾಗಲು ಹೆಡ್‌ಮಾಸ್ಟರ್ ಸಹಾಯ ಮಾಡುತ್ತಾರೆ. ಅಮೆರಿಕಾಗೆ ಬಂದ ಪುಟ್ಟ ಎಂದಿನಂತೆ ಕದ್ದು ಸೈಕಲ್ ತುಳಿಯುತ್ತಾನೆ. ತನ್ನ ಟೀಚರ್‌ಗೆ ಡಿಕ್ಕಿ ಹೊಡೆದು ಬಚ್ಚಿಟ್ಟುಕೊಳ್ಳುತ್ತಾನೆ. ಸೈಕಲ್ ಒಡಗಿ 'ಚಿನ್ನು' ಕನ್ನಡತಿ. ಅವಳ ಮೇಲೆ ಅಪಾದನೆ. ನಂತರ ಸಿಕ್ಕಿ ಬೀಳುತ್ತಾನೆ, ಹದಿನಾರರ ಹರೆಯದ ಈ ಕನ್ನಡತಿಯ ಪ್ರೀತಿಯಲ್ಲಿ.

ಅಪ್ಪ ಅನಿವಾಸಿ ಭಾರತೀಯ ಸಮಾಜದ ಮುಂದಾಳು. ಎಂದಿನಂತೆ ಜಂಭ-ಒಣ ಪ್ರತಿಷ್ಠೆ ಭಾರತೀಯ ಸಂಸ್ಕೃತಿಯ ಬಗೆಗೆ ಭಾರಿ ಹೆಮ್ಮೆ ಪಡುವವನು. ರಾಮಾಯಣ-ಮಹಾಭಾರತ-ಭಗವದ್ಗೀತೆ ಎಲ್ಲವನ್ನು ಅರೆದು ಕುಡಿದಿದ್ದೇನೆ ಎನ್ನುವವನು. ಮಗಳು ಭರತ ನಾಟ್ಯ-ಶಾಸ್ತ್ರೀಯ ಸಂಗೀತ ಕಲಿಯಬೇಕೆಂದು ಬಯಸುತ್ತಾನೆ. ಮತ್ತು ಇವೇ ಭಾರತೀಯ ಸಂಸ್ಕೃತಿ ಎಂದುಕೊಂಡಿದ್ದಾನೆ.

ಪುಟ್ಟು 'ಮೂಡಲ್ ಕುಣಿಗಲ್ ಕೆರೆ ನೋಡೋರ್ಗೊಂದ್ ಐಭೋಗ ಮೂಡಿ ಬತ್ತಾನೆ ಚಂದಿರಾಮ' ಎಂದು ಜಾನಪದ ಹಾಡನ್ನು ಹಾಡುತ್ತಾನೆ. ಚಿನ್ನು ಅದನ್ನು ಮೆಚ್ಚುತ್ತಾಳೆ. ಅದನ್ನು ಗುನುಗುತ್ತಾಳೆ. ಅಪ್ಪನಿಗೆ ಅದರ ಅರ್ಥಗೊತ್ತಿಲ್ಲ. ಮಗಳು ಅರ್ಥ ಕೇಳಿದರೆ ಹಳ್ಳಿ ಗಮಾರರು ಬರೆದದ್ದಕ್ಕೆ ಅರ್ಥ ಇರುತ್ತದೆಯೇ? ಎನ್ನುತ್ತಾನೆ.

ಚಿನ್ನು-ಪುಟ್ಟು ಸ್ನೇಹ ಪ್ರೇಮವಾಗುತ್ತದೆ. ಚಿನ್ನುವಿನ ಕಾರಿನ ಮೇಲೆ ಪುಟ್ಟುವಿನ ಸೈಕಲ್ ಹೇರಿಕೊಂಡು ಊರು ತಿರುಗುತ್ತಾರೆ.

ದೂರದ ಊರಿನಲ್ಲಿ ಮಗ ಏನಾಗುವನೋ ಎಂಬ ಆತಂಕದಲ್ಲೇ ಮಗನನ್ನು ಅಮೆರಿಕೆಗೆ ಕಳಿಸಿದ ತಾಯಿಗೆ ಪುಟ್ಟು ವಾಪಸ್ ಬರುವುದೇ ಇಲ್ಲ ಎಂದು ಬೆದರಿಸುತ್ತಾರೆ ಆಕೆಯ ಗಂಡ ಮತ್ತು ನಾದಿನಿ. ಆಕೆಯ ಗಂಡ ಮದುವೆ ದಳ್ಳಾಲಿ. ತನ್ನ ಅಕ್ಕನ ಹಂಗಿನಲ್ಲಿರುವವನು. ಅಕ್ಕನ ಮಗಳು ಗೌರಿಯನ್ನು ಪುಟ್ಟುವಿಗೆ ಮದುವೆಮಾಡಬೇಕೆಂದು ಅವರ ಯೋಚನೆ. ಪುಟ್ಟುನ ಅಮ್ಮನಿಗೆ ಮಾನಸಿಕ ಆಘಾತವಾಗುತ್ತದೆ.

ಪುಟ್ಟು-ಚಿನ್ನು ಪ್ರೇಮವನ್ನು ಕತ್ತರಿಸಿ ಹಾಕಲು ಚಿನ್ನುವನ್ನು ಯಾರಿಗೂ ಗೊತ್ತಿಲ್ಲದಂತೆ ದೂರದ ಊರಿಗೆ ಕರೆದೊಯ್ಯುತ್ತಾರೆ ಅವಳ ಅಪ್ಪ ಅಮ್ಮ. ದಾರಿಯಲ್ಲಿ ಪರಾರಿಯಾದ ಚಿನ್ನು, ಪುಟ್ಟ ಜೊತೆ ಸೇರಿಕೊಂಡು ರಭಸವಾಗಿ ಹರಿಯುವ ನದಿಯಲ್ಲಿ ದೋಣಿ ನಡೆಸುವ ಸಾಹಸ ಮಾಡಲು ಹೋಗಿ ಅಪಘಾತವಾಗಿ ಅಪ್ಪ ಅಮ್ಮನಿಗೆ ಸಿಕ್ಕಿ ಬೀಳುತ್ತಾಳೆ ಚಿನ್ನು. ಪುಟ್ಟು ತನ್ನ ಅಮ್ಮನ ಆರೋಗ್ಯದ ಸುದ್ದಿ ತಿಳಿದು ಹಳ್ಳಿಗೆ ಹೋಗಬೇಕಾಗುತ್ತದೆ. ಅಮ್ಮನ ಅನಾರೋಗ್ಯದ ಸಂದರ್ಭವನ್ನೆ ಬಳಸಿ ಪುಟ್ಟುವಿನ ಅಪ್ಪ, ಅತ್ತೆ ಸೇರಿ ಸುಳ್ಳಿನ ಮೂಲಕ ಗೌರಿ ಜೊತೆ ಮದುವೆಗೆ ಒಪ್ಪಿಸಿ ಮದುವೆ ಸಿದ್ಧತೆ ನಡೆಯುತ್ತದೆ. ಅತ್ತ ಅಪ್ಪ ಅಮ್ಮನೊಂದಿಗೆ ಜಗಳ ಮಾಡಿಕೊಂಡು ಚಿನ್ನು ಮನೆ ಬಿಟ್ಟು ಬಸರಿಕಟ್ಟೆಗೆ ಬರುತ್ತಾಳೆ.

ಇಕ್ಕಟ್ಟಿನಲ್ಲಿ ಸಿಕ್ಕಿ ಇಷ್ಟವಿಲ್ಲದ ಮದುವೆಗೆ ಒಪ್ಪಿದ್ದ ಪುಟ್ಟನ ಖಿನ್ನತೆಯನ್ನು ಮದುವೆಯ ಹಿಂದಿನ ದಿನ ತಾಯಿ ಗುರುತಿಸುತ್ತಾಳೆ. ಪುಟ್ಟು-ಚಿನ್ನುವಿನ ಪ್ರೀತಿಯ ವಿಷಯ ತಿಳಿದು ಇಷ್ಟವಿಲ್ಲದ ಮದುವೆ ಬೇಡವೆಂದು ತಿಳಿಸಿ ಚಿನ್ನುವನ್ನು ಸೇರಲು ಅಮೆರಿಕಕ್ಕೆ ಹೋಗಲು ಪ್ರೋತ್ಸಾಹಿಸುತ್ತಾಳೆ. ವಿಮಾನ ನಿಲ್ದಾಣದಲ್ಲಿ

ಸಾಂಸ್ಕೃತಿಕ ವೈರುಧ್ಯಗಳನ್ನು ಮುಖಾಮುಖಿಯಾಗಿಸುವ ಸತ್ವವೇ ಸಿನಿಮಾದ ಕಥೆಗಿಲ್ಲ. ಕೊಳಲು ಊದುವ ಪ್ರತಿಭೆಯಿಂದಾಗಿ ಅಮೆರಿಕಕ್ಕೆ ಬರುವ ಪುಟ್ಟು ಅಮೇರಿಕೆಯಲ್ಲಿ ಬಹುತೇಕ ಕೊಳಲನ್ನು ಮರೆತಂತಾಗುತ್ತದೆ.

ಪ್ರೇಮಿಗಳು ಒಂದಾಗುತ್ತಾರೆ. ಇದು ಸಿನಿಮಾದ ಕಥೆ.

ಚಿತ್ರದ ಕುರಿತ ಪ್ರಚಾರ ಹಾಗೂ ಚಿತ್ರದ ಆರಂಭ ನೋಡಿದರೆ ಚಿತ್ರದಲ್ಲಿ ಭಾರತೀಯ ಸಂಸ್ಕೃತಿ-ಪಾಶ್ಚಿಮಾತ್ಯ ಸಂಸ್ಕೃತಿಯ ನಡುವಿನ ವೈರುಧ್ಯಗಳ ಮುಖಾಮುಖಿ ನಡೆಯಬಹುದೆಂಬ ನಿರೀಕ್ಷೆ ಮೂಡಿಸುತ್ತದೆ. 'ಶಿಕ್ಷಣ ಎಂದರೆ ಕೇವಲ ಪುಸ್ತಕ ಓದುವುದಲ್ಲ, ಕುಣಿಯುವುದು, ಹಾಡುವುದು, ಕೊಳಲು ನುಡಿಸುವುದು, ಈಜುವುದು, ಮೀನು ಹಿಡಿಯುವುದು, ಎಲ್ಲವೂ ಶಿಕ್ಷಣದ ಭಾಗ. ಬನ್ನಿ ನಿಮ್ಮೊಂದಿಗೆ ನಾನು ಆಡಲು ಬರುತ್ತೇನೆ" ಎನ್ನುವ ಹೈಸ್ಕೂಲ್ ಹೆಡ್‌ಮಾಸ್ಟರ್ ಮಾತುಗಳನ್ನು ಗಮನಿಸಿದಾಗ 'ಭಾರತೀಯ ಸಂಸ್ಕೃತಿ ಎಂದರೆ ರಾಮಾಯಣ -ಮಹಾಭಾರತ, ಭರತ ನಾಟ್ಯ ಮಾತ್ರ ಅಲ್ಲ, ಇಲ್ಲಿ ಶ್ರೀಮಂತವಾದ ಜನಪದ ಸಾಹಿತ್ಯ-ಸಂಸ್ಕೃತಿ ಇದೆ. ಅದೂ ಭಾರತೀಯ ಸಂಸ್ಕೃತಿಯೇ ಎನ್ನುವಾಗ ಹುಟ್ಟುವ ನಿರೀಕ್ಷೆ ಸಿನಿಮಾ ಮುಗಿದಾಗ ಸುಳ್ಳಾಗುತ್ತದೆ. ಇಂಥ ಒಂದು ಸಾಂಸ್ಕೃತಿಕ ವೈರುಧ್ಯಗಳನ್ನು ಮುಖಾಮುಖಿಯಾಗಿಸುವ ಸತ್ವವೇ ಸಿನಿಮಾದ ಕಥೆಗಿಲ್ಲ. ಕೊಳಲು ಊದುವ ಪ್ರತಿಭೆಯಿಂದಾಗಿ ಅಮೆರಿಕಕ್ಕೆ ಬರುವ ಪುಟ್ಟು ಅಮೇರಿಕೆಯಲ್ಲಿ ಬಹುತೇಕ ಕೊಳಲನ್ನು ಮರೆತಂತಾಗುತ್ತದೆ.

ಭಾರತದ ಗ್ರಾಮೀಣ ಜೀವನವನ್ನು ಅಮೆರಿಕ ಜೀವನದೊಂದಿಗೆ ಹೋಲಿಸುವ ಹಲವು ಮಾತುಗಳು ಚಿತ್ರದಲ್ಲಿದ್ದರೂ ಚಿತ್ರದಲ್ಲಿ ಕಂಡುಬರುವ ಬಸರಿಕಟ್ಟೆಯ ಪರಿಸರದಲ್ಲಿ ನಮ್ಮ ಗ್ರಾಮೀಣ ಬದುಕಿನ ಸೊಗಡೇ ಇಲ್ಲ ಎನಿಸುತ್ತದೆ. ನಾಗತಿಹಳ್ಳಿ ಚಂದ್ರಶೇಖರರಂತಹ ನಿರ್ದೇಶಕರು ಇದನ್ನು ಇನ್ನಷ್ಟು ಸಮರ್ಥವಾಗಿ ಬಿಂಬಿಸುವುದು ಸಾಧ್ಯವಿತ್ತು. ಚಿತ್ರದ ನಾಯಕ ಧ್ಯಾನ್ ಅಂತು ಬಸರಿಕಟ್ಟೆಯ ಪರಿಸರದಲ್ಲೂ ಅಮೆರಿಕಾದ ಬಾಲಕನೇನೋ ಎಂಬಂತೆಯೇ ಭಾಸವಾಗುತ್ತದೆ. ಸಹಜ ಕನ್ನಡ ಮಾತನಾಡುವ, ಗ್ರಾಮೀಣ ಕಸುವಿನ ಮುಖಚರ್ಯೆವುಳ್ಳ ಕನ್ನಡದ ಹುಡುಗನೊಬ್ಬ ನಾಗತಿಹಳ್ಳಿಯವರಿಗೆ ಸಿಗಲೇ ಇಲ್ಲವೇ?

ಅಮೆರಿಕದಲ್ಲಿ ಬಿಯರ್ ಹೀರುವ, ಚಿಕನ್ ತಿನ್ನುವ ಪುರೋಹಿತ ಆಚಾರ್ಯ ಈ ಮೇಲ್, ಇಂಟರ್‌ನೆಟ್, ವೆಬ್‌ಸೈಟ್,ಮೊಬೈಲ್ ಫೋನ್ ಎಲ್ಲಾ ಆಧುನಿಕ ಸೌಲಭ್ಯಗಳನ್ನು ತಮ್ಮ ಭಕ್ತಿಯ ವ್ಯಾಪಾರಕ್ಕೆ ಬಳಸಿಕೊಳ್ಳುವವ. ಭಕ್ತಿಯ ಅಭಿವ್ಯಕ್ತಿ ಪಡೆದುಕೊಳ್ಳುತ್ತಿರುವ ರೂಪವನ್ನು ಪರಿಣಾಮಕಾರಿಯಾಗಿ ಗೇಲಿ ಮಾಡಲಾಗಿದೆ.

ಚಿತ್ರದಲ್ಲಿ ನಾಯಕಿ ಅಭಿನಯದಲ್ಲಿ ಲವಲವಿಕೆ ಇದೆ. ಭವ್ಯ ಅಭಿನಯ ಪರವಾಗಿಲ್ಲ ಎನ್ನುವುದು ಬಿಟ್ಟರೆ ಅಭಿನಯದ ಬಗೆಗೆ ಭಾರಿ ಹೇಳುವಂತದ್ದು ಏನೂ ಇಲ್ಲ. ಅಂಥ ಸವಾಲೆಸೆಯುವಂತಹ ಪಾತ್ರ-ಸನ್ನಿವೇಶ ಸಹ ಚಿತ್ರದಲ್ಲಿಲ್ಲ. ಪ್ರಚಾರಗಳನ್ನು ಕೇಳಿ ಚಿತ್ರದ ಛಾಯಾಗ್ರಹಣ ಹಾಗೂ ಅಮೆರಿಕೆಯ ಚಿತ್ರಣದ ಬಗೆಗೆ ನಿರೀಕ್ಷೆ ಇಟ್ಟುಕೊಂಡವರಿಗೆ ಇಷ್ಟೇನಾ ಅನಿಸುತ್ತದೆ. 'ಕಾರ್ ಕಾರ್' ಎಂಬ ಹಾಡು ಸಾಕಷ್ಟು ಮಟ್ಟಿಗೆ ಜನ ಮೆಚ್ಚುವಂತಿದೆ. ಹಾಡಿನಲ್ಲಿ ನಮ್ಮ ದೇಶದ ಸಾರಿಗೆ ವ್ಯವಸ್ಥೆ ಅಮೆರಿಕಾದ ಸಾರಿಗೆ ವ್ಯವಸ್ಥೆಗಳ ತುಲನಾತ್ಮಕ ಚಿತ್ರ ಕೊಡುವ ಕಲ್ಪನೆ ಸೊಗಸಾಗಿದೆ. ಇಡೀ ಅಮೆರಿಕಾವೇ ಕಾರಿಗಾಗಿ ಸಿದ್ದಪಡಿಸಿದಂತಿದೆ ಎಂಬುದನ್ನು ದೃಢಪಡಿಸುತ್ತದೆ. ಉಳಿದಂತೆ ಯಾವ ಹಾಡುಗಳು ನೆನಪಿನಲ್ಲುಳಿಯುವಂತೆ ಇಲ್ಲ. ಅಲ್ಲಲ್ಲಿ ಸಂಭಾಷಣೆ ಚುರುಕಾಗಿದೆ.

ಬಸರಿ ಕಟ್ಟೆ ಹೈಸ್ಕೂಲ್‌ನಲ್ಲಿ ತರಗತಿಯಲ್ಲಿ ಕುಳಿತಿದ್ದ ಪುಟ್ಟು ಮತ್ತು ಆತನ ಸ್ನೇಹಿತರೆಲ್ಲಾ ಕಾಲೇಜು ಹುಡುಗರಿಗಿಂತ ದೊಡ್ಡವರು ಅನಿಸಿದರೆ ಇಂಥ ಪ್ರೀತಿಗೆ ಪುಟ್ಟ-ಚಿನ್ನು ಇಬ್ಬರೂ ಸಣ್ಣವರು ಎನಿಸುತ್ತದೆ. ಸಾಲು ಸಾಲಾಗಿ ಬಿಡುಗಡೆಯಾಗುತ್ತಿರುವ ಕೆಟ್ಟ ಕೆಟ್ಟ ಚಿತ್ರಗಳಿಗೆ ಹೋಲಿಸಿಕೊಂಡರೆ ಇದು ಒಂದು ಕೆಟ್ಟ ಚಿತ್ರ ಎನ್ನಲಾಗುವುದಿಲ್ಲ. ಆದರೆ 'ಅಮೆರಿಕಾ ಅಮೆರಿಕಾ ಚಿತ್ರ ತಂಡದವರಿಂದ' ಎಂಬ ಪ್ರಚಾರ ನೋಡಿ ಹೋದವರಿಗೆ ಆ ಚಿತ್ರವು ನೀಡುವ ಗಾಢ ಅನುಭವವನ್ನು ಈ ಚಿತ್ರ ನೀಡುವುದಿಲ್ಲ. ಮತ್ತು ಈ 'ಪ್ರೀತಿಯ ಹುಡುಗಿ'ಗಿಂತ ಚಿತ್ರದ ಮೂಲ ಕಥೆಯಾದ 'ಮಲೆನಾಡ ಹುಡುಗಿ ಬಯಲು ಸೀಮೆ ಹುಡುಗ'ನೆ ಮನಸ್ಸಿಗೆ ಹತ್ತಿರವಾಗುತ್ತಾನೆ.

ಆರ್.ರಾಮಕೃಷ್ಣ



ಕನಿಷ್ಟ ಕೂಲಿಗಾಗಿ, ಅಂಗನವಾಡಿಗಳನ್ನು ಪಂಚಾಯತಿಗಳನ್ನು ಒಪ್ಪಿಸುವುದನ್ನು ವಿರೋಧಿಸಿ ರಾಜಧಾನಿಯಲ್ಲಿ ಅಣಿನೆರೆದ ಸಂಕಟಕಗಳ ಸಾಗರ

PRB DECR 319-79/79 AIKYARANGA WEEKLY Reg. No. 17015/64 KRNM/BGS-405 MAG (2)

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಎಸ್.ಸೂರ್ಯನಾರಾಯಣ ರಾವ್
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ.12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು-1

Printed & Published by Communist Party of India(Marxist), Karnataka State Committee. Editor : S.Y.GURUSHANTH